ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ
ಸಂಪುಟ 3 ಸಂಚಿಕೆ 21
ರೂ. 5/-
ಮೇ 24, 2009
ಕನ್ನಡ ವಾರಪತ್ರಿಕೆ

15ನೇ ಲೋಕಸಭಾ ಚುನಾವಣೆ





ಅಧಿಕಾರದತ್ತ ಕಾಂಗ್ರೆಸ್ ಮುನ್ನಡೆ ಎಡಪಕ್ಷಗಳಿಗೆ ಏಕೆ ಹಿನ್ನಡೆ ?

ಕರ್ನಾಟಕ : ಬಿಜೆಪಿ ಅನೈತಿಕತೆಯ ಎದುರು ಕಾಂಗ್ರೆಸ್‌ನ ಸೋಲು



ಜನಗಳಿಗೆ ಬೇಕಿದೆ ತುರ್ತು ಪರಿಹಾರ

ಬಿಬಿಎಂಪಿ : ಅಭಿವೃದ್ಧಿ ಮಂತ್ರ ಚುನಾವಣೆ ಮುಂದೂಡಿದ ತಂತ್ರ



ಪ್ರಭಾಕರನ್ ಸಾವು !? ಮುಗಿಯದ ಲಂಕಾ-ತಮಿಳರ ಬವಣೆ



ಹಿಂದೆ ವೃತ್ತಿಶಿಕ್ಷಣ ಬಿಕ್ಕಟ್ಟಿನ ಸಂದರ್ಭದಲ್ಲಿ ಆಡಳಿತ ಮಂಡಳಿ ವಿರುದ್ಧ ಕಿರುಚಾಡುತ್ತಿದ್ದ ಎಬಿವಿಪಿ ಮುಖಂಡರೇ ಈಗ ಬಿಜೆಪಿ ರಾಜ್ಯ ಸರ್ಕಾರದಲ್ಲಿ ಶಿಕ್ಷಣ ಮಂತ್ರಿಗಳಾಗಿದ್ದಾರೆ. ಆದರೆ ವಿದ್ಯಾರ್ಥಿ ಸಮುದಾಯಕ್ಕೆ ದ್ರೋಹ ಬಗೆದು ಆಡಳಿತ ಮಂಡಳಿಯ ಪಾಲು ಹೆಚ್ಚಿಸುವ ಕೆಲಸವನ್ನು ಇವರು ಯಾವುದೇ ನಾಚಿಕೆಯಿಲ್ಲದೆ ಕೈಗೊಂಡಿದ್ದಾರೆ. ಶಿಕ್ಷಣ ಪ್ರೇಮಿಗಳು ಇದನ್ನು ಗಮನಿಸೇಕಿದೆ.

ವೃತ್ತಿ ಶಿಕ್ಷಣ ಬಿಕ್ಕಟ್ಟು

ಬಯಲಾದ ಬಿಜೆಪಿ ಬಣ್ಣ

ಹೆಚ್.ಆರ್. ನವೀನ್‌ಕುಮಾರ್


ಇತ್ತೀಚೆಗೆ ಹೊಸದೊಂದು ಸುದ್ದಿ ಕೇಳಿಬಂತು. ಐಪಿಎಲ್ 20:20 ಕ್ರಿಕೆಟ್ ನೋಡುತ್ತಿರುವ ಈ ಸಂದರ್ಭದಲ್ಲಿ 50:50 ಯ ಮಾತುಕತೆ ಆಶ್ಚರ್ಯವಾಯಿತೆ. ಇದು ಯಾವ ಅಧಿಕಾರದ ಹೊಂದಾಣಿಕೆಯೂ ಅಲ್ಲ ಬದಲಾಗಿ ರಾಜ್ಯದಲ್ಲಿ ಖಾಸಗಿ ವೃತ್ತಿಶಿಕ್ಷಣ ಸಂಸ್ಥೆಗಳು (ಕಾಮೆಡ್.ಕೆ) ಮತ್ತು ಸರ್ಕಾರದ ನಡುವೆ ನಡೆದ ಎಂಜಿನಿಯರಿಂಗ್ ಸೀಟು ಒಪ್ಪಂದ. 2007 ಮತ್ತು 2008ನೇ ಸಾಲಿನಲ್ಲಿ ಸರ್ಕಾರಿ ಸೀಟು ಶೇ.55 ಮತ್ತು ಖಾಸಗಿ ಸೀಟು ಶೇ.45 ಇತ್ತು. ಆದರೆ ಇಂದಿನ ಬಿಜೆಪಿ ಸರ್ಕಾರ ಸರ್ಕಾರಿ ಕೋಟಾದ ಶೇ.5ರಷ್ಟು ಸೀಟುಗಳನ್ನು ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳಿಗೆ ಬಿಟ್ಟುಕೊಡುವ ಮೂಲಕ ಸುಮಾರು 2750 ಸೀಟುಗಳು ಖಾಸಗಿಯವರ ಪಾಲಾಗಿವೆ.


ಇಂತಹ ಮಹತ್ತರ ತೀರ್ಮಾನದ ಸಾರಥ್ಯವನ್ನು ವಹಿಸಿದ್ದವರು ಬೇರೆ ಯಾರೂ ಅಲ್ಲ. ಕಳೆದ 5 ವರ್ಷಗಳ ಹಿಂದೆ ಸಿ.ಇ.ಟಿ ಸಮಸ್ಯೆ ವಿರುದ್ಧ ಹೋರಾಟದ ನಾಟಕವನ್ನಾಗಿ ಖಾಸಗೀ ಶಿಕ್ಷಣ ಸಂಸ್ಥೆಗಳನ್ನು ತರಾಟೆಗೆ ತೆಗೆದುಕೊಂಡಿದ್ದ ಎ.ಬಿ.ವಿ.ಪಿ. ಮುಖಂಡರೇ ಈಗ ರಾಜ್ಯದ ಶಿಕ್ಷಣ ಸಚಿವರುಗಳಾಗಿದ್ದಾರೆ. ಉನ್ನತ ಶಿಕ್ಷಣ ಸಚಿವ ಅರವಿಂದ್ ಲಿಂಬಾವಳಿ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ರಾಮಚಂದ್ರೇಗೌಡ ಅಧಿಕಾರ ಇಲ್ಲದಿದ್ದಾಗ ಅವರು ಆಡಿದ ಮಾತುಗಳು ಅಧಿಕಾರದಲ್ಲಿರುವಾಗ ಎಲ್ಲಿ ಹೋದವು' ಎಂಬ ಪ್ರಶ್ನೆ ಎಲ್ಲರನ್ನೂ ಕಾಡುತ್ತಿದೆ. ಇದಕ್ಕೆ ಇವರೇ ಉತ್ತರ ನೀಡಬೇಕು.

ಇತ್ತೀಚೆಗೆ ದೇಶದಲ್ಲಿ ವೃತ್ತಿಶಿಕ್ಷಣ ಬಿಕ್ಕಟ್ಟು ತೀವ್ರ ಗೊಳ್ಳುತ್ತಿದ್ದು ಜಾಗತೀಕರಣ ಮತ್ತು ಖಾಸಗೀಕರಣಕ್ಕೆ ಪೂರಕವಾದ ತೀರ್ಪುಗಳನ್ನು ನ್ಯಾಯಾಲಯಗಳು ನೀಡುತ್ತಿದ್ದು ಜೊತೆಗೆ ಶಿಕ್ಷಣ ನೀಡುವ ತನ್ನ ಜವಾಬ್ದಾರಿಯಿಂದ ಸಂಪೂರ್ಣ ಹಿಂದೆ ಸರಿದಿರುವ ಸರ್ಕಾರಗಳ ನೀತಿಗಳಿಂದಾಗಿ ಇಂದು ಬಡ, ಪ್ರತಿಭಾವಂತ ವಿದ್ಯಾರ್ಥಿಗಳು ಉನ್ನತ, ವೃತ್ತಿಪರ ಶಿಕ್ಷಣವನ್ನು ಪಡೆಯುವ ಕನಸನ್ನು ಕಾಣುವುದೂ ದುಬಾರಿಯಾಗಿದೆ?

ಬಿಜೆಪಿಯಿಂದ ಸಾಮಾಜಿಕ ನ್ಯಾಯಕ್ಕೆ ತಿಲಾಂಜಲಿ

ಸಾಮಾಜಿಕ ನ್ಯಾಯದ ಬಗ್ಗೆ ಬೊಗಳೆ ಹೊಡೆಯುವ ಬಿಜೆಪಿ ತನಗೆ ಅವಕಾಶಗಳು ಸಿಕ್ಕಾಗೆಲ್ಲ ಸಾಮಾಜಿಕ ನ್ಯಾಯವನ್ನು ತಿರಸ್ಕರಿಸುವ ನೀತಿಗಳನ್ನೇ ಅನುಸರಿಸಿಕೊಂಡು ಬಂದಿದೆ. ಉದಾ : ಟಿ.ಎಂ.ಎ.ಪೈ ಪ್ರಕರಣದ ತೀರ್ಪು ಹೊರಬಂದು ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಗಳ ಮೇಲೆ ಸರ್ಕಾರದ ಯಾವುದೇ ನಿಯಂತ್ರಣವಿರಬಾರದು ಎಂದು ಹೇಳುವ ಮೂಲಕ ಚುನಾಯಿತ ಸರ್ಕಾರಗಳ ಸಂವಿಧಾನಬದ್ಧ ಅಧಿಕಾರವನ್ನೇ ಪ್ರಶ್ನೆ ಮಾಡಿದಾಗ ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿದ್ದ ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರ ಇದರ ಬಗ್ಗೆ ಯಾವುದೇ ಕ್ರಮವನ್ನು ಕೈಗೊಳ್ಳದೆ ಸಾಮಾಜಿಕ ನ್ಯಾಯಕ್ಕೆ ತಿಲಾಂಜಲಿ ಇಟ್ಟಿತು.





ಆಡಳಿತ ಮಂಡಳಿಗೆ ಅನುಕೂಲ ಮಾಡಿಕೊಟ್ಟ ಸಂತೋಷದಲ್ಲಿ ಮಾಜಿ ಎಬಿವಿಪಿಗಳು - ಹಾಲಿ ಮಂತ್ರಿಗಳು

ಜೊತೆಗೆ ರಾಜ್ಯದಲ್ಲಿ ಬಿಜೆಪಿ ಸಮ್ಮಿಶ್ರ ಸರ್ಕಾರವಿದ್ದ ಸಂದರ್ಭದಲ್ಲಿ "ಕರ್ನಾಟಕ ವೃತ್ತಿಶಿಕ್ಷಣ ಸಂಸ್ಥೆಗಳ ವಿಧೇಯಕ 2006" ನ್ನು ಜಾರಿಗೆ ತರುವ ಮೂಲಕ ಉಚಿತ ಸೀಟು ನೀಡುವ ಪರಿಕಲ್ಪನೆ ಕೈಬಿಟ್ಟು ಖಾಸಗಿಯವರಿಗೆ ಸಿ.ಇ.ಟಿ. ಗೆ ಅವಕಾಶ ಮಾಡಿಕೊಟ್ಟು, ಏಕರೂಪ ಶುಲ್ಕ ನೀತಿ ಜಾರಿಗೆ ತಂದು, ವಿದ್ಯಾರ್ಥಿಗಳಿಗೆ ಶುಲ್ಕ ಭರಿಸುವ ನೆಪದಲ್ಲಿ ಸರ್ಕಾರಿ ಖಜಾನೆಯ ದುಡ್ಡನ್ನು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಹರಿಯುವಂತೆ ಮಾಡಿತು. ಶುಲ್ಕಗಳನ್ನು ಕಡಿಮೆ ಮಾಡುವುದರ ಬದಲಾಗಿ ದುಬಾರಿ ಶುಲ್ಕ ನೀತಿಯನ್ನು ಮುಂದುವರೆಸುವ ಮೂಲಕ ಖಾಸಗಿ ಶಿಕ್ಷಣ ಸಂಸ್ಥೆಗಳ ಪರವಾಗಿ ಬಡ, ಪ್ರತಿಭಾನ್ವಿತ ವಿದ್ಯಾರ್ಥಿ ವಿರೋಧಿ ನೀತಿಗಳನ್ನು ಜಾರಿಗೆ ತರಲಾಯಿತು.

ಪ್ರತಿಭಟನೆಯ ನಾಟಕ ಮಾಡುತ್ತಿರುವ ಎ.ಬಿ.ವಿ.ಪಿ.

ತಮ್ಮ ಸಂಘಟನೆಯ ಮುಖಂಡರೇ ರಾಜ್ಯ ಸರ್ಕಾರದ ಶಿಕ್ಷಣ ಸಚಿವರುಗಳಾಗಿರುವಾಗ ತಮ್ಮ ಹೋರಾಟದ ಬೇಡಿಕೆಗಳನ್ನು ಸುಲಭವಾಗಿ ಸರ್ಕಾರದ ಮೂಲಕ ತೀರ್ಮಾನ ಮಾಡಿಸುವ ಎಲ್ಲ ಅವಕಾಶಗಳಿದ್ದರೂ ಆ ನಿಟ್ಟಿನಲ್ಲಿ ಗಮನ ಹರಿಸದ ಎ.ಬಿ.ವಿ.ಪಿ ಪ್ರತಿಭಟನೆಯ ನಾಟಕವಾಡ ಲಾರಂಭಿಸಿದೆ. ಇದರ ಮೂಲಕ ಜನರ ಗಮನವನ್ನು ಬೇರೆಡೆ ಸೆಳೆದು ದಾರಿ ತಪ್ಪಿಸಲು ಮುಂದಾಗಿದೆ. ಇತ್ತೀಚೆಗೆ ಗುಲ್ಬರ್ಗಾದಲ್ಲಿ ಎ.ಬಿ.ವಿ.ಪಿ ಕಾರ್ಯಕರ್ತರು ವಿಧಾನಸಭಾಧ್ಯಕ್ಷರಿಗೆ ಮುತ್ತಿಗೆ ಹಾಕಿದ್ದಾರೆ. ಆ ಸಂದರ್ಭದಲ್ಲಿ ಸಭಾಧ್ಯಕ್ಷರ ಬೆಂಗಾವಲು ಪಡೆಯು ಕನಿಷ್ಠ ಒಬ್ಬ ಪೊಲೀಸ್ ಪೇದೆಯಾಗಲಿ ಇರಲಿಲ್ಲ. ದಿಗ್ಬಂಧನ ವಿಧಿಸಿದ ಯಾರನ್ನೂ ಬಂಧಿಸಲಿಲ್ಲ. ಆದರೆ ಬೇರೆಯವರು ಶಾಂತಿಯುತ ಪ್ರತಿಭಟನೆ ನಡೆಸಿದರೂ ಅವರ ಮೇಲೆ ಲಾಠಿಪ್ರಹಾರ ನಡೆಸಿ ಕೇಸುಗಳನ್ನು ದಾಖಲಿಸುವುದು ನಡೆದಿದೆ. ಇದು "ನಾನು ಹೊಡೆದ ಹಾಗೆ ಮಾಡುತ್ತೇನೆ. ನೀನು ಅತ್ತ ಹಾಗೆ ಮಾಡು" ಎಂಬ ಕತೆಯಂತಿದೆ. ಇದುವರೆಗೂ ಶಾಶ್ವತ ಪರಿಹಾರದ ಬಗ್ಗೆ ಮಾತನಾಡದ ಇವರು ಸೀಟು ಹಂಚಿಕೆ 60:40 ರ ಪ್ರಮಾಣದಲ್ಲಿರಬೇಕೆಂದು ಒತ್ತಾಯಿಸುತ್ತಿರುವುದನ್ನು ನೋಡಿದರೆ ಇವರ ನ ಗುಣ ಬಯಲಾಗುತ್ತದೆ.

ಶಾಶ್ವತ ಪರಿಹಾರ ಮುಖ್ಯ

ವೃತ್ತಿಶಿಕ್ಷಣ ಬಿಕ್ಕಟ್ಟಿಗೆ ಮುಖ್ಯ ಕಾರಣ ಮೆಡಿಕಲ್ ಮತ್ತು ಎಂಜಿನಿಯರಿಂಗ್ ವಿಭಾಗದಲ್ಲಿ ಸರ್ಕಾರಿ ಕಾಲೇಜುಗಳು ಬೆರಳೆಣಿಕೆಯಷ್ಟಿದ್ದರೆ ಖಾಸಗಿ ಕಾಲೇಜುಗಳು ನಾಯಿಕೊಡೆಗಳಂತೆ ಬೆಳೆದಿರುವುದು. ಹಾಗಾಗಿ ವೃತ್ತಿಶಿಕ್ಷಣದ ಸಮಸ್ಯೆಯ ಶಾಶ್ವತ ಪರಿಹಾರಕ್ಕೆ ಸರ್ಕಾರಿ ಕಾಲೇಜುಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಶುಲ್ಕಗಳನ್ನು ಕಡಿತಗೊಳಿಸಬೇಕು. ಸೀಟು ಹಂಚಿಕೆ ಅನುಪಾತ ಕನಿಷ್ಠ 75:25 ಇರಬೇಕು (75ನೇ ಸರ್ಕಾರಿ ಕೋಟಾ ಶೇ.25 ಆಡಳಿತ ಮಂಡಳಿ ಕೋಟಾ) ಮತ್ತು ಮುಖ್ಯವಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸಿ ಪ್ರವೇಶ ಮತ್ತು ಶುಲ್ಕ ನೀತಿ ರೂಪಿಸಲು ಅನುಕೂಲವಾಗುವಂತಹ ಕೇಂದ್ರೀಯ ಶಾಸನವನ್ನು ಜಾರಿಗೆ ತರಬೇಕು. ಈ ವಿಚಾರಗಳ ಬಗ್ಗೆ ಎಸ್‌ಎಫ್‌ಐ ಸಂಘಟನೆ ನಿರಂತರವಾಗಿ ಧ್ವನಿ ಎತ್ತುತ್ತಿರುವುದು ಬಿಟ್ಟರೆ ಬೇರೆಯವರ್‍ಯಾರೂ ಚಕಾರವೆತ್ತುತ್ತಿಲ್ಲ. ಬದಲಾಗಿ ಶಾಶ್ವತ ಪರಿಹಾರದ ಮಾರ್ಗೋಪಾಯಗಳನ್ನು ಜನರಿಂದ ಮರೆಮಾಚಿ, ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಪೂರಕವಾಗಿ ಎ.ಬಿ.ವಿ.ಪಿ ವರ್ತಿಸಿದರೆ ಖಾಸಗೀಕರಣಕ್ಕೆ ಕುಮ್ಮಕ್ಕು ನೀಡುವ ನೀತಿಗಳನ್ನು ಬಿ.ಜೆ.ಪಿ, ಕಾಂಗ್ರೆಸ್ ಸರ್ಕಾರಗಳು ಜಾರಿಗೆ ತರುತ್ತಿವೆ.

ಸಾಮಾಜಿಕ ನ್ಯಾಯ ಎತ್ತಿಹಿಡಿದ ಕೇರಳ ಎಡರಂಗ ಸರ್ಕಾರ

ವೃತ್ತಿಶಿಕ್ಷಣ ಬಿಕ್ಕಟ್ಟು ಕರ್ನಾಟಕಕ್ಕಿಂತ ಕೇರಳದಲ್ಲಿ ಸ್ವಲ್ಪ ಹೆಚ್ಚಾಗಿಯೇ ಇತ್ತು. ಇದರ ಪರಿಹಾರಕ್ಕಾಗಿ ಧೀರೋದ್ದಾತ ಹೋರಾಟ ನಡೆಸಿಕೊಂಡು ಬಂದು ನಂತರ ರಾಜ್ಯದ ಅಧಿಕಾರದ ಚುಕ್ಕಾಣಿ ಹಿಡಿದ ಎಡರಂಗವು ತಕ್ಷಣ ಖಾಸಗಿ ಕಾಲೇಜುಗಳ ಪ್ರವೇಶ ಮತ್ತು ಶುಲ್ಕ ನೀತಿಗಳನ್ನು ನಿಯಂತ್ರಿಸುವ ಮೂಲಕ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವೃತ್ತಿಶಿಕ್ಷಣ ಕೈಗೆಟುಕುವಂತೆ ಮಾಡಿತು. ಆದರೆ ಇದರ ವಿರುದ್ಧ ಖಾಸಗಿ ಶಿಕ್ಷಣ ಸಂಸ್ಥೆಗಳು ನ್ಯಾಯಾಲಯಕ್ಕೆ ಮೊರೆಹೋಗಿವೆ.

ನಮ್ಮ ರಾಜ್ಯದ ಶುಲ್ಕಗಳಿಗೂ, ಕೇರಳದ ಶುಲ್ಕಗಳಿಗೂ ಅಜಗಜಾಂತರ ವ್ಯತ್ಯಾಸಗಳಿವೆ. ರಾಜ್ಯದಲ್ಲಿ ಸರ್ಕಾರಿ ಕಾಲೇಜಿನಲ್ಲಿ ಮೆಡಕಲ್ ಸೀಟು ಪಡೆಯಲು 47,500 ರೂ. ಭರಿಸಬೇಕು. ಕೇರಳದಲ್ಲಿ ಇದು ಕೇವಲ 12,500 ರೂ. ಹಾಗೆ ಇಂಜಿನಿಯರಿಂಗ್ ಸರ್ಕಾರಿ ಸೀಟು ರಾಜ್ಯದಲ್ಲಿ 11,590 ರೂ. ಕೇರಳದಲ್ಲಿ 4,200 ರೂ. ಜೊತೆಗೆ ಸೀಟುಹಂಚಿಕೆ ರಾಜ್ಯದಲ್ಲಿ ಮೆಡಿಕಲ್ ಶೇ.35ರಷ್ಟು, ಸರ್ಕಾರಿ ಶೇ.65ರಷ್ಟು. ಖಾಸಗಿ (ಇದರಲ್ಲಿ ಶೇ.15 ಎನ್‌ಆರ್‌ಐ) ಕೇರಳದಲ್ಲಿ ಸರ್ಕಾರಿ ಮೆಡಿಕಲ್ ಶೇ.50 ರಷ್ಟು. ಖಾಸಗಿ ಶೇ.35ರಷ್ಟು, ಎನ್‌ಆರ್‌ಐ ಶೇ.15ರಷ್ಟು. ಇವುಗಳನ್ನು ಗಮನಿಸಿದರೆ ರಾಜ್ಯದ ಬಿಜೆಪಿಗೆ ವೃತ್ತಿಶಿಕ್ಷಣ ಬಿಕ್ಕಟ್ಟನ್ನು ಬಗೆಹರಿಸುವ ರಾಜಕೀಯ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುತ್ತದೆ. ತನಗೆ ಸಿಕ್ಕಿರುವ ರಾಜಕೀಯ ಅಧಿಕಾರವನ್ನು ಬಳಸಿ ಕಾನೂನಿನ ಪರಿಧಿಯಲ್ಲಿ ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯುವಲ್ಲಿ ಕೇರಳದ ಎಡರಂಗ ಸರ್ಕಾರ ಮುಂದಾಗಿದೆ.

ನಂಬರ್ ಒನ್

ಲೂಟಿ ಹೊಡೆವುದರಲ್ಲಿ,
ಮತದಾರರ ಓಲೈಸುವುದರಲ್ಲಿ
ಮೀರಿಸಿ ಒಬ್ಬರು ಇನ್ನೊಬ್ಬರನ್ನು
ಮಾಡಿಹರು ನಮ್ಮ ಕರ್ನಾಟಕವನ್ನು
ಮತ ಮಾರಾಟದಲ್ಲಿ ನಂ ಒನ್ನು

■ ಜಾಗೃತಿ, ರಾಯಚೂರು

ಸಂಪಾದಕೀಯ

ಚುನಾವಣೋತ್ತರ ರಾಜಕೀಯ

ಭೂ ಮಾಫಿಯಾ ಋಣ ತೀರಿಸಲು ಹೊರಟ ಬಿಜೆಪಿ ಸರ್ಕಾರ

ಲೋಕಸಭಾ ಚುನಾವಣೆಗಳು ಮುಗಿದಿವೆ. ಈಗ ಚುನಾವಣೆಗಳ ಗೆಲುವಿನ ಋಣ ತೀರಿಸುವ, ಸೋಲಿನ ಸೇಡು ತೀರಿಸುವ ಕೆಲಸ ಚುನಾವಣೆ ದಿನದಿಂದಲೇ ಆರಂಭವಾಯಿತು. ರಾಜ್ಯದ ವಿವಿಧ ಕಡೆಗಳಲ್ಲಿ ಹಲ್ಲೆಗಳು, ಹರಿಹರದ ಜೆಡಿ(ಎಸ್) ಪುರಸಭಾ ಸದಸ್ಯಳ ಗಂಡನ ಕೊಲೆ, ತುಮಕೂರು ಜಿಲ್ಲೆಯಲ್ಲಿ ದಲಿತರ ಮೇಲೆ ದೌರ್ಜನ್ಯ ಇತ್ಯಾದಿ ಬಿಜೆಪಿ ಸರ್ಕಾರ ಅಸ್ತಿತ್ವದಲ್ಲಿರುವಷ್ಟು ಕಾಲ ಪಟ್ಟಿ ಮಾಡಿಕೊಂಡು, ನೆನಪಿಸಿಕೊಂಡು ಸರ್ಕಾರ ಹಾಗೂ ಸಂಘ ಪರಿವಾರ ಸೇಡು ತೀರಿಸಿಕೊಳ್ಳುತ್ತಾರೆ.

ಋಣ ತೀರಿಸುವ ಕೆಲಸವೂ ಚುನಾವಣೆಗಳು ಮುಗಿದ ಕೂಡಲೇ ಆರಂಭವಾಗಿದೆ. ವಿಧಾನಸಭಾ ಚುನಾವಣೆಗಳು ಮುಗಿದ ಕೂಡಲೇ ಋಣ ತೀರಿಸುವ ಕೆಲಸ ಆರಂಭವಾಗಿದೆ. ಗಣಿ ಮಾಫಿಯಾ ಈ ಋಣ ತೀರಿಸುವ ಕ್ರಮಗಳಲ್ಲಿ ಸಿಂಹಪಾಲು ಪಡೆದಿತ್ತು. ಭೂ ಮಾಫಿಯಾದ ಋಣ ತೀರಿಸುವ ಕೆಲಸ ಇಷ್ಟೊಂದು ಸುಲಭವಾಗಿರಲಿಲ್ಲ. ಮುಂದೆ ಲೋಕಸಭಾ ಚುನಾವಣೆಗಳು ನಿಗದಿತವಾಗಿದ್ದರಿಂದ ರೈತರನ್ನು ಮೇಲೆ ಹಾಕಿಕೊಳ್ಳುವ ಧೈರ್ಯ ಇರಲಿಲ್ಲ. ಈಗ ಲೋಕಸಭಾ ಚುನಾವಣೆಗಳು ಮುಗಿದಿವೆ. ವಿಧಾನಸಭೆ ಹಾಗೂ ಲೋಕಸಭೆ ಚುನಾವಣೆಗಳೆರಡರಲ್ಲೂ ಅಪಾರ ಪ್ರಮಾಣದಲ್ಲಿ ಹಣ, ಮತ್ತಿತರ ಕೊಡುಗೆಗಳನ್ನು ನೀಡಿ ಮತಗಳನ್ನು ಕೊಂಡುಕೊಳ್ಳಲು ನೆರವಾದ ಭೂ ಮಾಫಿಯಾದ ಒತ್ತಡ ಹೆಚ್ಚಾಗಿದೆ. ದೊಡ್ಡ ಕೊಡುಗೆಗಳನ್ನು ಕೊಡುವ ಸೂಚನೆಯನ್ನು ಸರ್ಕಾರ ನೀಡಿದೆ.

ಲೋಕಸಭಾ ಚುನಾವಣೆ ಮುಗಿಯಿತು. ಆದರೆ ಬೆಂಗಳೂರು ಮಹಾನಗರ ಪಾಲಿಕೆಯ ಚುನಾವಣೆಗಳು ಕಾದಿವೆ. ಹೇಗೆ ಹೇಗೋ, ಹೈಕೋರ್ಟ್ ತೀರ್ಮಾನದ ವಿರುದ್ಧವಾಗಿಯೂ ಈ ಚುನಾವಣೆಗಳನ್ನು ಮುಂದೂಡಲಾಗಿತ್ತು. ಇನ್ನು ಮಾಡುವಂತಿಲ್ಲ, ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆ ಎಂದರೆ ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ಭೂ ಕಬಳಿಕೆದಾರರ ಮೆರೆದಾಟವೇ ಮೆರದಾಟ. ಅವರೇ ಬಹುಪಾಲು ಸ್ಪರ್ಧಿಗಳು, ಹಣಸುರಿಯುವವರು, ಚುನಾವಣೆಗಳನ್ನು ಸಂಘಟಿಸುವವರು, ಈ ಚುನಾವಣೆಗಳ ಮುನ್ನ ಅವರ ಭೂ ಕಬಳಿಕೆಯ ಬಕಾಸುರ ದಾಹವನ್ನು ತೃಪ್ತಿಪಡಿಸಿದರೆ ಇವರೆಲ್ಲರೂ ಬಿಜೆಪಿಯನ್ನು ತಲೆಯ ಮೇಲೆ ಮೆರೆಸುವುದಿಲ್ಲವೇ?

ಎಂತಹ ಕೇಡಿ ಕೆಲಸವನ್ನು ಮಾಡಿದರೂ ಕೂಡ ಅದಕ್ಕೆ 'ಜನಹಿತ' ಎಂಬ ಚಿನ್ನದ ನೀರಿನಿಂದ ಮೆರಗು ನೀಡಬೇಕು. ಆದ್ದರಿಂದ ಭೂ ಕಬಳಿಕೆಗೆ ಬಿಜೆಪಿ ನೀಡಿರುವ ಹೆಸರು ಭೂ ಪರಿವರ್ತನೆ ನಿಯಮಾವಳಿಗಳ ಸರಳೀಕರಣ. ಇಲ್ಲಿಯವರೆಗೆ ಕೃಷಿಕರಲ್ಲದವರು ಕೃಷಿ ಭೂಮಿಯನ್ನು ಕೊಳ್ಳಲು ಅವಕಾಶವಿರಲಿಲ್ಲ. ಇದು ದೇವರಾಜ ಅರಸು ತಂದ ಭೂ ಸುಧಾರಣಾ ಕಾನೂನಿನ ಒಂದು ಮುಖ್ಯ ನಿಯಮವಾಗಿತ್ತು. ಆದರೆ ಈಗ ಎಲ್ಲ ಮುಕ್ತ ಯಾರೂ ಬೇಕಾದರೂ ಕೃಷಿ ಭೂಮಿಯನ್ನು ಕೂಡ ಕೊಳ್ಳಬಹುದು ಅರ್ಥಾತ್ ಕಬಳಿಸಬಹುದು. ಇದರ ಜೊತೆಗೆ ಭೂಪರಿವರ್ತನೆ ಕೂಡ ನಿರ್ಬಂಧ ಮುಕ್ತ. ನಿಗದಿತ ಶುಲ್ಕ ಪಾವತಿಸಿದರೆ ಕೃಷಿ ಭೂಮಿ ನಗರದ ಭೂಮಿಯಾಗುವುದು. ಹಳ್ಳಿಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿ ಉದ್ಯೋಗಗಳನ್ನು ಸೃಷ್ಟಿಸಲು ಇದು ನೆರವಾಗುವುದಂತೆ. ಎಂತಹ ಸದುದ್ದೇಶ!!

ನಗರ-ಪಟ್ಟಣಗಳಲ್ಲಿ ಭೂ ಮಾಫಿಯಾ ಸೃಷ್ಟಿಸಿದರೆ ಸಾಕೆ? ಹಳ್ಳಿ ಹಳ್ಳಿಗಳಲ್ಲಿ ಭೂ ಮಾಫಿಯಾ ಸೃಷ್ಟಿಸಿ ಅಲ್ಲೆಲ್ಲೂ ವಿಸ್ತರಣಗಳ ಸೃಷ್ಟಿ, ನಿವೇಶನಗಳ ಮಾರಾಟ ಮಾಡಿದರೆ ಕರ್ನಾಟಕದ 28,000 ಹಳ್ಳಿಗಳಲ್ಲಿಯೂ ಕೂಡ ಮನೆಗಳ ಕೊರತೆಯನ್ನು ಒಂದು ದೊಡ್ಡ ಲಾಭದ ಮೂಲವನ್ನಾಗಿ ಮಾಡಬಹುದಲ್ಲವೇ? ಈ ಕ್ರಮದಿಂದ ಭೂ ಮಾಫಿಯಾಗಳಾಗಿ ಪರಿವರ್ತನೆಗೊಂಡ ಹಳ್ಳಿಗಳ ಭೂ ಮಾಲಕರು ಒಂದು ಕಡೆ ರೈತರ ಹಣವನ್ನು ಕೊಳ್ಳೆ ಹೊಡೆಯುವುದಲ್ಲದೆ ಗೂಂಡಾಶಕ್ತಿಗಳನ್ನು ಬೆಳಸಿ ತಮ್ಮ ಹತೋಟಿಯಿಂದ ನುಣುಚಿಕೊಳ್ಳುತ್ತಿರುವ ಹಳ್ಳಿಗಳನ್ನು ತಮ್ಮ ಹತೋಟಿಗೆ ತೆಗೆದುಕೊಳ್ಳಲು ಹೊಸ ಆಯುಧವನ್ನು ಸರಬರಾಜು ಮಾಡುವುದು ಕೂಡ ಯಡ್ಡಿಯೂರಪ್ಪನವರ ಮಹಾನ್ ಚಿಂತನೆ. ರಾಜ್ಯದಲ್ಲಿ ಅತಿ ಹೆಚ್ಚು ಭೂ ಮಾಲೀಕರು ಭೂ ಸುಧಾರಣೆಯ ಎಲ್ಲಾ ಕಾನೂನುಗಳನ್ನು ಮುರಿದು ಅಥವಾ ವಂಚಿಸಿ ಅತಿ ಹೆಚ್ಚು ಭೂಮಿ ನೂರಾರು ಎಕರೆ, ಸಾವಿರಾರು ಎಕರೆ ಭೂಮಿಯನ್ನೂ ತಮ್ಮ ಮುಷ್ಠಿಯಲ್ಲಿಟ್ಟು ಕೊಂಡಿರುವವರು ಲಿಂಗಾಯುತ ಭೂ ಮಾಲೀಕರೆಂಬುವುದು ಕೇವಲ ಆಕಸ್ಮಿಕ. ರಾಜ್ಯದ ಎಲ್ಲರಿಗೂ ಒಳ್ಳೆಯದಾಗಬೇಕೆಂದು ಯಡ್ಡಿಯೂರಪ್ಪ ನವರು ಚಿಂತಿಸಿದರೆ ಅದರಿಂದ ಆಕಸ್ಮಿಕವಾಗಿ ಅವರದೇ ಜಾತಿಯ ಲಿಂಗಾಯುತ ಭೂ ಮಾಲೀಕರಿಗೆ ಲಾಭವಾದರೆ ಅವರೇನು ಮಾಡಿಯಾರು?ಈ ಸರಳೀಕರಣದಿಂದ ಇಷ್ಟೊಂದು ಜನರಿಗೆ ಇಷ್ಟೊಂದು ಲಾಭವಾಗುವಾಗ ನಷ್ಟ ಯಾರಿಗೆ? ಕೃಷಿ ಭೂಮಿಯನ್ನು ಕೃಷಿಕರರಲ್ಲದವರು ಕೊಳ್ಳಬಾರದು ಎಂಬ ನಿಯಮ ಯಾಕಾದರೂ ಹಾಕಿದರು? ಅವರಿಗೆ ಯಡ್ಡಿಯೂರಪ್ಪ ನವರಿಗಿರುವ 'ದೂರಾಲೋಚನೆ' 'ಅಭಿವೃದ್ಧಿ ಚಿಂತನೆ' ಇರಲಿಲ್ಲ ಅಷ್ಟೆ!

ಪುಟ 6 ಕ್ಕೆ

ನಿಜ ಗೆಲುವು - ಭ್ರಮಾತ್ಮಕ ಗೆಲುವು ನಿಜ ಸೋಲು - ವ್ಯವಸ್ಥೆ ಹೇರಿದ ಸೋಲು

ಈ ವಾರ

ಜಿ.ಎನ್.ನಾಗರಾಜ್

ಚುನಾವಣೆಗಳು ಮುಗಿದಿವೆ. ಗೆದ್ದವರ ಬಾಲ ಹಿಡಿದು ಅವರನ್ನು ಇಂದ್ರ,ಚಂದ್ರ ಎಂದು ಹೊಗಳುವುದು, ಸೋತರವನ್ನು ಹಳ್ಳಕ್ಕೆ ದೂಡುವುದು ಯಥೇಚ್ಛವಾಗಿ ಎಲ್ಲಾ ಮಾಧ್ಯಮ-ಪತ್ರಿಕೆಗಳಲ್ಲಿ ನಡೆದಿದೆ. ಮಾಧ್ಯಮ ಪತ್ರಿಕೆಗಳ ಜಾಹೀರಾತುದಾರ ಕಂಪನಿಗಳ ಸಂತೋಷ ಮುಗಿಲು ಮುಟ್ಟಿದೆ. ಇದರಿಂದಾಗಿ ಪತ್ರಿಕೆಗಳ ಮಾಲೀಕರಿಗೆ ಬಹಳ ಖುಷಿಯಾಗಿದೆ. ಇನ್ನೂ ಅವರ ಭಂಟರು ತಮ್ಮ ಖುಷಿಯನ್ನು ನೇರವಾಗಿ ವ್ಯಕ್ತ ಮಾಡಲಾಗದ ಕಂಪನಿಗಳು, ಪತ್ರಿಕೆ ಮಾಧ್ಯಮಗಳ ಮಾಲೀಕರ ಸಂತೋಷವನ್ನು ತಾವೇ ಮೈ ಮೇಲೆ ಆವಾಹಿಸಿಕೊಂಡು ಕುಣಿಯುತ್ತಿದ್ದಾರೆ.

ಈ ಮಧ್ಯೆ ಸತ್ಯ ಎನ್ನುವುದು ಈ ಸ್ವಚ್ಛಂದ ಕುಣಿತದ ಕಾಲ್ತುಳಿತದಲ್ಲಿ ನಲುಗಿಹೋಗುತ್ತಿದೆ. ಅದೇ ಆಳುವವರ ಇಂದಿನ ಅಗತ್ಯ. ಯಾವುದೇ ವಿಷಯದಲ್ಲಿ ಯಾದರೂ 'ಪ್ರತ್ಯಕ್ಷವಾದರೂ ಪ್ರಮಾಣಿಸಿ ನೋಡು' ಎನ್ನುತ್ತದೆ ಜನಪದರ ಅನುಭವ. ಮೇಲ್ತೋರಿಕೆಗಳ ನಡುವೆ ಸತ್ಯ ಹುಗಿದುಹೋಗಿರುತ್ತದೆ. ತಾಳ್ಮೆ ಮತ್ತು ಶ್ರಮದಿಂದ ಅದನ್ನು ಹೊರತೆಗೆದರಷ್ಟೇ ಸತ್ಯಸಾರ ಕೈಗೆ ಸಿಗುತ್ತದೆ. ಸೂರ್ಯ ಭೂಮಿಯ ಸುತ್ತ ಸುತ್ತುತ್ತಾನೆ. ಪೂರ್ವದಲ್ಲಿ ಹುಟ್ಟುತ್ತಾನೇ, ಪಶ್ಚಿಮದಲ್ಲಿ ಮುಳುಗುತ್ತಾನೆ. ಇದು ಮೇಲ್ತೋರಿಕೆಯ ಸತ್ಯ, ಆದರೆ ಭೂಮಿ ಸೂರ್ಯನ ಸುತ್ತ ಸುತ್ತುತ್ತದೆ. ಅದರಿಂದಲೇ ಋತುಗಳು, ಕಾಲಗಳು, ವರ್ಷಗಳಾಗುತ್ತವೆ ಎಂಬುದು ಈ ಹಲವು ಮೇಲ್ತೋರಿಕೆಯ ಮುಗ್ಗುಲುಗಳನ್ನು ಬಗೆದು ಒಳ ಹೊಕ್ಕರೆ, ಶೋಧಿಸಿದರೆ ಸಿಕ್ಕುವ ಸತ್ಯ.

ಹಾಗೆಯೇ ಲೋಕಸಭಾ ಸ್ಥಾನಗಳು ಎಂಬ ಮೇಲ್ತೋರಿಕೆಯ ಒಂದು ಮಾಹಿತಿಯ ಜೊತೆಗೆ ಮತದಾನದ ಪ್ರಮಾಣ, ಅದಕ್ಕೆ ಕಾರಣಗಳು ವಿವಿಧ ಪಕ್ಷಗಳ ಮತಗಳಿಕೆ ಮೊದಲಾದ ಇತರ ಮಾಹಿತಿಗಳನ್ನು ಜೊತೆ ಸೇರಿಸಿ ಶೋಧಿಸಿದರೆ ಭಾರತದ ಜನಾದೇಶ ಎಂಬ ಸತ್ಯ ಕಾಣುವುದು.

ಲೋಕಸಭೆಯಲ್ಲಿ ಕಾಂಗ್ರೆಸ್‌ಗಳಿಸಿದ ಸ್ಥಾನ 206, ಹಿಂದಿನ ಚುನಾವಣೆಗೆ ಹೋಲಿಸಿದರೆ ಕಾಂಗ್ರೆಸ್‌ನ ಸ್ಥಾನದ ಹೆಚ್ಚಳ 61. 1991ರ ನಂತರದಲ್ಲಿ ಅತಿ ಹೆಚ್ಚು ಸ್ಥಾನ. ಅದಕ್ಕೆ ಕಾರಣ ಮನಮೋಹನ್‌ಸಿಂಗ್. ಆದ್ದರಿಂದ ಸಿಂಗ್ ಈಸ್ ಕಿಂಗ್! ರಾಹುಲ್ ಎಂಬ ಯುವರಾಜನನ್ನು ಹೊಗಳಿ ಅಟ್ಟಕ್ಕೇರಿಸಿ ಮುಂದೆ ಪಟ್ಟಕ್ಕೇರಿಸುವ ಸನ್ನಾಹ.

ಆದರೆ ಮತಗಳಿಕೆಯ ಪ್ರಮಾಣವೆಷ್ಟು? ಇಡೀ ದೇಶದಲ್ಲಿ ಕಾಂಗ್ರೆಸ್‌ನ ಮತಗಳಿಕೆಯ ಏರಿಕೆ ಕೇವಲ ಶೇ.3 ರಷ್ಟು. ಒಟ್ಟು ಗಳಿಕೆ ಶೇ.30ಕ್ಕಿಂತ ಕಡಿಮೆ. ಈ ಮತಗಳಿಕೆಯ ಪ್ರಮಾಣಕ್ಕೆ ಪಡೆಯಬೇಕಾದ ಲೋಕಸಭಾ ಸದಸ್ಯತ್ವ ಕೇವಲ 163. ಆದರೆ ಕಾಂಗ್ರೆಸ್ ಪಕ್ಷಕ್ಕೆ 206 ಸ್ಥಾನಗಳು ದೊರಕಿದೆ. ಕಾರಣವೇನು? ಮತಗಳಿಕೆಯ ಪ್ರಮಾಣಕ್ಕನುಗುಣವಾಗಿ, ಸ್ಥಾನಗಳನ್ನು ನೀಡದೆ ಪ್ರತಿಕ್ಷೇತ್ರದಲ್ಲಿಯೂ ಇತರರಿಗಿಂತ ಒಂದು ಓಟು ಹೆಚ್ಚಿಗೆ ಪಡೆದರೆ ಸಾಕು ಗೆಲುವು ಎನ್ನುವ ಪ್ರಜಾಪ್ರಭುತ್ವ ವಿರೋಧಿ ಚುನಾವಣಾ ಪದ್ಧತಿ.

ಬಿಜೆಪಿಯ ಮತ ಗಳಿಕೆ ಶೇ.19. 2004ರಲ್ಲಿ ಅವರ ಮತಗಳಿಗಿಂತ ಶೇ.2.9 ರಷ್ಟು ಕಡಿಮೆ. ಆದರೆ ಅವರ ಸ್ಥಾನಗಳು 116. ಅವರ ಮತ ಗಳಿಕೆಗೆ ಹೋಲಿಸಿದರೆ ಅವರು ಪಡೆಯಬೇಕಾದ ಸ್ಥಾನಗಳು 108. ಸಿಪಿಐ(ಎಂ) ಮತ ಗಳಿಕೆ ಶೇ.5.52. 2004ರಲ್ಲಿ 5.66. ಕೇವಲ 0.14 ರಷ್ಟು ಜನ ಮಾತ್ರ ಸಿಪಿಐ(ಎಂ) ನಿಂದ ದೂರ ಸರಿದಿದ್ದಾರೆ. 2009ರ ಚುನಾವಣೆಗಳಲ್ಲಿ 28 ಸ್ಥಾನ ಸಿಪಿಐ(ಎಂ) ಸಿಗಬೇಕು. 2004ರ ಚುನಾವಣೆಗಳಲ್ಲಿ 29 ಸ್ಥಾನ ಮಾತ್ರ ಸಿಪಿಐ(ಎಂ) ಗಳಿಕೆ. ಆದರೆ ಅಂದು ಲಭ್ಯವಾಗಿದ್ದು 44 ಇಂದು 15.

ಕೇರಳದಲ್ಲಿ : 2004ರಲ್ಲಿ ನಮ್ಮ ಮತಗಳಿಕೆ 69,46,126. 2009ರಲ್ಲಿ 67,17,488. ಕೇವಲ 2, 28,638 ಮತಗಳು ಮಾತ್ರ ಕಡಿಮೆ. ಆದರೆ ಅಂದು ಗಳಿಸಿದ ಸ್ಥಾನ 18. ಇಂದು ಗಳಿಸಿದ ಸ್ಥಾನ 4.

ಹೀಗೆಯೇ ಪಶ್ಚಿಮಬಂಗಾಳದಲ್ಲಿ ಶೇ.45 ರಷ್ಟು ಮತ ಗಳಿಸಿದ ಎಡರಂಗಕ್ಕೆ ನಲವತ್ತೆರಡು ಸ್ಥಾನಗಳಲ್ಲಿ 15 ಸ್ಥಾನಗಳು. ಮಹಾ ಸೋಲು ಎಂಬ ವಿಶ್ಲೇಷಣೆ. ಆದರೆ ಕೇವಲ 30 ರಷ್ಟು ಮತ ಗಳಿಸಿದ ಕಾಂಗ್ರೆಸ್‌ಗೆ ಮಹಾ ವಿಜಯ. ದೋಷಪೂರಿತವಾದ ಈ ಚುನಾವಣಾ ಪದ್ಧತಿಯಿಂದಾಗಿ ಜನಾದೇಶ ವಿರೂಪಗೊಳ್ಳುತ್ತದೆ. ಈ ವಿರೂಪವನ್ನೇ ಸ್ವರೂಪವೆಂದು ಭಾರತದ ಜನರನ್ನೆಲ್ಲಾ ನಂಬಿಸುವ ಪ್ರಯತ್ನ ಆಳುವ ವರ್ಗದ್ದು. ಅವರ ಕೈಯಾಳುಗಳಾದ ಪತ್ರಿಕೆ ಮಾಧ್ಯಮಗಳದ್ದು. ಆದ್ದರಿಂದ ನಿಜವಾದ ಜನಾದೇಶವೇನು? ಅದನ್ನು ಅರ್ಥಮಾಡಿಕೊಂಡರೆ ಮಾತ್ರ ನಿಜವಾದ ಜಯ, ಭ್ರಮಾತ್ಮಕ ಜಯದ ನಡುವೆ ವ್ಯತ್ಯಾಸ ತಿಳಿಯಬಹುದು.

ಹಾಗೆಂದ ಮಾತ್ರಕ್ಕೆ ಪಶ್ಚಿಮಬಂಗಾಳ, ಕೇರಳ ಸೇರಿ ದೇಶದಲ್ಲಿ ಕಾಂಗ್ರೆಸ್‌ನ ಮತಗಳಿಕೆಯ ಪ್ರಮಾಣ ಏಕೆ ಶೇ.3 ರಷ್ಟು ಏರಿತು? ಎಡಪಕ್ಷಗಳ ಮತಗಳಿಕೆ ಏಕೆ ಏರಲಿಲ್ಲ? ಅಲ್ಪ ಇಳಿಕೆಯಾದರೂ ಏಕೆ ಕಡಿಮೆಯಾಯಿತು ಎಂಬುದನ್ನು ಕಂಡುಕೊಳ್ಳಬಾರದು ಎಂದಲ್ಲ. ಆದರೆ ಶೇ.3ರ ಮತಗಳಿಕೆಯ ಹೆಚ್ಚಳ ಮಾತ್ರ ನಿಜವಾದ ವಿಜಯ 206 ಸ್ಥಾನಗಳು 61 ಸ್ಥಾನಗಳ ಹೆಚ್ಚಳ ಎಂಬುದು ಭ್ರಮಾತ್ಮಕ ವಿಜಯ ಮಾತ್ರ.

ಆದ್ದರಿಂದಲೇ ಕಮ್ಯುನಿಸ್ಟ್ ಚಳುವಳಿ ಆರಂಭದಿಂದಲೂ ದೋಷಪೂರಿತ ಚುನಾವಣಾ ಪದ್ಧತಿಯನ್ನು ತೊಲಗಿಸಿ, ಮತಗಳಿಕೆಯ ಪ್ರಮಾಣಕ್ಕೆ ಅನುಗುಣವಾದ ಸ್ಥಾನಗಳನ್ನು ಪಡೆಯುವ ಚುನಾವಣಾ ಪದ್ಧತಿ ತನ್ನಿ ಎಂದು ಒತ್ತಾಯಿಸುತ್ತಿದೆ. ಇದು ದುಡಿಯುವ ವರ್ಗದ ಧ್ವನಿ.

ಲೋಕಸಭೆ ಚುನಾವಣೆ : ಯಾವ ರಾಜ್ಯ ಯಾವ ಪಕ್ಷ

ಅಂಡಮಾನ್ ನಿಕೋಬಾರ್	
ಒಟ್ಟು ಕ್ಷೇತ್ರಗಳ ಸಂಖ್ಯೆ	01
ಬಿಜೆಪಿ	01
ಆಂಧ್ರಪ್ರದೇಶ	
ಒಟ್ಟು ಕ್ಷೇತ್ರಗಳ ಸಂಖ್ಯೆ	42
ಕಾಂಗ್ರೆಸ್	33
ಟಿಡಿಪಿ	06
ಟಿಆರ್‌ಎಸ್	02
ಎಐಎಂಇಐಎಂ	01
ಅರುಣಾಚಲ-ಪ್ರದೇಶ	
ಒಟ್ಟು ಕ್ಷೇತ್ರಗಳ ಸಂಖ್ಯೆ	02
ಕಾಂಗ್ರೆಸ್	02
ಆಸ್ಸಾಂ	
ಒಟ್ಟು ಕ್ಷೇತ್ರಗಳ ಸಂಖ್ಯೆ	14
ಕಾಂಗ್ರೆಸ್	07
ಬಿಜೆಪಿ	04
ಎಯುಡಿಎಫ್	01
ಬಿಪಿಎಫ್	01
ಎಜಿಪಿ	01
ಬಿಹಾರ	
ಒಟ್ಟು ಕ್ಷೇತ್ರಗಳ ಸಂಖ್ಯೆ	40
ಜೆಡಿಯು	20
ಬಿಜೆಪಿ	12
ಕಾಂಗ್ರೆಸ್	02
ಆರ್‌ಜೆಡಿ	04
ಪಕ್ಷೇತರರು	02
ಚಂಡೀಗಡ	
ಒಟ್ಟು ಕ್ಷೇತ್ರಗಳ ಸಂಖ್ಯೆ	01
ಕಾಂಗ್ರೆಸ್	01
ಛತ್ತೀಸ್‌ಗಡ	
ಒಟ್ಟು ಕ್ಷೇತ್ರಗಳ ಸಂಖ್ಯೆ	11
ಕಾಂಗ್ರೆಸ್	01
ಬಿಜೆಪಿ	10
ದೆಹಲಿ	
ಒಟ್ಟು ಕ್ಷೇತ್ರಗಳ ಸಂಖ್ಯೆ	7
ಕಾಂಗ್ರೆಸ್	07
ದಾದ್ರಾ ಮತ್ತು ನಗರ್ ಹವೇಲಿ	
ಒಟ್ಟು ಕ್ಷೇತ್ರಗಳ ಸಂಖ್ಯೆ	01
ಬಿಜೆಪಿ	01
ಗೋವಾ	
ಒಟ್ಟು ಕ್ಷೇತ್ರಗಳ ಸಂಖ್ಯೆ	02
ಕಾಂಗ್ರೆಸ್	01
ಬಿಜೆಪಿ	01
ಗುಜರಾತ್	
ಒಟ್ಟು ಕ್ಷೇತ್ರಗಳ ಸಂಖ್ಯೆ	26
ಕಾಂಗ್ರೆಸ್	11
ಬಿಜೆಪಿ	15
ಹರಿಯಾಣ	
ಒಟ್ಟು ಕ್ಷೇತ್ರಗಳ ಸಂಖ್ಯೆ	10
ಕಾಂಗ್ರೆಸ್	09
ಎಚ್‌ಜೆಸಿಬಿಎಲ್	01
ಹಿಮಾಚಲ ಪ್ರದೇಶ	
ಒಟ್ಟು ಕ್ಷೇತ್ರಗಳ ಸಂಖ್ಯೆ	04
ಕಾಂಗ್ರೆಸ್	01
ಬಿಜೆಪಿ	03
ಜಮ್ಮು ಮತ್ತು ಕಾಶ್ಮೀರ	
ಒಟ್ಟು ಕ್ಷೇತ್ರಗಳ ಸಂಖ್ಯೆ	06
ಕಾಂಗ್ರೆಸ್	02
ಜೆಕೆಎನ್‌ಸಿ	03
ಪಕ್ಷೇತರರು	01
ಜಾರ್ಖಂಡ್	
ಒಟ್ಟು ಕ್ಷೇತ್ರಗಳ ಸಂಖ್ಯೆ	14
ಕಾಂಗ್ರೆಸ್	01
ಬಿಜೆಪಿ	08
ಜೆಎಂಎಂ	02
ಜೆವಿಎಂ(ಪಿ)	01
ಪಕ್ಷೇತರರು	02
ಕರ್ನಾಟಕ	
ಒಟ್ಟು ಕ್ಷೇತ್ರಗಳ ಸಂಖ್ಯೆ	28
ಕಾಂಗ್ರೆಸ್	06
ಬಿಜೆಪಿ	19
ಜೆಡಿಎಸ್	03
ಕೇರಳ	
ಒಟ್ಟು ಕ್ಷೇತ್ರಗಳ ಸಂಖ್ಯೆ	20
ಕಾಂಗ್ರೆಸ್	13
ಸಿಪಿಐ(ಎಂ)	04
ಎಂಎಲ್‌ಕೆಎಸ್‌ಸಿ	02
ಕೆಸಿ(ಎಂ)	01
ಲಕ್ಷದ್ವೀಪ	
ಒಟ್ಟು ಕ್ಷೇತ್ರಗಳ ಸಂಖ್ಯೆ	01
ಕಾಂಗ್ರೆಸ್	01
ಮಧ್ಯಪ್ರದೇಶ	
ಒಟ್ಟು ಕ್ಷೇತ್ರಗಳ ಸಂಖ್ಯೆ	29
ಕಾಂಗ್ರೆಸ್	11
ಬಿಜೆಪಿ	17
ಬಿಎಸ್ಪಿ	01
ಮಹಾರಾಷ್ಟ್ರ	
ಒಟ್ಟು ಕ್ಷೇತ್ರಗಳ ಸಂಖ್ಯೆ	48
ಕಾಂಗ್ರೆಸ್	17
ಬಿಜೆಪಿ	09
ಎನ್‌ಸಿಪಿ	08
ಶಿವಸೇನೆ	11
ಬಿವಿಎ	01
ಸ್ವಾಭಿಮಾನಿ ಪಕ್ಷ	01
ಪಕ್ಷೇತರರು	01
ಮಣಿಪುರ	
ಒಟ್ಟು ಕ್ಷೇತ್ರಗಳ ಸಂಖ್ಯೆ	02
ಕಾಂಗ್ರೆಸ್	02
ಮೇಘಾಲಯ	
ಒಟ್ಟು ಕ್ಷೇತ್ರಗಳ ಸಂಖ್ಯೆ	02
ಕಾಂಗ್ರೆಸ್	01
ಎನ್‌ಸಿಪಿ	01
ಮಿಜೋರಾಂ	
ಒಟ್ಟು ಕ್ಷೇತ್ರಗಳ ಸಂಖ್ಯೆ	01
ಕಾಂಗ್ರೆಸ್	01
ನಾಗಾಲ್ಯಾಂಡ್	
ಒಟ್ಟು ಕ್ಷೇತ್ರಗಳ ಸಂಖ್ಯೆ	01
ನಾಗಾಲ್ಯಾಂಡ್ ಪೀಪಲ್ ಫ್ರಂಟ್	01
ಒರಿಸ್ಸಾ	
ಒಟ್ಟು ಕ್ಷೇತ್ರಗಳ ಸಂಖ್ಯೆ	21
ಬಿಜೆಡಿ	14
ಕಾಂಗ್ರೆಸ್	06
ಸಿಪಿಐ	01
ಪುದುಚೇರಿ	
ಒಟ್ಟು ಕ್ಷೇತ್ರಗಳ ಸಂಖ್ಯೆ	01
ಕಾಂಗ್ರೆಸ್	01
ಪಂಜಾಬ್	
ಒಟ್ಟು ಕ್ಷೇತ್ರಗಳ ಸಂಖ್ಯೆ	13
ಕಾಂಗ್ರೆಸ್	08
ಎಸ್‌ಎಡಿ	04
ಬಿಜೆಪಿ	01
ರಾಜಸ್ತಾನ	
ಒಟ್ಟು ಕ್ಷೇತ್ರಗಳ ಸಂಖ್ಯೆ	25
ಕಾಂಗ್ರೆಸ್	20
ಬಿಜೆಪಿ	04
ಇತರರು	01
ಸಿಕ್ಕಿಂ	
ಒಟ್ಟು ಕ್ಷೇತ್ರಗಳ ಸಂಖ್ಯೆ	01
ಎಸ್‌ಡಿಎಫ್	01
ತಮಿಳುನಾಡು	
ಒಟ್ಟು ಕ್ಷೇತ್ರಗಳ ಸಂಖ್ಯೆ	39
ಕಾಂಗ್ರೆಸ್	[illegible]
ಡಿಎಂಕೆ	18
ಎಐಎಡಿಎಂಕೆ	09
ಎಂಡಿಎಂಕೆ	01
ಸಿಪಿಐ(ಎಂ)	02
ವಿಸಿಕೆ	01
ತ್ರಿಪುರಾ	
ಒಟ್ಟು ಕ್ಷೇತ್ರಗಳ ಸಂಖ್ಯೆ	02
ಸಿಪಿಐ(ಎಂ)	02
ಉತ್ತರಾಖಂಡ್	
ಒಟ್ಟು ಕ್ಷೇತ್ರಗಳ ಸಂಖ್ಯೆ	05
ಕಾಂಗ್ರೆಸ್	05
ಉತ್ತರಪ್ರದೇಶ	
ಒಟ್ಟು ಕ್ಷೇತ್ರಗಳ ಸಂಖ್ಯೆ	80
ಬಿಎಸ್ಪಿ	19
ಎಸ್ಪಿ	23
ಕಾಂಗ್ರೆಸ್	[illegible]
ಆರ್‌ಎಲ್‌ಡಿ	[illegible]
ಬಿಜೆಪಿ	10
ಪಕ್ಷೇತರರು	01
ಪಶ್ಚಿಮ ಬಂಗಾಳ	
ಒಟ್ಟು ಕ್ಷೇತ್ರಗಳ ಸಂಖ್ಯೆ	42
ತೃಣಮೂಲ ಕಾಂಗ್ರೆಸ್	19
ಕಾಂಗ್ರೆಸ್	06
ಸಿಪಿಐ(ಎಂ)	09
ಆರ್‌ಎಸ್ಪಿ	02
ಸಿಪಿಐ	02
ಎಐಎಫ್‌ಬಿ	02
ಬಿಜೆಪಿ	01
ಎಸ್‌ಯುಸಿಐ	01

ದೇವತೆಗಳಿಗೆ ಕನ್‌ಫ್ಯೂಸ್ ಆಗೋದಿಲ್ವೇನ್ರಿ ?

ಕ್ಯಾತೆ

ಶ್ರೀ

● ಚುನಾವಣೆ ನಂತರ ಪಕ್ಷೇತರರನ್ನು ಕೈ ಬಿಡಲ್ಲ.

- ಯಡಿಯೂರಪ್ಪ.

▬ ನಿಮಗೇ ಯಾರ್‍ಯಾರು ಕೈ ಕೊಡ್ತಾರೋ ಸ್ವಲ್ಪ ನೋಡ್ತಾ ಇರಿ.

★

● ಹಿಂದು ಸರಕಾರ ರಚನೆಗಾಗಿ ಶಿವಮೊಗ್ಗದಲ್ಲಿ ಮಹಾ ಯಾಗ.

▬ ಮಹಾ ಯಾಗವು ಹಿಂದೂ ಜಾಗೃತಿಗಾಗಿ ಧರ್ಮ ಸಂರಕ್ಷಣೆಗಾಗಿ ಎಂದು ಬ್ಯಾನರ್‌ಗಳು ಹೇಳುತ್ತಿದ್ದವು. ನಂತರ ಪೂರ್ಣಾಹುತಿಯ ಹೊತ್ತಿಗೆ ಕೇಂದ್ರದಲ್ಲಿ ಹಿಂದೂ ಪರ ಸರಕಾರ ರಚನೆಯ ಉದ್ದೇಶ ಎಂದು ಹೇಳಲಾಯಿತು.

▬ ಯಾಗದ ಸಂಕಲ್ಪ ಮಾಡುವಾಗಲೇ ಫಲಾಪೇಕ್ಷೆಗಳನ್ನು ಸ್ಪಷ್ಟವಾಗಿ ದೇವತೆಗಳಿಗೆ ತಿಳಿಸಿ ಬಿಡಬೇಕು. ಹೀಗೆ ಒಂದೊಂದು ಬಾರಿ ಒಂದೊಂದು ಬೇಡಿಕೆಗಳನ್ನು ಸರಕಾರದ ಮುಂದಿಟ್ಟಹಾಗೆ ಇಟ್ಟರೆ ದೇವತೆಗಳಿಗೆ ಕನ್‌ಫ್ಯೂಸ್ ಆಗೋದಿಲ್ವೇನ್ರೀ? ಕಡೆಗೂ ನೋಡಿ ಎಂತ ಕೆಲಸ ಆಗಿ ಹೋಯಿತು.

★

● ನಾವು ಸನ್ಯಾಸಿಗಳಲ್ಲ, ನಮಗೂ ಅಧಿಕಾರ ಬೇಕು

- ರೇಣುಕಾಚಾರ್ಯ

▬ ಛೇ, ನೀವು ಸನ್ಯಾಸಿ ಅಂತ ಯಾವ ಮುಠ್ಠಾಳ ಹೇಳ್ತಾನ್ರೀ? (ಸನ್ಯಾಸಿಗಳಿಗೇನು ಅಧಿಕಾರದ ಆಸೆ ಕಡಿಮೆ ಇರುತ್ತಾ? ಅದು ಬೇರೆ ವಿಚಾರ ಬಿಡಿ.) ನರ್ಸ್ ಜಯಲಕ್ಷ್ಮಿ ಯವರೊಂದಿಗಿನ ನಿಮ್ಮ ಹಗರಣ, ಚಿತ್ರಗಳು ಬಯಲಾದಾಗಲೇ ಕೆಲವರು ಹೇಳುತ್ತಿದ್ದರು ನೀವು ಉನ್ನತ ಲೈಂಗಿಕ ಶಿಕ್ಷಣ ಸಚಿವರಾಗಲು ಲಾಯಕ್ಕಾಗಿದೀರಿ ಅಂತ.

★

● ಪುತ್ರನ ಪ್ರಚಾರಕ್ಕಾಗಿ 30 ಬಾರಿ ಹೆಲಿಕಾಪ್ಟರಿನಲ್ಲಿ ಜಲಾವರ್ ಕ್ಷೇತ್ರಕ್ಕೆ ಆಗಮಿಸಿದ ವಸುಂಧರಾ ರಾಜೆ.

▬ ಏನಾದ್ರೂ ಅವರು ನಮ್ಮ ಯಡಿಯೂರಪ್ಪನವರನ್ನು ಮೀರಿಸಲಾಗಲ್ಲ ಬಿಡಿ.

★

● ಖಾಸಗಿಯವರಿಗೆ ಶೇ.5 ಹೆಚ್ಚುವರಿ ಸೀಟುಗಳನ್ನು ಸರ್ಕಾರ ಬಿಟ್ಟುಕೊಟ್ಟಿದ್ದರ ವಿರುದ್ಧ ಎ ಬಿ ವಿ ಪಿ ಪ್ರತಿಭಟನೆ.

▬ ಈ ನಿರ್ಧಾರ ಆಗಿ ಮೂರು ತಿಂಗಳ ಮೇಲಾಯಿತು. ಪ್ರತಿಭಟನೆ ಮಾಡಲು ಚುನಾವಣಾ ನೀತಿ ಸಂಹಿತೆ ಅಡ್ಡ ಬಂದಿತ್ತೇ? ಈಗ ಪ್ರತಿಭಟನೆಯು ನಾಟಕ ಮಾಡುತ್ತಿದ್ದಾರಲ್ಲ ಎಂದು ಕೊಳ್ಳುತ್ತಿರುವಾಗಲೇ ಇಂಜಿನಿಯರಿಂಗ್ ಕೋರ್ಸಗೆ ಶುಲ್ಕ ಕಡಿಮೆ ಮಾಡಿದ ವರದಿ ಬಂದ ಮೇಲಷ್ಟೇ ಗೊತ್ತಾಗಿದ್ದು ಇದು ಮ್ಯಾಚ್ ಫಿಕ್ಸಿಂಗ್ ಪ್ರತಿಭಟನೆ ಅಂತ.

★

● ಉನ್ನತ ಶಿಕ್ಷಣದ ವ್ಯಾಪಾರೀಕರಣ ಎಬಿವಿಪಿ ವಿರೋಧ.

▬ ನಿಮ್ಮ ಯಡಿಯೂರಪ್ಪ, ಈಶ್ವರಪ್ಪನವರ ಹೈಟೆಕ್ ಕಾಲೇಜುಗಳು ವ್ಯಾಪಾರವಲ್ಲದೆ ಕಡೇಪಕ್ಷ ಎಬಿವಿಪಿ ಹುಡುಗರಿಗಾದರೂ ಧರ್ಮಾರ್ಥವೇ, ಕೇಳಿನೋಡಿ.

★

● ಕಾನೂನು ಕಾಲೇಜಿನಲ್ಲಿ ಕನ್ನಡ ಕಲಿಸಲು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮುಖ್ಯಮಂತ್ರಿ ಚಂದ್ರು ಆಗ್ರಹ.

▬ ಸಂಸ್ಕೃತ, ವೇದ ವಿಶ್ವವಿದ್ಯಾನಿಲಯ ಸ್ಥಾಪನೆಗೆ ಸರಕಾರ ತೀರ್ಮಾನ.

▬ ಮು.ಮಂ.ಚಂ. ರವರೇ ನೀವು ಆಗ್ರಹ ಮಾಡ್ತಾನೇ ಇರಿ, ನಿಮ್ಮ ಸರಕಾರ ನೋಡಿ ಎಷ್ಟು ಚನ್ನಾಗಿ ಕನ್ನಡ ಅಭಿವೃದ್ಧಿ ಮಾಡ್ತಾ ಇದೆ. ಸಂಸ್ಕೃತ, ವೇದ ವಿ.ವಿ.ಯಲ್ಲೂ ಕನ್ನಡ ಮಾತ್ರ ಕಲಿಸಬೇಕು ಅಂತ ಆಗ್ರಹ ಮಾಡಿ ಕಾಮಿಡಿ ಮಾಡ್ತೀರೋ ಏನೋ ಹ್ಲ್ಲ...



ಬೆಂಗಳೂರು ಅಭಿವೃದ್ಧಿ ಮಂತ್ರ ಚುನಾವಣೆ ಮುಂದೂಡುವ ತಂತ್ರ

ಕೆ.ಎನ್. ಉಮೇಶ್

"ಅಭಿವೃದ್ಧಿ, ಅಭಿವೃದ್ಧಿ, ಅಭಿವೃದ್ಧಿಯೇ ನಮ್ಮ ಮಂತ್ರ, ಬೆಂಗಳೂರನ್ನು ವಿಶ್ವದರ್ಜೆಯ ನಗರ ಮಾಡಬೇಕು, ಬೆಂಗಳೂರನ್ನು ಅಭಿವೃದ್ಧಿ ಮಾಡದೆ ... ವಿರಮಿಸಲ್ಲ! ವಾರಕ್ಕೊಮ್ಮೆ ನಗರ ಪ್ರದಕ್ಷಿಣೆ ...ತ್ತೀನಿ, ನನ್ನ ಸಚಿವರು, ಶಾಸಕರು, ಅಧಿಕಾರಿಗಳೆಲ್ಲ ...ದಕ್ಕಾಗಿ ದುಡಿಬೇಕು. ರಾತ್ರಿ ಸಮಯದಲ್ಲಿ ನಗರ ಪ್ರದಕ್ಷಿಣೆ ಮಾಡ್ತಿನಿ" ಇವು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಬೆಂಗಳೂರಿನ ಬಗ್ಗೆ ನುಡಿದಿರುವ ಮಾತುಗಳಿವೆ.

...ಗಿ-ಬಗಿ

ಎಲ್ಲೆಲ್ಲೂ ಚಪ್ಪಡಿ ಎತ್ತೋದು ಚರಂಡಿ ಕ್ಲೀನ್ ಮಾಡೋದು, ರಸ್ತೆ ಅಗೆಯೋದು, ಹೊಸ ನೀರಿನ ...ಪ್, ಚರಂಡಿ ಪೈಪ್ ಹಾಕೋದು, ತಾರ್ ಇರೋ ...ಸ್ತೆಗೆ ಮತ್ತೆ ತಾರ್ ಹಾಕೋದು ಬಿಡುವಿಲ್ಲದೆ ನಡೆದಿದೆ ...ಂಗಳೂರು ತುಂಬಾ. ಅಂಡರ್‌ಪಾಸ್, ...ಲ್ಸೇತುವೆ, ಪಟಾಪಟ್ ಅಂಡರ್‌ಪಾಸ್, ...ವಾಕ್ ಮುಂತಾದ ಕೆಲಸಗಳು ನಡೆದಿವೆ. ...ಡುವಿಲ್ಲದ ಕೆಲಸ, ಇದರೊಟ್ಟಿಗೆ ಮೆಟ್ರೋ ಅನ್ನು ...ದ್ದಾರೆ. ನೈಸ್ ರಸ್ತೆಗೆ ಬೇಕಿದ್ದ ಹೆಚ್ಚುವರಿ ...ಮನೂ ಮಂಜೂರು ಮಾಡಿದ್ದಾರೆ. ಅಕ್ರಮ, ...ಕ್ರಮ ಕುರಿತು ಸಚಿವ ಸಂಪುಟ ಸಮಿತಿ ವರದಿ ...ಡಬೇಕು. ಇನ್ನೇನು ನೀಡಬಹುದು ಕೂಡ. ಮೌಲ್ಯ ...ಧಾರಿತ ತೆರಿಗೆ (ಸಿವಿಎಸ್) ಜಾರಿಗೆ ಬಂದ ...ರೋಧ ತಣ್ಣಗಾಗಿಸಲು ಒಂದು ಸಮಾವೇಶ ನಡೆಸಿ ...ದನ್ನೇ ಇನ್ನೊಂದು ರೀತಿಯಲ್ಲಿ ಘಟಕ ಪ್ರದೇಶ ಮೌಲ್ಯ (ಯುಎವಿ) ಹೆಸರಿನಲ್ಲಿ ಜಾರಿ ಮಾಡಿ, ಬಹಳ ...ಪಕಾರ ಮಾಡಿದೀವಿ ಎಂದು ಬೊಬ್ಬೆ ರಾಜ್ಯ ...ರ್ಕಾರದ್ದು. ಅದರೊಟ್ಟಿಗೆ ಹಿಂದಿನ ಎಸ್.ಎಂ.ಕೃಷ್ಣ ...ರ್ಕಾರ ರೂಪಿಸಿದ್ದ ಬೆಂಗಳೂರು ಅಜೆಂಡಾ ಕಾರ್ಯ ...ಡೆ (ಬಿಎಟಿಎಫ್) ಜಾಗಕ್ಕೆ ಅಬೈಡ್ (abide) ...ಜೆಂಡಾ ಫಾರ್ ಬೆಂಗಳೂರು ಇನ್‌ಫ್ರಾಸ್ಟ್ರಕ್ಚರ್ ...ವಲೆಪ್‌ಮೆಂಟ್) ಬೆಂಗಳೂರು ಮೂಲಸೌಕರ್ಯ ಅಭಿವೃದ್ಧಿಗಾಗಿ ಕಾರ್ಯಸೂಚಿ ಎಂಬ ಸಮಿತಿ ...ಚಿಸಿದ್ದಾರೆ.

...ಪಿಎಲ್ ಕಂಪನಿಯ ಮಾಲೀಕ ಹಾಗೂ ರಾಜ್ಯಸಭಾ ಸದಸ್ಯರಾದ ಶ್ರೀ ರಾಜೀವ್ ಚಂದ್ರಶೇಖರ್ ಅಧ್ಯಕ್ಷತೆಯಲ್ಲಿ ಅಬೈಡ್ ಸಮಿತಿ ...ಚಿಸಿ, ಅದರಲ್ಲಿ ಬಿಜೆಪಿ ಸಂಸದರು, ಶಾಸಕರು, ಸಂಘ ಪರಿವಾರಕ್ಕೆ ಸಮೀಪವರ್ತಿ...ಗಳಾದ ಬುದ್ಧಿಜೀವಿಗಳನ್ನು ...ಳಗೊಳಿಸಲಾಗಿದೆ. ಮೂರು ನಾಲ್ಕು ಬೈಠಕ್‌ಗಳನ್ನು ನಡೆಸಿ, ತಮ್ಮ ರಾಜಕೀಯ ಲಾಭಕ್ಕಾಗಿನ ಬೆಂಗಳೂರು ಅಭಿವೃದ್ಧಿ ...ಲನಕ್ಷೆ, ರೋಡ್ ಮ್ಯಾಪ್ ತಯಾರಿಸಿದ್ದಾರೆ. ಅದನ್ನೇ ಇತ್ತೀಚಿನ ಸಂಸತ್ತಿನ ಚುನಾವಣೆಗೂ ಮುನ್ನ ಶ್ರೀ ಅನಂತ್‌ಕುಮಾರ್ ಮಾಜಿ ಹುಡ್ಕೋ ...ಚಿವರು, ಬೆಂಗಳೂರು ಅಭಿವೃದ್ಧಿ ಕಾರ್ಯಸೂಚಿ ಹೆಸರಿನ ಪ್ರತ್ಯೇಕ ಪ್ರಣಾಳಿಕೆ ಬಿಡುಗಡೆ ಮಾಡಿದ್ದಾರೆ. ...ಟ್ಟಾರೆ ಬೆಂಗಳೂರು ಅಂತರಾಷ್ಟ್ರೀಯ ಬಂಡವಾಳದ ಕೇಂದ್ರವಾಗುತ್ತಿರುವಾಗಲೆ, ...ರಾಷ್ಟ್ರೀಯ ಬಂಡವಾಳಕ್ಕೆ ಹಿತಾನುಭವ (feel good) ವಾತಾವರಣ ನಿರ್ಮಾಣಕ್ಕಾಗಿ ರಾಜ್ಯದ ಸರ್ಕಾರ ಟೊಂಕ ಕಟ್ಟಿ ನಿಂತಂತಿದೆ.

ಆದರೆ ಅದೇ ಸಂದರ್ಭದಲ್ಲಿ ಎ.ಟಿ.ರಾಮಸ್ವಾಮಿ ನೇತೃತ್ವದ ಸದನ ಸಮಿತಿ ಗುರುತಿಸಿದ್ದ 40 ಸಾವಿರ ಎಕರೆ ಅತಿಕ್ರಮಣಗೊಂಡಿರುವ ಸರ್ಕಾರಿ ಭೂಮಿ ಹರಾಜು ಹಾಕಲು ಮಾತ್ರವಲ್ಲ, ಇಡೀ ರಾಜ್ಯದಲ್ಲಿನ ಸರ್ಕಾರಿ ಭೂಮಿ ಮಾರಲು ಪತ್ಯೇಕ ನಿಗಮ ಸ್ಥಾಪಿಸಲು ಮುಂದಾಗಿದೆ. ಅದನ್ನೇ ವಸತಿ ನಿವೇಶನರಹಿತರಿಗೆ ನೀಡಿ ಎಂದು ನಿರಂತರ ಹೋರಾಟದ ಮೂಲಕ ಒತ್ತಾಯಿಸಿದರೂ ಅದನ್ನು ಪುರಸ್ಕರಿಸಿಲ್ಲ. ಅವರ ಮೂಗಿಗೆ ತುಪ್ಪ ಸವರಲು ಪ್ರತಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ 5,000 ಒಂದು ಲಕ್ಷ ರೂಪಾಯಿ ಮನೆ ನಿರ್ಮಿಸಿ ವಿತರಿಸುವ ಘೋಷಣೆ ಮಾಡಿದೆ. ಸ್ಲಂ ನಿವಾಸಿಗಳಿಗೆ ಹಕ್ಕು ಪತ್ರ ವಿತರಿಸುವ ಘೋಷಣೆ ಮಾಡಿದೆ. ಆದರೆ ರಿಂಗ್ ರಸ್ತೆ ವಿರಭದ್ರ ನಗರದಲ್ಲಿನ ವಲಸೆ ಕಾರ್ಮಿಕರ ಗುಡಿಸಲುಗಳ ಹಾಗೂ ತುಮಕೂರು ರಸ್ತೆ 8ನೇ ಮೈಲಿಯ ಗುಡಿಸಲುಗಳ ನೆಲಸಮ ಮಾಡಿ ನೈಸ್ ಕಂಪನಿಗಾಗಿ ಭೂಮಿಯನ್ನು ಚುನಾವಣೆ ಮುಗಿದ ಕೂಡಲೇ ತೆರವುಗೊಳಿಸಿ ನೀಡಿದೆ. ಪರ್ಯಾಯ ಸ್ಥಳವನ್ನು ನೀಡಿಲ್ಲ. ಬಹುತೇಕ ಜನರು ಉತ್ತರ ಕರ್ನಾಟಕದಿಂದ ವಲಸೆ ಬಂದಿದ್ದವರು, ಹತ್ತಾರು ವರ್ಷಗಳಿಂದ ನೆಲೆಸಿ, ಮತದಾರರ ಪಟ್ಟಿಯಲ್ಲಿ ಹೆಸರು, ಎಪಿಕ್ (EPIC) ಕಾರ್ಡ್ ಹೊಂದಿದ್ದವರು, ಸಂಸತ್ ಚುನಾವಣೆಯಲ್ಲಿ ಮತ ಹಾಕಿದ್ದವರು (ಬಹುಶಃ ಅವರು ಬಿಜೆಪಿಗೆ ಮತ ಹಾಕಿಲ್ಲ ಎಂದು ಖಾತ್ರಿ ಆಗಿರಬೇಕು).



ಮಹಾನಗರ ಪಾಲಿಕೆ ಘನ ತ್ಯಾಜ್ಯ (ಕಸ) ವಿಲೇವಾರಿಯನ್ನು ಖಾಸಗಿಯವರಿಗೆ ನೀಡಲು ಅನುಮತಿಸಲಾಗಿದೆ. jnnurm (ಜವಾಹರ್‌ಲಾಲ್ ರಾಷ್ಟ್ರೀಯ ನಗರ ಪುನರ್‌ಜೀವನ ಧ್ಯೇಯ) ಅಡಿಯ ಸಮಗ್ರ ಅಭಿವೃದ್ಧಿ ಯೋಜನೆ (ಸಿಡಿಪಿ) ಅಡಿ ವಾರ್ಷಿಕ 7000 ಕೋಟಿ ರೂಪಾಯಿ ಅನುದಾನ ಅನುದಾನ ಮಹಾನಗರದ ಅಭಿವೃದ್ಧಿಗೆ ಬೇಕಿರುವಾಗ, ರಾಜ್ಯ ಸರ್ಕಾರ ರೂ.1,700 ಕೋಟಿ ಹಣವನ್ನು ಇತ್ತೀಚಿನ ಬಜೆಟ್‌ನಲ್ಲಿ ನೀಡಿ, ಅದನ್ನೆ ದೊಡ್ಡದಾಗಿ ಪ್ರಚಾರ ಮಾಡುತ್ತಿದೆ. ಇಷ್ಟೆಲ್ಲಾ ಅಬ್ಬರ ಪ್ರಚಾರ ಮಾಡಿರುವಾಗಲೇ ರಾಜ ಕಾಲುವೆ ಒತ್ತುವರಿ ತೆರವಿಗೆ ನಿರ್ದಾಕ್ಷಿಣ್ಯ ಕ್ರಮದ ಹೂಂಕಾರದ ನಡುವೆ, ರಾಜ ಕಾಲುವೆ ಇನ್ನೂ ಪೂರ್ಣವಾಗಿ ಒತ್ತುವರಿಯಿಂದ ಮುಕ್ತಿ ಪಡೆದಿಲ್ಲ. ರಾಜಕಾಲುವೆ ಟೆಂಡರ್ ಜಾಹಿರಾತನ್ನು ಬಾಗಲಕೋಟೆ ಬಿಜಾಪುರದ ಪತ್ರಿಕೆಗಳ ಆವೃತ್ತಿಗೆ ನೀಡಿ, ಸಂಘ ಪರಿವಾರಕ್ಕೆ ನಿಕಟವಾದವರಿಗೆ ಗುತ್ತಿಗೆ ನೀಡಲಾಗಿದೆ.

ಕಾಯಕ ಸಂಸ್ಕೃತಿ !?

ಈಜಿಪುರ ಜನ ವಸತಿ ಸಮುಚ್ಚಯ ನಿರ್ಮಾಣ ಗುತ್ತಿಗೆ ತಮಗೆ ಬೇಕಾದವರಿಗೆ ನೀಡಿ, ವಸತಿ ಸಮುಚ್ಚಯ ಜನರಿಗಾದರೆ, ಉಳಿದ ಜಾಗದ ವಾಣಿಜ್ಯ ಸಂಕೀರ್ಣ ಗುತ್ತಿಗೆದಾರರಂತೆ ಹೇಗಿದೆ ನೋಡಿ ಅಭಿವೃದ್ಧಿ? ಮಹಾನಗರದ ಸೆರಗಿನಂತಿರುವ ಭಾಗದ ಕೋಟ್ಯಾಂತರ ಬೆಲೆಯ ರೈತರ ಭೂಮಿಯನ್ನು ಆರುಕಾಸಿಗೆ ಮೂರುಕಾಸಿಗೆ ವಶಪಡಿಸಿಕೊಂಡು ನೈಸ್‌ಗೆ ನೀಡಲು, ಜನರ ವಸತಿಗೆ ನೀಡಬೇಕಿದ್ದ ಜಾಗವನ್ನು ಆರ್‌ಎಸ್‌ಎಸ್‌ನ ಚನ್ನೇನಹಳ್ಳಿ ಶಾಲೆಗೆ ನೀಡಿದ್ದು, ಒಂದೇ ಎರಡೇ ಭೂಮಿ ನುಂಗುವ ಇವರ ಕಾಯಕ! ಅಂತೆಯೇ ಉಳ್ಳವರಿಗೆ ಭೂಮಿ ಹಂಚುವ ದಾಸೋಹ! ಎಂತಹ ಕಾಯಕ ಸಂಸ್ಕೃತಿ... ಎಂತಹ ದಾಸೋಹ ಸಂಸ್ಕೃತಿ !

ಪಾಪ ಬಡ ಜನತೆ ಮಕ್ಕಳ ಮದುವೆಗೆ, ಮುಂತಾದ ಕಾರ್ಯಕ್ರಮಗಳಿಗೆ ಸಾವಿರಾರು ರೂಪಾಯಿಗಳನ್ನು ಛತ್ರಗಳಿಗೆ ತೆರುತ್ತಿರುವಾಗ ಬಿಬಿಎಂಪಿ ಯ ಸಮುದಾಯ ಭವನಗಳನ್ನು ತಮ್ಮ ಕಟ್ಟಾಳು ನಾಯಕರ ಫೌಂಡೇಶನ್‌ಗಳಿಗೆ ನೀಡಲು ಸರ್ಕಾರ ನಿರತವಾಗಿದೆ. ಸಂಸದ ಅನಂತಕುಮಾರ್ ಶ್ರೀಮತಿ ನಡೆಸುವ ಅದಮ್ಯ ಚೇತನಕ್ಕೆ ಕೆಂಪೇಗೌಡನಗರ ಸಮುದಾಯ ಭವನ ಸೇರಿದೆ. ಯಾರಬ್‌ನಗರ ಸಮುದಾಯ ಭವನಕ್ಕೂ ಹೊಂಚು ಹಾಕಿ ಕುಳಿತಿದ್ದರು. ಜನರ ಹೋರಾಟದಿಂದಾಗಿ ಸದ್ಯ ಅದು ಸಾಧ್ಯವಾಗಿಲ್ಲ.

ಈ ಎಲ್ಲಾ ಹುಳುಕು ಹೊತ್ತು, ತೋರಿಕೆಗೆ ಮಾತ್ರ ಅಭಿವೃದ್ಧಿ ಮಂತ್ರ ಜಪಿಸುತ್ತಾ ಸಾರಿಗೆ ಸುಧಾರಣೆಗಾಗಿ ಮಹಾನಗರದ ಉದ್ದಗಲಕ್ಕೂ ಸಭೆ, ಸಮಾರಂಭ, ಪ್ರತಿಭಟನೆ, ಮೆರವಣಿಗೆ ನಡೆಯದಂತೆ ಮಾಡಲು ಹೊಸ ಆದೇಶವನ್ನೇ ಪೊಲೀಸ್ ಆಯುಕ್ತರ ಮೂಲಕ ರಾಜ್ಯಸರ್ಕಾರ ಹೊರಡಿಸಲು ಮುಂದಾಗಿದೆ. ಜನತೆಯ ಪ್ರತಿರೋಧ, ಪ್ರತಿಭಟನೆ ಸೊಲ್ಲಿರ ಬಾರದಂತೆ. ಹೇಗಿದೆ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳನ್ನೇ ಇಲ್ಲವಾಗಿಸುವ ಇವರ ಜನರ ಮೇಲಿನ ಪ್ರೀತಿ?

ಇಷ್ಟೆಲ್ಲಾ ಹೇಳಿದರೂ 2007 ರಲ್ಲಿ ನಡೆಯಬೇಕಿದ್ದ ಬಿಎಂಪಿ ಚುನಾವಣೆಗಳನ್ನು ಬಿಬಿಎಂಪಿ ಮಾಡುವ ಹೆಸರಿನಲ್ಲಿ ಇವರದೇ ಭಾಗೀದಾರಿ ಸರ್ಕಾರ ಮುಂದೂಡಿತ್ತು. ಬಿಬಿಎಂಪಿ ಯು ಆಯ್ತು ಆದರೆ ಅದಕ್ಕೊಂದು ಚುನಾಯಿತ ಪ್ರತಿನಿಧಿಗಳ ಆಡಳಿತ ಬರಲಿಲ್ಲ. ಅಷ್ಟರಲ್ಲಿ ಇವರದೇ ಪೂರ್ಣ ಸರ್ಕಾರ



ಬಂತು. ಬಿಬಿಎಂಪಿ ವಾರ್ಡ್‌ಗಳ 148 ಕ್ಕೆ ಹೆಚ್ಚಿಸಿ, ಆಕ್ಷೇಪಣೆಗಾಗಿ ಕರಡು ಅಧಿಸೂಚನೆಗಳೂ ಹೊರಬಂತು. ಆದರೆ ಅಂತಿಮವಾಗಲಿಲ್ಲ. ಚುನಾವಣೆಗೂ ಮುನ್ನ ತಯಾರಿ ಬೇಕಲ್ಲಾ. ಅದಕ್ಕೆ ತಯಾರಿ ಭಾಗವಾಗಿ ಆಪರೇಷನ್ ಕಮಲದಡಿ ಕಾಂಗ್ರೆಸ್ ಶಾಸಕ ಸೋಮಣ್ಣ, ಮಾಜಿ ಮೇಯರ್ ಲಕ್ಷ್ಮೀನಾರಾಯಣ ಹಾಗೂ ಡಜನ್‌ಗಟ್ಟಲೆ ಕಾರ್ಪೊರೇಟರ್‌ಗಳು, ಹತ್ತಾರು ಲ್ಯಾಂಡ್ ಡೀಲಿಂಗ್, ಕ್ರಿಮಿನಲ್ ಮೊಕದ್ದಮೆಗಳಿದ್ದ, ಅಲ್ಪಸಂಖ್ಯಾತ, ಹಿಂದುಳಿದ, ದಲಿತ ಮುಂತಾದ ಪ್ರಭಾವಿ ಹಿನ್ನೆಲೆಯ ಸ್ಥಳೀಯ ಪ್ರಮುಖರನ್ನು ತನ್ನ ತೆಕ್ಕೆಗೆ ಸೆಳೆದುಕೊಂಡಿದೆ. ಮತ್ತಷ್ಟು ಜನರನ್ನು ಸೆಳೆಯಲು ಹೊಂಚುಹಾಕಿ ಕುಳಿತಿದೆ. ಅಷ್ಟಾದರೂ ಸಂಸತ್ತಿನ ಚುನಾವಣೆಯಲ್ಲಿ ಜನಬೆಂಬಲ ಪರೀಕ್ಷಿಸಿ, ಗಟ್ಟಿಗೊಳಿಸಿ ಬಿಬಿಎಂಪಿ ಚುನಾವಣೆಗೆ ಹೋಗುವ ಮನಸ್ಸಿನಲ್ಲಿದ್ದ ಸರ್ಕಾರ, ಚುನಾವಣೆ ಮುಗಿದೊಡನೆ ಮತ್ತೊಂದು ರಾಗ ತೆಗೆದಿದೆ. ಸಚಿವ ಸಂಪುಟಕ್ಕೂ ಮುನ್ನ ತನ್ನ ಶಾಸಕರ ಸಭೆ ನಡೆಸಿ, ಸಂಸತ್ತಿನ ಚುನಾವಣೆಗಾಗಿ ದುಡಿದವರಿಗೆಲ್ಲಾ ಸತ್ಕರಿಸಬೇಕಿರುವ

ಪುಟ 6 ಕ್ಕೆ

ಸಂಗಾತಿ ಎನ್.ಎಸ್.ಪ್ರಭಾಕರ್ ಶ್ರದ್ಧಾಂಜಲಿ ಸಭೆ
ನೆನಪುಗಳ ಮೆರವಣಿಗೆ



ಕಾರ್ಮಿಕರ ದಿನವಾದ ಮೇ 1 ರಂದು ನಿಧನರಾದ ಸಂಗಾತಿ ಎನ್.ಎಸ್.ಪ್ರಭಾಕರ್ ಅವರಿಗೆ ಸಿಪಿಐ(ಎಂ) ಪಕ್ಷದ ಮೈಸೂರು ಜಿಲ್ಲಾ ಸಂಘಟನಾ ಸಮಿತಿಯು 5 ರಂದು ಭಾನುವಾರ ಶ್ರದ್ಧಾಂಜಲಿ ಸಭೆಯನ್ನು ಆಯೋಜಿಸಿತ್ತು. ಚಿಂತಕರು, ಅರ್ಥಶಾಸ್ತ್ರಜ್ಞರು, ಸಾಹಿತಿಗಳು, ರಾಜಕೀಯ ಮುಖಂಡರು, ಕಾರ್ಮಿಕರು, ನೌಕರರು ಹೀಗೆ ಎಲ್ಲರೂ ಸೇರಿ ಸಂಗಾತಿ ಪ್ರಭಾಕರ್‌ರೊಡನೆ ತಮ್ಮ ಒಡನಾಟವನ್ನು ನೆನಪಿಸಿಕೊಂಡರು. ಮೊದಲು ಮಾತನಾಡಿದ ಅಖಿಲ ಭಾರತ ವಿಮಾ ನೌಕರರ ಸಂಘದ ಅಧ್ಯಕ್ಷರಾದ ಸಂಗಾತಿ ಅಮಾನುಲ್ಲಾ ಖಾನ್ ಪ್ರಭಾಕರ್ ಜೊತೆಗಿನ ತಮ್ಮ ಮೂರು ದಶಕಗಳ ಸುದೀರ್ಘ ಸಂಬಂಧವನ್ನು ವಿವರಿಸುತ್ತಾ ವಿಮಾ ಚಳುವಳಿಯಲ್ಲಿ ಮೂಡಿ ಬಂದು ತಮ್ಮ ಇಡೀ ಬದುಕನ್ನು ದುಡಿಯುವ ವರ್ಗದ ಏಳಿಗೆಗೆ ಸಮರ್ಪಿಸಿಕೊಂಡ ಪ್ರಭಾಕರ್‌ರಂತಹ ಚೇತನಗಳು ಅಪರೂಪ ಎಂದರು.

ಸಿಪಿಐ(ಎಂ) ರಾಜ್ಯ ಸಮಿತಿಯ ಪರವಾಗಿ ಶ್ರದ್ಧಾಂಜಲಿ ಅರ್ಪಿಸಿ ಮಾತನಾಡಿದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ಜಿ.ಎನ್. ನಾಗರಾಜ್ ಕಾಂ.ಪ್ರಭಾಕರ್‌ರೊಡನೆ ತಮ್ಮ ಆತ್ಮೀಯ ಸಂಬಂಧವನ್ನು ಜ್ಞಾಪಿಸಿಕೊಂಡರು.

ತಮ್ಮ ತೀವ್ರವಾದ ಅನಾರೋಗ್ಯದ ಮಧ್ಯೆಯೇ ಪಕ್ಷದ ರಾಜ್ಯ ಸಮ್ಮೇಳನವನ್ನು ಮೈಸೂರಿನಲ್ಲಿ ಅಚ್ಚುಕಟ್ಟಾಗಿ ಆಯೋಜಿಸಿದ್ದ ಅವರ ಸಂಘಟನಾ ಚಾತುರ್ಯಕ್ಕೆ ನಿದರ್ಶನ ಎಂದು ನಾಗರಾಜ್ ಹೇಳಿದರು. ವಿಮಾ ನೌಕರರ ಚಳುವಳಿಯ ಹಲವಾರು ಇತಿಹಾಸಗಳನ್ನು ಸೃಷ್ಟಿಸುವಲ್ಲಿ ಪ್ರಭಾಕರ್ ರಾಜ್ಯ ನಾಯಕರಾಗಿ ತಮ್ಮ ಮಹತ್ವದ ಪಾಲನ್ನು ಸಂದಾಯ ಮಾಡಿದ್ದಾರೆ. ನಂಜನಗೂಡು ಕಾರ್ಮಿಕರನ್ನು ಸಂಘಟಿಸಿ ಶೋಷಣೆಯ ವಿರುದ್ಧ ಅವರನ್ನು ಅಣಿನೆರೆಸಿದಾಗ ಆ ಹೋರಾಟಗಳಿಗೆ ಒಂದು ಸ್ಪಷ್ಟ ಗುರಿಯನ್ನು ಅವರು ಗುರುತಿಸಿ ತಿಳಿ ಹೇಳುತ್ತಿದ್ದರು. ಅವರಿಲ್ಲದ ಕೊರತೆಯನ್ನು ತುಂಬುವುದು ಮೈಸೂರಿನ ಸಂಗಾತಿಗಳ ಕರ್ತವ್ಯ ಎಂದು ಕಾಂ. ನಾಗರಾಜ್ ಜ್ಞಾಪಿಸಿದರು.

ಪ್ರಭಾಕರ್‌ರವರ ಆತ್ಮೀಯರಾಗಿದ್ದ ಖ್ಯಾತ ಚಿಂತಕ, ಸಾಹಿತಿ ಲಿಂಗದೇವರು ಹಳೇಮನೆ ಮೈಸೂರಿಗೆ ಆಗಮಿಸಿದ್ದಾಗಿನ ತಮ್ಮ ಮೊದಲ ದಿನಗಳಲ್ಲಿ ಪಕ್ಷದ ಕಛೇರಿಯಲ್ಲಿ ಪ್ರಭಾಕರ್ ಹಾಗೂ ಇನ್ನಿತರ ಸಂಗಾತಿಗಳ ಜೊತೆ ಮಾರ್ಕ್ಸ್‌ವಾದದ ಬಗೆಗೆ ತಡರಾತ್ರಿವರೆಗೂ ಚರ್ಚಿಸುತ್ತಿದ್ದುದನ್ನು ನೆನಪಿಸಿಕೊಂಡರು.



ಕಾಂ. ಪ್ರಭಾಕರ್‌ರವರ ಅಧ್ಯಯನ ಶೀಲತೆ ಬೆರಗುಗೊಳಿಸುವಂಥದ್ದು ಎಂದು ಹಳೇಮನೆ ಹೇಳಿದರು.

ಪಿಯುಸಿಎಲ್‌ನ ಡಾ:ಲಕ್ಷ್ಮೀನಾರಾಯಣ ತಮ್ಮ ಮಾರ್ಕ್ಸ್‌ವಾದದ ಕಲಿಕೆಯ ಪ್ರಾರಂಭ ದಿನಗಳ ಕಾಂ. ಪ್ರಭಾಕರ್ ಜೊತೆಗಿನ ತಮ್ಮ ಸಾಂಗತ್ಯವ ನೆನಪಿಸಿಕೊಂಡರು. ಎಸ್‌ಯುಸಿಐ ನ ಶಶಿಧ ಮಾತನಾಡಿ ಪ್ರಭಾಕರ್‌ರ ಆತ್ಮೀಯ ವ್ಯಕ್ತಿತ್ವವನ ಕಾರ್ಮಿಕರ ಪರವಾದ ಅವರ ತುಡಿತ ಜ್ಞಾಪಿಸಿದರು.

ಪ್ರಭಾಕರ್‌ರವರ ಕುಟುಂಬಕ್ಕೆ ಆತ್ಮೀಯರಾಗಿ ಪಕ್ಷದ ರಾಜ್ಯ ಸಮಿತಿ ಸದಸ್ಯ ಹಾಗೂ ಸಿಐಟಿಯು ರಾಜ್ಯ ಕಾರ್ಯದರ್ಶಿ ಕಾಂ. ವರಲಕ್ಷ್ಮಿಯವ ಮೈಸೂರು ಜಿಲ್ಲೆಯಲ್ಲಿ ಅಂಗನವಾಡಿ ನೌಕರ ಸಂಘಟನೆಯನ್ನು ಕಟ್ಟುವಲ್ಲಿ ಶ್ರಮಿಸಿ ಪ್ರಭಾಕರ್‌ರವರು ದುಡಿಯುವ ಮಹಿಳೆಯ ಪರವಾದ ತಮ್ಮ ಕಾಳಜಿಯನ್ನು ಕರ್ತೃತ್ವ ಶಕ್ತಿ ಮೂಲಕ ಸಾದರಪಡಿಸಿದ್ದರು ಎಂದರು ಅವರು ಓ ಉತ್ತಮ ನಾಯಕರಾಗುವಲ್ಲಿ ಅವರ ಪ ಶ್ರೀಮತಿ ಸತ್ಯವತಿ ಹಾಗು ಕುಟುಂಬದವ ಸಹಕಾರವನ್ನು ಅವರು ಸ್ಮರಿಸಿದರು.

ಅವರು ಗುರುತಿಸಿ ಬೆಳೆಸಿದ ಕಾರ್ಮಿ ಮುಖಂಡರಾದ ಸುನಂದ ಹಾಗ ಶಶಿಕುಮಾರ್ ತಮ್ಮ ಭಾವಪ ಶ್ರದ್ಧಾಂಜಲಿಯನ್ನು ಪ್ರಭಾಕರ್ ಅರ್ಪಿಸಿದರು. ಆಂದೋಲನ ದಿನಪತ್ರಿ ಸಂಪಾದಕರಾದ ರಾಜಶೇಖರ ಕೋಟಿ ಅರ್ಥಶಾಸ್ತ್ರಜ್ಞರಾದ ಕೆ.ನಟರಾಜ ಜಾದಳದ ಮುಖಂಡ ಬಸವೇಗೌ ಹಾಗೂ ಇನ್ನಿತರರು ಭಾಗವಹಿಸಿದ್ದ ಸಭೆಯನ್ನು ಪಕ್ಷ ಕಾರ್ಯದರ್ಶಿಗಳಾದ ಜಗನ್ನಾಥ ನಿರ್ವಹಿಸಿದರು.

● ಎನ್. ವಿಜಯಕುಮಾ

ಭೂ ಮಾಫಿಯಾ ಋಣ ತೀರಿಸಲು...

ಪುಟ 3 ರಿಂದ

ಕೃಷಿಕರಿಗೆ ಸಾಲ ನೀಡಿದ ಬಡ್ಡಿ ಸಾಹುಕಾರು, ದಲ್ಲಾಳಿಗಳು, ಕಪ್ಪು ಹಣದ ಖದೀಮರು ತಾವು ನೀಡಿದ ಸಾಲಕ್ಕೆ ಒತ್ತೆಯಾಗಿರುವ ಭೂಮಿಯನ್ನು ವಶಪಡಿಸಿಕೊಳ್ಳಲು ಅವಕಾಶ ನೀಡಬಾರದು, ಕಾನೂನು ಬರಹ ಗೊತ್ತಿಲ್ಲದ ರೈತರನ್ನು ಇತರೆ ಬಡಜನರನ್ನು ಅವರ ಬಳಿ ಇರುವ ಅಲ್ಪಸ್ವಲ್ಪ ಭೂಮಿಯನ್ನು ಕಬಳಿಸಲು ಸುಳ್ಳು ಸಾಲ ಪತ್ರಗಳನ್ನು ಸೃಷ್ಟಿಸುವ ದರೋಡೆಗಾರರಿಂದ ರಕ್ಷಿಸಬೇಕು ಎಂಬುದು ಈ ನಿಯಮದ ಉದ್ದೇಶವಾಗಿತ್ತು. ಈಗ ಕೃಷಿ ಬಿಕ್ಕಟ್ಟಿನಿಂದ ರೈತರ ಬಳಲುತ್ತಿರುವಾಗ, ಸಾಲದ ಬಾಧೆಯಿಂದ ಲಕ್ಷಾಂತರ ರೈತರ ಆತ್ಮಹತ್ಯೆಗೆ ಮುಂದಾಗಿರುವಾಗ ಅವರನ್ನು ಈ ಸಾಲದಿಂದ ವಿಮುಕ್ತರನ್ನಾಗಿ ಮಾಡುವುದು ಹೇಗೆ? ಋಣ ಮುಕ್ತ ಕಾಯಿದೆಯನ್ನು ತಂದು ಅವರನ್ನು ಸಾಲಗಾರರ ಬಾಧೆಯಿಂದ ರಕ್ಷಣೆ ಮಾಡುವುದು ಅವಶ್ಯವಲ್ಲವೇ? ಇಂತಹ ದಿಕ್ಕಿನಲ್ಲಿ ನಮ್ಮ ನೆರೆಯ ಕೇರಳ ಎಡಪಂಥೀಯ ಸರ್ಕಾರ ಯೋಚಿಸುತ್ತಿರುವಾಗ ಕರ್ನಾಟಕದ ಬಿಜೆಪಿ ಸರ್ಕಾರ ಅದರ ವಿರುದ್ಧ ದಿಕ್ಕಿನಲ್ಲಿ, ಕಷ್ಟದಲ್ಲಿರುವ ಕೃಷಿಕರ ಭೂಮಿಯನ್ನು ಅಥವಾ ಕೃಷಿಕರ ಕಷ್ಟವನ್ನು ಮತ್ತಷ್ಟು ಬಿಗಡಾಯಿಸಿ ಅವರ ಭೂಮಿಯನ್ನು ಲಪಟಾಯಿಸುವ ಕೃತ್ಯಕ್ಕೆ ತೆರೆದ ಅವಕಾಶವನ್ನು ನೀಡುವ ಕೆಲಸಕ್ಕೆ ಕೈ ಹಾಕಿದೆ.

ಈ ರೀತಿ ಕೃಷಿ ಭೂಮಿಯನ್ನು ಕೊಂಡಮೇಲೆ ಅದು ಕೃಷಿ ಭೂಮಿಯನ್ನಾಗಿಯೇ ಉಳಿಸಿಕೊಳ್ಳಬೇಕಾಗಿ ಬಂದರೆ ಕಪ್ಪು ಹಣದ ಖದೀಮರಿಗೆ, ಭೂ ಮಾಫಿಯಾಗಳಿಗೆ, ಮಾರುಕಟ್ಟೆ ದಲ್ಲಾಳಿಗಳಿಗೆ ಏನು ಪ್ರಯೋಜನ? ಕೃಷಿ ಭೂಮಿಯು ಲಾಭ ಕೊಳ್ಳೆ ಹೊಡೆಯುವ ಸಾಧನವಾಗಬೇಕಾದರೆ ಭೂ ಪರಿವರ್ತನೆಬೇಕು. ಹೀಗಾಗಿ ನಗರ, ಪಟ್ಟಣ, ಗ್ರಾಮಗಳ ಸುತ್ತ ಕೂಡ ಭೂ ಪರಿವರ್ತನೆ ಗ್ರಾಮ ಪಂಚಾಯ್ತಿಗಳಿಗೆ ಭೂ ಪರಿವರ್ತನೆಯ ಅಧಿಕಾರ.

ಭೂ ಪರಿವರ್ತನೆಗೆ ಏಕೆ ಇಷ್ಟೊಂದು ನಿರ್ಬಂಧಗಳನ್ನು ಹೇರಲಾಗಿತ್ತು? ಆಹಾರದ ಕೊರತೆಯಿರುವ ಈ ನಾಡಿನಲ್ಲಿ ಕೃಷಿ ಭೂಮಿ ಕೃಷಿಯಿಂದ ಹೊರಗೆ ಹೋಗಬಾರದು. ಇಡೀ ದೇಶಕ್ಕೆ ಆಹಾರದ ಬಿಕ್ಕಟ್ಟು ಸೃಷ್ಟಿಸಬಾರದು, ಆಹಾರದ ಬೆಲೆ ಏರಿಕೆಗೆ ಕಾರಣವಾಗಬಾರದು ಎಂಬ ಉದ್ದೇಶ ಆ ನಿಯಮಗಳಲ್ಲಿ ಅಡಗಿತ್ತು. ಈಗ ಆಹಾರದ ಬೆಲೆ ಗಗನಕ್ಕೆರುತ್ತಿರುವಾಗ, ಆಹಾರದ ಕೊರತೆಯಿಂದ ಶೇ.70ಕ್ಕಿಂತ ಹೆಚ್ಚು ಜನತೆ ಬಳಲುತ್ತಿರುವಾಗ ಯಡ್ಡಿಯೂರಪ್ಪನವರಿಂದ ಈ ಮುಕ್ತ ಕೊಡುಗೆ ಎರಡು ಹೊತ್ತಿನ ಊಟಕ್ಕೆ ಗತಿಯಿಲ್ಲದ ಶೇ 70ರಷ್ಟು ಕರ್ನಾಟಕದ, ಭಾರತದ ಜನತೆಗೆ .

ಬೆಂಗಳೂರು ಅಭಿವೃದ್ಧಿ ಮಂತ್ರ

ಪುಟ 5 ರಿಂದ

ಕಾರಣ 148 ಕ್ಷೇತ್ರಗಳ (ವಾರ್ಡ್‌ಗಳ) ಹೆಚ್ಚಿಸಲು ಬಿಜೆಪಿ ಪಟಾಲಮ್ ಒತ್ತಾಯಿಸಿದ ಕಾರಣ ವಾರ್ಡ್‌ಗಳನ್ನು 198 ಕ್ಕೆ ಹೆಚ್ಚಿಸಲು ಸಚಿವ ಸಂಪುಟದಲ್ಲಿ ನಿರ್ಣಯಿಸಿದೆ. ಆಗಸ್ಟ್ ಒಳಗೆ ಚುನಾವಣೆ ನಡೆಸಲು ಹೈಕೋರ್ಟ್ ಅಂತಿಮ ಗಡುವು ನೀಡಿ, ತಾಕೀತು ಮಾಡಿದೆ. ಅದನ್ನು ತಪ್ಪಿಸಿಕೊಳ್ಳಲು 148 ಅನ್ನು 198 ಕ್ಕೆ ಹೆಚ್ಚಿಸುವ, 30 ಸಾವಿರ ಜನಸಂಖ್ಯೆಗೊಂದು ವಾರ್ಡ್ ರೂಪಿಸುವ ಮಾತಾಡಿದೆ. ಅಂದರೆ ಮತ್ತೊಮ್ಮೆ ವಾರ್ಡ್ ವಿಂಗಡಣೆ ನಂತರ ಕರಡು ಅಧಿಸೂಚನೆ. ಆನಂತರ ಮೀಸಲಾತಿ ಪ್ರಕಟಣೆ ಮುಂತಾದ ಕೆಲಸ ನಡೆಯಬೇಕು. ಈ ನಡುವೆ ಮೇಯರ್‌ಗೆ ನೇರ ಚುನಾವಣೆ, ಮೇಯರ್ ಇನ್ ಕೌನ್ಸಿಲ್ ಮುಂತಾದ ವಾದಗಳು ಮಂಡಿತವಾಗಿವೆ. ಅದಕ್ಕೂ ಅಗತ್ಯ ಕಾನೂನು ತಿದ್ದುಪಡಿ ಹೆಸರಿನಲ್ಲಿ ಮತ್ತಷ್ಟು ಸಮಯ ದೂಡುವ, ಆ ಮೂಲಕ ತನಗೆ ಬಿಬಿಎಂಪಿ ಹಿಡಿಯಲು ಬೇಕಿರುವ ಅಗತ್ಯ ತಯಾರಿಗೆ ಸಂಪನ್ಮೂಲ ಸಂಗ್ರಹಿಸುವ (ಧನ ಕನಕಾದಿ), ತೋರಿಕೆಗೆ ರಸ್ತೆ, ಚರಂಡಿ ಮಾಡಿಸುವ, ಮತ್ತಷ್ಟು ಯೋಜನೆಗಳ ಪ್ರಕಟಿಸುವ, ಹೋರಾಟಗಳ ಹಣಿಯುವ, ಇತರೆ ಮುಖಂಡರ ಪಕ್ಷಕ್ಕೆ ಸೆಳೆಯುವ ತನ್ನ ಎಲ್ಲಾ ಕೆಲಸಗಳಿಗೆ ಅಗತ್ಯ ಸಮಯಕ್ಕಾಗಿ ಕಳೆದ ಒಂದು ವರ್ಷದಿಂದ, (ಅದಕ್ಕೂ ಮುನ್ನಾದಿಂದಲೂ) ಬಿಬಿಎಂಪಿ ಗೊಂದು ಚುನಾಯಿ ಪ್ರಾತಿನಿಧ್ಯವಿರದಂತೆ ನೋಡಿಕೊಂಡಿದೆ. ಇನ್ನೇ ನಡೆದುಬಿಟ್ಟಿತು ಚುನಾವಣೆ ಎನ್ನುವಷ್ಟರಲ್ಲಿ ಅ ಮುಂದೂಡುವ ಕೆಲಸ ಮಾಡುತ್ತಾ ಬಂದಿದೆ ಸರ್ಕಾರ. ಹೈಕೋರ್ಟ್‌ನ ಎಚ್ಚರಿಕೆಗಳಿಗೂ ಮಣಿ ಭಂಡತನ ಪ್ರದರ್ಶಿಸಿದೆ. ಅಧಿಕಾರಿಗಳ ಮೂ ಇಡೀ ಮಹಾನಗರದ ಕುಡಿಯುವ ನೀರಿನ ಪೈ ಬದಲಾಯಿಸುವ, ಒಳಚರಂಡಿ ಪೈ ಬದಲಾಯಿಸುವ ರಸ್ತೆಗೆ ತಾರ್, ಸಾರಿಗೆ ನಿಯಂತ್ರ ಸುಧಾರಣೆ ಮುಂತಾದ ಯೋಜನೆಗಳ ಸಾವಿರಾ ಕೋಟಿ ರೂಪಾಯಿಗಳ ಯೋಜನೆಗಳನ್ನು ಉಸ್ತುವಾ ಸಚಿವರ ಮುಷ್ಠಿ ಹಿಡಿತದಲ್ಲಿರಿಸಿಕೊಂಡ ಚುನಾವಣೆಗೆ ಅಗತ್ಯ ಸಂಪನ್ಮೂಲ ಸಂಗ್ರಹಿಸಲು ತಾವು ಸಂಪನ್ನರಾಗಿ ಪಕ್ಷವನ್ನು ಸಂಪನ್ನವಾಗಿಸ ಅಭಿವೃದ್ಧಿ ಮಂತ್ರ ಜಪಿಸುತ್ತಾ, ಚುನಾವ ಮುಂದೂಡುವ ತಂತ್ರದಲ್ಲಿ ಸರ್ಕಾರ ಮಗ್ನವಾಗಿ ಸಂಸತ್ ಚುನಾವಣೆಯಲ್ಲಿ ಬಿಬಿಎಂಪಿ ವ್ಯಾಪ್ತಿ ಎಲ್ಲಾ ಕ್ಷೇತ್ರಗಳಲ್ಲಿ ಪಡೆದಿರುವ ಉತ್ತಮ ಮತಗ ಪರಿಣಾಮವಾಗಿ ಅದರ ಬಿಸಿಯಲ್ಲೇ ಬಿಬಿಎಂ ಯನ್ನು ಗೆಲ್ಲಲೂ ಮುಂದಾಗಲೂ ಕೂಡಲೇ ದಿಢೀ ಚುನಾವಣೆ ತಂತ್ರಕ್ಕೂ ಮುಂದಾಗಬಹುದು. ಒಟ್ಟಾ ಇವರ ಅಭಿವೃದ್ಧಿ ಮಂತ್ರ, ಚುನಾವಣೆ ಗೆ ತಂತ್ರವಾಗಿ ಅದಕ್ಕಾಗಿ ಮುಂದೂಡಲು ಸ ಧಿಡೀರೆಂದು ನಡೆಸಲು ಸೈ ಎಂಬಂತಿದೆ.

ಜನಗಳಿಗೆ ತುರ್ತಾಗಿ ಪರಿಹಾರ ಬೇಕಿದೆ

ಹಲವು ವಾರಗಳ ತೀವ್ರ ಚುನಾವಣಾ ಪ್ರಚಾರ ಕಾರ್ಯದಲ್ಲಿ ಒಂದಂಶ ಪ್ರಧಾನವಾಗಿ ಕಾಣುತ್ತಿತ್ತು. ಎಲ್ಲೆಡೆಯೂ ಜನ ತಮ್ಮ ದೈನಂದಿನ ಹೊರೆಗಳಿಂದ ಪರಿಹಾರ ಕೇಳುತ್ತಿರುವುದು ಸ್ಪಷ್ಟವಾಗಿ ಕಾಣುತ್ತಿತ್ತು. ಯಾವುದೇ ಸರಕಾರ ಇಂತಹ ಸನ್ನಿವೇಶದಲ್ಲಿ ಜನಗಳಿಗೆ ಪರಿಹಾರ ಒದಗಿಸಲು ಅದು ಆರ್ಥಿಕ ಸನ್ನಿವೇಶವನ್ನು ತುರ್ತಾಗಿ ಎದುರಿಸಬೇಕಾಗುತ್ತದೆ. ಹೊಸ ಸರಕಾರ ಇದನ್ನು ಮಾಡಲು ನಿರಾಕರಿಸಿದರೆ, ಅಥವಾ ಅಸಮರ್ಥವಾದರೆ, ಆಗ ದೇಶದ ಮತ್ತು ಜನಗಳ ಹಿತಗಳ ರಕ್ಷಣೆಗಾಗಿ ಜನಹೋರಾಟಗಳನ್ನು ತೀವ್ರಗೊಳಿಸಬೇಕಾಗುತ್ತದೆ ಎನ್ನುತ್ತಾರೆ ಡಾರ್ಜಿಲಿಂಗ್‌ನಿಂದ ಕನ್ಯಾಕುಮಾರಿ, ರಾಜಸ್ತಾನದ ಸಿಕಾರ್‌ನಿಂದ ಅಸ್ಸಾಂನ ಬರ್ಪೆಟಾದ ವರೆಗಿನ ಈ ಪ್ರಚಾರದಲ್ಲಿ ಒಂದು ಪ್ರಮುಖ ಪಾತ್ರ ವಹಿಸಿದ ಹಿರಿಯ ಸಿಪಿಐ(ಎಂ) ಮುಖಂಡರಾದ

ಸೀತಾರಾಂ ಯೆಚೂರಿ

ಒಂದು ದೀರ್ಘ ಮತ್ತು ಶ್ರಮದಾಯಕ ಚುನಾವಣಾ ಪ್ರಚಾರ ಮುಗಿದಿದೆ. ಫಲಿತಾಂಶ ಹೊರಬಂದಿದೆ. ಆದರೂ ಇಲ್ಲಿ ಕೆಲವು ಅಂಶಗಳನ್ನು ಹೇಳಬೇಕಾಗಿದೆ.

ದಾರ್ಜಿಲಿಂಗ್‌ನಿಂದ ಕನ್ಯಾಕುಮಾರಿಯ ವರೆಗೆ, ರಾಜಸ್ತಾನದ ಸಿಕಾರ್‌ನಿಂದ ಅಸ್ಸಾಂನ ಬರ್ಪೆಟಾದ ವರೆಗೆ ಆರು ವಾರಗಳ ಪ್ರಚಾರ ಕಾರ್ಯದಲ್ಲಿ ಒಂದಂಶ ಪ್ರಧಾನವಾಗಿ ಕಾಣುತ್ತಿತ್ತು. ಎಲ್ಲೆಡೆಯೂ ಜನ ತಮ್ಮ ದೈನಂದಿನ ಹೊರೆಗಳಿಂದ ಪರಿಹಾರ ಕೇಳುತ್ತಿರುವುದು ಸ್ಪಷ್ಟವಾಗಿ ಕಾಣುತ್ತಿತ್ತು. ಜಾಗತಿಕ ಹಿಂಜರಿತದ ಪರಿಣಾಮವಾಗಿ ಹೆಚ್ಚುತ್ತಿರುವ ನಿರುದ್ಯೋಗ, ಜತೆಗೆ ಜೀವನಾವಶ್ಯಕ ವಸ್ತುಗಳ ಬೆಲೆಗಳ ನಾಗಾಲೋಟ ಜನಗಳ ಮೇಲೆ ದುಪ್ಪಟ್ಟು ದಾಳಿ ಮಾಡುತ್ತಿವೆ. ಈ ಪರಿಹಾರವನ್ನು ಕೊಡುವುದು ಹೇಗೆ ಎಂಬುದು ರಾಜಕೀಯ ಪಕ್ಷಗಳು, ಅವುಗಳ ಅಭ್ಯರ್ಥಿಗಳು ಮತ್ತು ಮುಂದೆ ಅಧಿಕಾರ ವಹಿಸಲಿರುವ ಸರಕಾರದ ಮುಂದಿದೆ.

ಈ ಭಾವನೆ ಮಾಧ್ಯಮಗಳಲ್ಲಿ, ಅದರಲ್ಲೂ ಇಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಬಂದಿರುವ ವರದಿಗಳಿಗಿಂತ ಸಂಪೂರ್ಣವಾಗಿ ಭಿನ್ನವಾಗಿ ದೆಯಲ್ಲಾ ಎಂದನಿಸಬಹುದು. ಕೋಲಾಹಲಕಾರೀ ಸುದ್ದಿಗಳಿಗಾಗಿಯೇ ಹುಡುಕಾಡುವ, ಅದರಿಂದಾಗಿ ಕ್ಷುದ್ರ ಮತ್ತು ಕೆಲಸಕ್ಕೆ ಬಾರದ ಅಂಶಗಳ ಮೇಲೆಯೇ ಒತ್ತು ಕೊಡುವ ಈ ಮಾಧ್ಯಮಗಳು ಇದು ಯಾವುದೇ ಪ್ರಮುಖ ಪ್ರಶ್ನೆಯೇ ಇಲ್ಲದ ಚುನಾವಣೆ ಎಂದು ಬಿಂಬಿಸಲು ಪ್ರಯತ್ನಿಸಿದವು.


'ಮತದಾರ' ಮತ್ತು 'ಜನತೆ'

ಒಂದು ರೀತಿಯಲ್ಲಿ ಇದು "ಹೊಳೆಯುತ್ತಿರುವ" ಮತ್ತು "ನರಳುತ್ತಿರುವ" ಭಾರತದ ನಡುವೆ ಎಂತಹ ಸಂಬಂಧವಿದೆ ಅಥವಾ ಇಲ್ಲ ಎಂಬುದನ್ನು ತೋರಿಸುತ್ತದೆ. ಇಂಗ್ಲೀಷ್ ಸುದ್ದಿ ವಾಹಿನಿಗಳನ್ನು ನೋಡುವವರು ಬಹಳಷ್ಟು ಮಂದಿ ಮಹಾನಗರಗಳ ಮೇಲ್ವರ್ಗಗಳ ಮಂದಿ. ಅವರಲ್ಲಿ ಬಹಳಷ್ಟು ಮಂದಿ ಮತದಾನದಲ್ಲಿ ಭಾಗವಹಿಸಿಯೂ ಇಲ್ಲ. ಅಲ್ಲಿ ಮತದಾನ ಮಾಡಿದವರಲ್ಲಿ ಬಹಳಷ್ಟು ಮಂದಿ ಈ ಮೇಲ್ವರ್ಗಗಳ ಅಗತ್ಯಗಳನ್ನು ಪೂರೈಸುವ ದುಡಿಯುವ ವಿಭಾಗಗಳವರು. 'ಮತದಾರ' ಮತ್ತು 'ಜನತೆ'ಯ ನಡುವೆ ಈ ರೀತಿ ವ್ಯತ್ಯಾಸ ಬೆಳೆಯುತ್ತಿರುವುದು ನಮ್ಮ ಪ್ರಜಾಪ್ರಭುತ್ವದ ಭವಿಷ್ಯತ್ತಿಗೆ ದುರದೃಷ್ಟಕರ.

ಪ್ರಚಾರದ ವಿಷಯಕ್ಕೆ ಹಿಂದಿರುಗೋಣ. ಅಧಿಕಾರ ವಹಿಸಿಕೊಳ್ಳುತ್ತಿರುವ ಹೊಸ ಸರಕಾರದಿಂದ ಜನ ತಮಗೆ ಪರಿಹಾರ ಒದಗಿಸುವ ತುರ್ತು ಕ್ರಮಗಳನ್ನು ನಿರೀಕ್ಷಿಸುತ್ತಿದ್ದಾರೆ. ಆದರೆ ಇದು ಧೋರಣೆಯ ದಿಕ್ಕಿನಲ್ಲಿ ತೀವ್ರ ಬದಲಾವಣೆ ತಂದು ಲಾಭಗಳಿಗಿಂತ ಜನತೆ ಮುಖ್ಯ ಎಂದು ಬಗೆದರೆ ಮಾತ್ರ ಸಾಧ್ಯ. ಉದ್ಯೋಗಾವಕಾಶ ಮತ್ತು ಆಂತರಿಕ ಬೇಡಿಕೆಗಳನ್ನು ಹೆಚ್ಚಿಸಲು ಸಾರ್ವಜನಿಕ ಹೂಡಿಕೆಗಳನ್ನು ಅಪಾರವಾಗಿ ವಿಸ್ತರಿಸುವ ಧೈರ್ಯ ಮತ್ತು ಬದ್ಧತೆ ಇರುವ ಒಂದು ಸರಕಾರ ಮಾತ್ರವೇ ಈ ಸವಾಲುಗಳನ್ನು ಸ್ವೀಕರಿಸಿ ಜನಗಳಿಗೆ ಪರಿಹಾರ ನೀಡಲು ಸಾಧ್ಯ.

ಹಣದ ಹೊಳೆ

ಈ ಚುನಾವಣೆಗಳ ಇನ್ನೊಂದು ಲಕ್ಷಣವೆಂದರೆ ದೇಶದ ಹಲವು ಭಾಗಗಳಲ್ಲಿ ಹಿಂದೆಂದೂ ಕಂಡಿರದ ರೀತಿಯಲ್ಲಿ ಹಣಬಲದ ಉಪಯೋಗ. ಅಗಾಧ ಪ್ರಮಾಣದಲ್ಲಿ ಖರ್ಚು ಮಾಡಲಾಗಿದೆ. ಜಾಗತಿಕ ಹಿಂಜರಿತದ



ಹಿನ್ನೆಲೆಯಲ್ಲಿ ನಡೆದಿರುವ ಸಾರ್ವತ್ರಿಕ ಚುನಾವಣೆಗಳಲ್ಲಿ ಇದೊಂದು ಆಕಸ್ಮಿಕವಾಗಿರಬಹುದು ಎಂಬುದು ನಿಜಕ್ಕೂ ವ್ಯಂಗ್ಯವೇ ಸರಿ. ಬಹುಶಃ ಈ ಖರ್ಚುಗಳು ಈಗ ಆರ್ಥಿಕಕ್ಕೆ ಬಹಳವಾಗಿ ಅಗತ್ಯವಾಗಿದ್ದ ಉತ್ತೇಜನ ಕೊಡಬಹುದೇನೋ. ಚುನಾವಣೆಗಳ ಸಮಯದಲ್ಲಿ ಪ್ರತಿಯೊಂದು ಸ್ತರದಲ್ಲೂ- ಕಸ ಹೆಕ್ಕುವವರಿಂದ ಹಿಡಿದು ಕಾರ್ಪೊರೇಟ್ ಎಕ್ಸೆಕ್ಯುಟಿವ್ ವರೆಗೆ ಎಲ್ಲರಿಗೂ- ಫಲದಾಯಕ ಉದ್ಯೋಗ ಸಿಗುತ್ತದೆ ಎಂಬುದೇನೋ ನಿಜವೇ. ಈ ಚುನಾವಣೆಗಳಿಗೆ ಬಜೆಟ್ 9700 ಕೋಟಿ ರೂ. ಇಟ್ಟಿತ್ತು(ಇದು ಸಾಮಾನ್ಯವಾಗಿ ಆಗುವಂತೆ ಸಾಕಷ್ಟು ಹೆಚ್ಚಾಗ ಬಹುದು).

ಚುನಾವಣಾ ಆಯೋಗ ಒಂದು ಚುನಾವಣಾ ಕ್ಷೇತ್ರದಲ್ಲಿ ಒಬ್ಬ ಅಭ್ಯರ್ಥಿ 35 ಲಕ್ಷ ರೂ. ವರೆಗೆ ಖರ್ಚು ಮಾಡಬಹುದು ಎಂಬ ಮಿತಿ ಹಾಕಿದೆ. ಆದರೆ ಪಕ್ಷಗಳು ಅಥವಾ ಅವರ ಹಿತೈಷಿಗಳು ಮಾಡುವ ಖರ್ಚಿನ ಮೇಲೆ ಮಿತಿಯಿಲ್ಲ (ಉದಾ: ಬಿಜೆಪಿ ತನ್ನ ಅಧ್ಯಕ್ಷರ ಕೇವಲ ಆರು ಗಂಟೆಗಳ ಪ್ರಚಾರಕ್ಕೆ ಒಂದು ಹೆಲಿಕಾಪ್ಟರ್‌ಗಾಗಿ 72ಲಕ್ಷ ರೂ. ತೆತ್ತಿದೆ ಎಂದು ವರದಿಯಾಗಿದೆ!). ಈಗಿನ ಅಪಾರ ವೆಚ್ಚಗಳನ್ನು ನೋಡಿದರೆ ಪ್ರಧಾನ ಪಕ್ಷಗಳು ಪ್ರತಿ ಅಭ್ಯರ್ಥಿಗೆ ಸುಮಾರು 10 ಕೋಟಿ ರೂ. ಖರ್ಚು ಮಾಡಿರಬೇಕು ಎಂದು ಅಂದಾಜು ಮಾಡಲಾಗಿದೆ. ಪ್ರತಿಯೊಂದು ಚುನಾವಣಾ ಕ್ಷೇತ್ರದಲ್ಲಿ ಎಲ್ಲಾ ಅಭ್ಯರ್ಥಿಗಳು ಸೇರಿ ಏನಿಲ್ಲೆಂದರೂ 25 ಕೋಟಿ ರೂ. ಖರ್ಚು ಮಾಡಿರುತ್ತಾರೆ ಎಂದು ವಿವಿಧ ಸ್ವತಂತ್ರ ಅಂದಾಜುಗಳು ಸೂಚಿಸುತ್ತವೆ. ಇದನ್ನು ಬಜೆಟ್ ಕೊಟ್ಟಿರುವ ಹಣಕ್ಕೆ ಸೇರಿಸಿದರೆ ಕನಿಷ್ಟ ರೂ.30000 ಕೋಟಿ ಹಣ ಖರ್ಚಾಗಿರುತ್ತದೆ. ಜತೆಗೆ ಸಾಕಷ್ಟು ಕಪ್ಪು ಹಣವೂ ಬಿಳಿಯಾಗಿರುತ್ತದೆ.

ಇತ್ತೀಚಿನ ಕರ್ನಾಟಕ ವಿಧಾನಸಭಾ ಚುನಾವಣೆಗಳಲ್ಲಿ 1000ರೂ. ಮತ್ತು 500ರೂ. ನೋಟುಗಳ ಕಂತೆಗಳಿದ್ದ ಗೋಣಿ ಚೀಲಗಳು ತುಂಬಿಕೊಂಡಿದ್ದ ಎರಡು ಕಾರುಗಳನ್ನು ಪೋಲೀಸರು ಹಿಡಿದರು ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಕೇವಲ ಆಂಧ್ರಪ್ರದೇಶದಲ್ಲೇ ಪೋಲೀಸರು ಈ ಚುನಾವಣೆಗಳಲ್ಲಿ ವಿವಿಧ ಚುನಾವಣಾ ಕ್ಷೇತ್ರಗಳಿಗೆ ರವಾನೆಯಾಗುತ್ತಿದ್ದ 40 ಕೋಟಿರೂ.ಗಳಿಗಿಂತಲೂ ಹೆಚ್ಚು ಮೊತ್ತವನ್ನು ವಶಪಡಿಸಿಕೊಂಡಿದ್ದಾರೆ ಎಂದು ವರದಿಯಾಗಿದೆ.

ಬಿಜೆಪಿ ಮತ್ತು ಅದರ ಅಭ್ಯರ್ಥಿಗಳು ಕೋಮುಧ್ರುವೀಕರಣ ತರಲು ಮಾಡಿದ ಪ್ರಯತ್ನಗಳು ಅಪೇಕ್ಷಿತ ಫಲ ನೀಡಿಲ್ಲವೆಂಬುದು ಸಮಾಧಾನದ ಸಂಗತಿ. ಅತಿ ಕೆಟ್ಟ ಸ್ವರೂಪದ "ವೋಟ್ ಬ್ಯಾಂಕ್" ರಾಜಕೀಯ ನಡೆಸಿದ ಬಿಜೆಪಿ ಕೋಮುವಾದಿ ಭಾವೋದ್ವೇಗವನ್ನು ಬಡಿದೆಬ್ಬಿಸಲು ಪ್ರಯತ್ನಿಸಿತು. ಒಳಗೊಳಗೇ ಕೋಮುವಾದಿ ಭಾವನೆಗಳಿದ್ದರೂ ಬಿಜೆಪಿ ನಿರೀಕ್ಷಿಸಿದಂತೆ ಅದನ್ನು ತಾರಕಕ್ಕೆ ಒಯ್ಯುವುದು ಸಾಧ್ಯವಾಗಲಿಲ್ಲ.

ಹೊಸ ಸರಕಾರಕ್ಕೆ ಸವಾಲು

ಎಡಪಕ್ಷಗಳು ದೇಶದಲ್ಲಿ ಧೋರಣೆಗಳ ದಿಕ್ಕಿನಲ್ಲಿ ಒಂದು ತೀವ್ರ ಪರಿವರ್ತನೆಯನ್ನು ತರಬಲ್ಲ ಒಂದು ಕಾಂಗ್ರೆಸ್ಸೇತರ, ಬಿಜೆಪಿಯೇತರ ಪರ್ಯಾಯ ಜಾತ್ಯಾತೀತ ಸರಕಾರದ ರಚನೆಗೆ ಅವಿರತವಾಗಿ ಶ್ರಮಿಸಿದವು. ಇದೀಗ ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ರಚನೆಯಾಗುತ್ತಿದೆ. ಜನಗಳಿಗೆ ಪರಿಹಾರ ಒದಗಿಸಲು ಅದು ಆರ್ಥಿಕ ಸನ್ನಿವೇಶವನ್ನು ತುರ್ತಾಗಿ ಎದುರಿಸಬೇಕಾಗುತ್ತದೆ. ಹೊಸ ಸರಕಾರ ಇದನ್ನು ಮಾಡಲು ನಿರಾಕರಿಸಿದರೆ, ಅಥವಾ ಸಾಕಷ್ಟು ಕ್ರಮಗಳ ಮೂಲಕ ಈ ಸವಾಲನ್ನು ಎದುರಿಸಲು ಅಸಮರ್ಥವಾದರೆ, ಆಗ ದೇಶದ ಮತ್ತು ಜನಗಳ ಹಿತಗಳ ರಕ್ಷಣೆಗಾಗಿ ಜನಹೋರಾಟಗಳನ್ನು ತೀವ್ರಗೊಳಿಸಬೇಕಾಗುತ್ತದೆ. ○

ಒಂದು ಸಹಜ ಪ್ರಶ್ನೆ

ಮೇ 13ರ ಸಂಜೆ 5ಗಂಟೆಗೆ 15ನೇ ಲೋಕಸಭಾ ಚುನಾವಣೆಗಳಲ್ಲಿ ಮತದಾನ ಪ್ರಕ್ರಿಯೆ ಮುಗಿಯಬೇಕಾಗಿತ್ತು. ಆದರೆ ಹಾಗಾಗಲಿಲ್ಲ. ಉದಾ: ಪಶ್ಚಿಮ ಬಂಗಾಳದ ಮಥುರಾಪುರ ಕ್ಷೇತ್ರದಲ್ಲಿ 101 ಮತದಾನ ಕೇಂದ್ರಗಳಲ್ಲಿ ಮತದಾನ ಯಂತ್ರ ಕೆಟ್ಟುದರಿಂದ ಮರು ಮತದಾನ ನಡೆಯಬೇಕಾಯಿತು. ಆದರೆ ಈ ನಡುವೆ ಮತದಾನ ಪ್ರಕ್ರಿಯೆ ಮುಗಿಯಿತು ಎಂದು ಎಕ್ಸಿಟ್ ಪೋಲ್‌ಗಳ ಫಲಿತಾಂಶಗಳು ಪ್ರಕಟವಾಗಲಾರಂಭಿಸುತ್ತವೆ, ಇದನ್ನು ಮುಂದೂಡಿರಿ, ಇಲ್ಲವಾದರೆ ಮತದಾರರ ಮೇಲೆ ಇದು ಅನಗತ್ಯ ಪ್ರಭಾವ ಬೀರುತ್ತದೆ ಎಂದು ಚುನಾವಣಾ ಆಯೋಗವನ್ನು ಎಷ್ಟು ಕೇಳಿಕೊಂಡರೂ ಅದು ಕಿವಿಗೊಡಲಿಲ್ಲ. ಈ ಮರುಮತದಾನ ಎಡಪ್ರಭಾವದ ಪಶ್ಚಿಮ ಬಂಗಾಳದಲ್ಲಿ ನಡೆಯದೆ ಅಡ್ವಾಣಿಯವರ ಗಾಂಧಿನಗರದಲ್ಲೋ ಅಥವಾ ಸೋನಿಯಾ ಗಾಂಧಿಯವರ ರಾಯಬರೇಲಿಯಲ್ಲೋ ನಡೆದಿದ್ದರೆ ಹೀಗಾಗುತ್ತಿತ್ತೇ ಎಂಬ ಪ್ರಶ್ನೆ ಸಹಜವಾಗಿ ಏಳುವುದಿಲ್ಲವೇ?

ರಾಜ್ಯದಲ್ಲಿ ಲೋಕಸಭಾ ಚುನಾವಣೆಗಳು

ರಾಜ್ಯದಲ್ಲಿ ಆಡಳಿತಾರೂಢ ಬಿಜೆಪಿ ಚುನಾವಣೆಗಳಲ್ಲಿ ಮೇಲುಗೈ ಸಾಧಿಸಿದೆ. ಬಿಜೆಪಿಯನ್ನು ಹಣಿಯಲು ತನಗಿದ್ದ ಅನುಕೂಲಗಳನ್ನು ಬಳಸಿಕೊಳ್ಳದ ಕಾಂಗ್ರೆಸ್ ಅಶಕ್ತತೆ ಪ್ರದರ್ಶಿಸಿ ಸೋಲುಂಡಿದೆ.

ಅನೈತಿಕ ರಾಜಕೀಯದಿಂದ ಬಿಜೆಪಿ ಗೆಲುವು ಅಶಕ್ತ ಕಾಂಗ್ರೆಸ್‌ನ ಸೋಲು

ಜಿ.ಎನ್.ನಾಗರಾಜ್

ಕರ್ನಾಟಕದಲ್ಲಿ ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿ 19 ಸ್ಥಾನಗಳನ್ನು ಗಳಿಸಿದೆ. ದೇಶದಲ್ಲಿ ಬಿಜೆಪಿ ನೇತೃತ್ವದ ಸರ್ಕಾರವನ್ನು ಅಧಿಕಾರಕ್ಕೆ ತರಲು 24 ರಿಂದ 25 ಸ್ಥಾನಗಳನ್ನು ಗೆಲ್ಲುವ ಗುರಿಯನ್ನು ಇರಿಸಿಕೊಂಡ ಯಡಿಯೂರಪ್ಪ ಲೋಕಸಭೆಯಲ್ಲಿ ವಿರೋಧ ಪಕ್ಷವಾಗಿ ಕುಳಿತುಕೊಳ್ಳುವ 19 ಸದಸ್ಯರ ಬಲಕ್ಕೆ ತೃಪ್ತಿ ಪಟ್ಟುಕೊಳ್ಳಬೇಕಾಗಿದೆ. ಆದರೆ 2004 ರಲ್ಲಿ ದೇಶದಲ್ಲಿ ಬಿಜೆಪಿಯ ಲೋಕಸಭಾ ಸದಸ್ಯ ಬಲದಲ್ಲಿ ಮೂರನೇ ಸ್ಥಾನದಲ್ಲಿದ್ದ ಕರ್ನಾಟಕ ಈಗ ಮೊದಲನೇ ಸ್ಥಾನಕ್ಕೇರಿದೆ. ಗುಜರಾತ್‌ನಲ್ಲಿ ಬಿಜೆಪಿ ಗಳಿಸಿದ 15 ಸ್ಥಾನಗಳಿಗಿಂತ ಉತ್ತಮ ಫಲಿತಾಂಶ ದೊರೆತಿದೆ ಎಂದು ಬೀಗಲು ಅವಕಾಶವಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಲೋಕಸಭಾ ಚುನಾವಣೆಯಲ್ಲಿ ಕಡಿಮೆ ಸ್ಥಾನಗಳಿಸಿದ್ದರೆ ತಮ್ಮ ಮುಖ್ಯಮಂತ್ರಿ ಸ್ಥಾನಕ್ಕೆ ಬರಬಹುದಾಗಿದ್ದ ಕುತ್ತನ್ನು ತಾತ್ಕಾಲಿಕವಾಗಿಯಾದರೂ ನಿವಾರಿಸಿಕೊಳ್ಳಲು ಸಾಧ್ಯವಾಗಿದೆ. ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರದಿಂದ ರಾಜ್ಯಸರ್ಕಾರಕ್ಕೆ ಸಿಗಬಹುದಾಗಿದ್ದ ಆನೆ ಬಲ ತಪ್ಪಿಹೋಗಿದೆ. ಆದರೂ ಈ ಲೋಕಸಭಾ ಚುನಾವಣೆಯ ಗೆಲುವು ರಾಜ್ಯದಲ್ಲಿ ಬಿಜೆಪಿಯನ್ನು ಮತ್ತು ಯಡಿಯೂರಪ್ಪ ಸರ್ಕಾರವನ್ನು ಗಟ್ಟಿಗೊಳಿಸಿದೆ.

ಆರೆಸ್ಸೆಸ್ ಹಿಡಿತದಲ್ಲಿರುವ ಗಣಿಮಾಫಿಯಾ ಭೂಮಾಫಿಯಾ ಸರ್ಕಾರದ ಅನೈತಿಕ ರಾಜಕೀಯ

ಗಣೀಮಾಫಿಯಾ, ಭೂಮಾಫಿಯಾ ದಿಂದ ಗಳಿಸಿದ ಹಣದ ಚೆಲ್ಲಾಟ, ಸರ್ಕಾರದ ಮೇಲಿನ ಹಿಡಿತದ ಬಲದಿಂದ ಆಮಿಷಗಳು ಅದಕ್ಕೆ ಒಗ್ಗದಿದ್ದರೆ ಬೆದರಿಕೆಯನ್ನು ಒಡ್ಡಿ ಆಪರೇಷನ್ ಕಮಲವೆಂಬ ಅಸಹ್ಯದ ರಾಜಕೀಯವೇ ಇಂದು ಬಿಜೆಪಿಯ ಭಿನ್ನ ರೀತಿಯ ರಾಜಕೀಯದ ಹೆಗ್ಗುರುತಾಗಿದೆ. 2008 ರ ಚುನಾವಣೆಯಲ್ಲಿ ಗೆಲುವು ಸಾಧಿಸಲು ಕಾರಣವಾದ ಕೋಮುಗಲಭೆಗಳು ವಿರಾಟ್ ಹಿಂದೂ ಸಮಾಜೋತ್ಸವಗಳು, ಜೊತೆಗೆ ಲಿಂಗಾಯತ, ವಾಲ್ಮೀಕಿ, ಮೊಗವೀರ ಇತ್ಯಾದಿ ಜಾತಿವಾದಿಗಳು, ಮಠ ದೇವಸ್ಥಾನಗಳ ಪ್ರಭಾವ ದುರುಪಯೋಗ, ಕಪ್ಪುಹಣದ ಚೆಲ್ಲಾಟ, ಗೂಂಡಾಗಿರಿ ಇವುಗಳನ್ನು ಅಧಿಕಾರದ ಮೇಲಿನ ಹಿಡಿತದಿಂದ ಮತ್ತಷ್ಟು ಹರಿತಗೊಳಿಸಿ ಬಳಸುವುದರ ಜೊತೆಗೆ ಅಧಿಕಾರದ, ಅಧಿಕಾರಿಗಳ ದುರುಪಯೋಗ 2009 ರ ಚುನಾವಣೆಯನ್ನು ಚುನಾವಣಾ ಭ್ರಷ್ಟತೆಯ ಉತ್ತುಂಗಕ್ಕೆರಿಸಿವೆ. 'ಬಿಜೆಪಿಯ ವಿರುದ್ಧ ದಾಖಲಾದ ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆಯ ಪ್ರಕರಣಗಳೆಷ್ಟೋ? ಹಿಡಿದ ಕೋಟಿಗಟ್ಟಲೆ ಹಣಕ್ಕಿಂತ ಹಿಡಿಯದ ನೂರಾರು ಪಟ್ಟು ಹಣ ಎಷ್ಟೋ? ಚುನಾವಣಾ ಭ್ರಷ್ಟಾಚಾರ ಜನಾದೇಶವನ್ನು ತಿರುಚಿದೆ. ಮಲೀನಗೊಳಿಸಿದೆ.

ಕಾಂಗ್ರೆಸ್ ಅಶಕ್ತತೆ

ಇಡೀ ದೇಶದಲ್ಲಿ ಕಾಂಗ್ರೆಸ್‌ನ ಸ್ಥಾನಗಳು ಏರಿಕೆ ಕಂಡಿದ್ದರೂ ರಾಜ್ಯದಲ್ಲಿ ಮಾತ್ರ ಎಂಟರಿಂದ ಆರಕ್ಕಿಳಿದಿದೆ. ಹಲವು ಸ್ಥಾನಗಳಲ್ಲಿ ಜೆಡಿ(ಎಸ್) ಕಾಂಗ್ರೆಸ್ ಗೆಲುವಿಗೆ ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ ಬೆಂಬಲ ನೀಡಿದ್ದರೂ, ಅಲ್ಪಸಂಖ್ಯಾತರು ತಮ್ಮ ಮತವನ್ನು ಜೆಡಿ(ಎಸ್) ಗೆಲುವು ಸಾಧಿಸುವ ನಿರೀಕ್ಷೆಯಿದ್ದ ಕೆಲವು ಕ್ಷೇತ್ರಗಳ ಹೊರತಾಗಿ ಇಡಿಯಾಗಿ ಕಾಂಗ್ರೆಸ್‌ಗೆ ಧಾರೆ ಎರೆದಿದ್ದರೂ ಕೂಡ ಕಾಂಗ್ರೆಸ್ ಸೋಲನ್ನನುಭವಿಸಿದೆ. ಕೇವಲ ಕೆಲವು ಪ್ರಭಾವಶಾಲಿ ಸ್ಪರ್ಧಿಗಳು ತಮ್ಮ ವೈಯಕ್ತಿಕ ಪ್ರಭಾವ ಹಣದ ಚೆಲ್ಲಾಟ ಹಾಗೂ ಪರಂಪರಾಗತ ಕಾಂಗ್ರೆಸ್ ಮತದಾರರ ಬಲದಿಂದ ಗೆದ್ದುಬಂದಿದ್ದಾರೆಯೇ ಹೊರತು ಪಕ್ಷವಾಗಿ ಇಡಿಯಾಗಿ ತೊಡಗಿಸಿಕೊಳ್ಳಲು ವಿಫಲವಾಗಿದೆ.

ಬಿಜೆಪಿಯನ್ನು ರಾಜಕೀಯವಾಗಿ, ಸಂಘ ಪರಿವಾರವನ್ನು ಸಂಘಟನಾತ್ಮಕವಾಗಿ, ಕೋಮುವಾದವನ್ನು ಸೈದ್ಧಾಂತಿಕವಾಗಿ ಎದುರಿಸುವ ರಾಜಕೀಯ ಇಚ್ಛಾಶಕ್ತಿಯೇ ತನಗಿಲ್ಲವೆಂದು ಕಾಂಗ್ರೆಸ್ ಯಾರಿಗೂ ಸಂಶಯವೇ ಮೂಡದಂತೆ ನಿರೂಪಿಸಿದೆ. ಮಂಗಳೂರಿನ ಘಟನೆಗಳು ದೇಶ ವಿದೇಶಗಳಲ್ಲಿ ಕೂಡ ತೀವ್ರ ಪ್ರತಿಕ್ರಿಯೆಯನ್ನು ಪಡೆದಿದ್ದರೂ ಮಂಗಳೂರಿಗೆ ಭೇಟಿ ನೀಡಿದ ಸೋನಿಯಾಗಾಂಧಿ, ಗುಲಾಂನಾಬಿ ಅಜಾದ್, ವೀರಪ್ಪ ಮೊಯಿಲಿ ಮೊದಲಾದವರು ಚರ್ಚ್‌ಗಳ ಮೇಲಿನ ದಾಳಿ, ಹೊಟೆಲ್, ಪಬ್, ಬಸ್‌ಗಳಲ್ಲಿ ಮಹಿಳೆಯರ ಮೇಲಿನ ದಾಳಿ, ದನಗಳ ಸಾಗಾಟ ಆದಿ ಉಡುಪಿ ಪ್ರಕರಣ ಮೊದಲಾದವುಗಳನ್ನು ಪ್ರಸ್ತಾಪಿಸಲೇ ಇಲ್ಲ.

ಕಾಂಗ್ರೆಸ್ ಅಭ್ಯರ್ಥಿಗಳು ಮನೆಯಲ್ಲೇ ಕುಳಿತು ಜನತೆಯ ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸದೆ ಜನ ತಮ್ಮಷ್ಟಕ್ಕೆ ತಾವೇ ಬಂದು ಮತಹಾಕಿ ತಮ್ಮನ್ನು ಗೆಲ್ಲಿಸಬೇಕೆಂದು ನಿರೀಕ್ಷಿಸಿದಂತೆ ಕಾಣುತ್ತಿತ್ತು. ತಮ್ಮದೇ ಕಾರ್ಯಕರ್ತರನ್ನು ಕೆಲಸಕ್ಕಿಳಿಸುವ ಪ್ರಯತ್ನವನ್ನು ಕೂಡ ಎಲ್ಲಾ ಕಡೆಗಳಲ್ಲಿ ಮಾಡಲಾಗಲಿಲ್ಲ.

ಅಲ್ಪಸಂಖ್ಯಾತರನ್ನಂತೂ ಕಾಂಗ್ರೆಸ್ಸಿಗೆ ಮತ ಚಲಾಯಿಸದೆ ಅವರಿಗೆ ಬೇರೇನೂ ಗತಿಯಿದೆ ಎಂಬಂತೆ ಕಡೆಗಣಿಸಿದರು. ಕಾಂಗ್ರೆಸ್ ತನ್ನ ರಾಜಕೀಯ ಸಾಮರ್ಥ್ಯವನ್ನು ಪರಿಣಾಮಕಾರಿಯಾಗಿ ಬಳಸಿದ್ದರೆ ರಾಜ್ಯದ ಲೋಕಸಭಾ ಸ್ಥಾನಗಳಲ್ಲಿ ಬಹುಮತವನ್ನು ಗಳಿಸಲು ಸಾಧ್ಯವಾಗುವುದರಲ್ಲಿ ಸಂಶಯವೇ ಇರಲಿಲ್ಲ. ಬಳ್ಳಾರಿಯಲ್ಲಿ ಜನ ತಮ್ಮಷ್ಟಕ್ಕೆ ತಾವೇ ರೆಡ್ಡಿ ಧಣಿಗಳ ದರ್ಬಾರನ್ನು ಕೊನೆಗಾಣಿಸಬೇಕೆಂದು ಸಿಡಿದೆದ್ದಿದ್ದರೂ, ಸಿಪಿಐ(ಎಂ) ಸೇರಿದಂತೆ ಪ್ರಜಾಸತ್ತಾತ್ಮಕ ಶಕ್ತಿಗಳು ಬಳ್ಳಾರಿ ಬಂದ್ ಮೂಲಕ ರೆಡ್ಡಿಗಳ ವಿರುದ್ಧ ವಾತಾವರಣವನ್ನು ಹದಗೊಳಿಸಿದ್ದರೂ ಕೂಡ ಅದನ್ನು ವ್ಯರ್ಥಗೊಳಿಸಿ ರೆಡ್ಡಿ ಕಂಪನಿಯ ಒಂದು ಮುರುಕನ್ನು ಕೂಡ ಗೆಲ್ಲಿಸಿಕೊಳ್ಳಬಲ್ಲರು ಎಂದು ಸಾಬೀತಾಗುವಂತೆ ಮಾಡಿದೆ.

ದಕ್ಷಿಣ ಕನ್ನಡದಲ್ಲಿ ಆರೆಸ್ಸೆಸ್ ಕತ್ತೆಯೊಂದರ ಗೆಲುವು

71 ರಲ್ಲಿ ಪಕ್ಷದಿಂದ ಒಂದು ಕತ್ತೆಯನ್ನು ಕೂಡ ಗೆಲ್ಲಿಸುವ ಶಕ್ತಿ ತನಗಿದೆಯೆಂದು ತೋರಿಸಲೆಂದೇ ಇಂದಿರಾಗಾಂಧಿ ಕಾಂಗ್ರೆಸ್ ಅನರ್ಹರನ್ನು ನಿಲ್ಲಿಸಿ ಜಯ ಗಳಿಸಿತ್ತು. ಇಂದು ಆರೆಸ್ಸೆಸ್ ಕರ್ನಾಟಕದಲ್ಲಿ ಎಲ್ಲೆಡೆಯಲ್ಲೂ ಅಲ್ಲದಿದ್ದರೂ ಕರಾವಳಿಯಲ್ಲಿ ತನಗೂ ಅಂತಹ ಸಾಮರ್ಥ್ಯವಿದೆಯೆಂದು ಸಾಬೀತು ಮಾಡಲೆಂದೇ ನಳಿನಕುಮಾರ್ ಕಟೀಲ್ ಎಂಬ ಅಭ್ಯರ್ಥಿಯನ್ನು ನಿಲ್ಲಿಸಿ ಗೆಲ್ಲಿಸಿದೆ.

2007 ರಲ್ಲಿ ಮಂಗಳೂರಿನಲ್ಲಿ ಸಂಭವಿಸಿದ ಕೋಮುಗಲಭೆಗಳ ನಂತರ ದಕ್ಷಿಣ ಕನ್ನಡ ಜಿಲ್ಲೆಯ ಜನತೆ ಎರಡು ಕ್ಷೇತ್ರಗಳಲ್ಲಿ ಬಿಜೆಪಿಗೆ ಸೋಲನ್ನುಣಿಸಿತ್ತು. ಆದರಿಂದಾಗಿ ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದಲ್ಲಿನ 8 ವಿಧಾನಸಭಾ ಕ್ಷೇತ್ರಗಳಲ್ಲಿ 4 ಕಾಂಗ್ರೆಸ್, 4 ಬಿಜೆಪಿಯ ಸ್ಥಾನಗಳಾಗಿದ್ದವು. 2008ರ ವಿಧಾನಸಭಾ ಚುನಾವಣೆಯಲ್ಲಿ ಚಲಾಯಿಸಲಾದ ಒಟ್ಟು ಮತಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ 5,000 ದಷ್ಟು ಹೆಚ್ಚಳವೇ ಇತ್ತು. ಈ ಕಾರಣಕ್ಕಾಗಿಯೇ ಬಿಜೆಪಿಯ ರಾಜ್ಯಾಧ್ಯಕ್ಷ ಸದಾನಂದಗೌಡ ಸೋಲಿನ ಬಯದಿಂದ ಉಡುಪಿಗೆ ಪಲಾಯನ ಮಾಡಿದ್ದರು. ಕ್ಷೇತ್ರದ ಜನತೆಯ ಸಮಸ್ಯೆಯನ್ನು ಪರಿಹರಿಸಿದ ಅಥವಾ ಅಭಿವೃದ್ಧಿಗೆ ಗಮನ ಕೊಟ್ಟಿದ್ದಾರೆಂಬ ಯಾವ

ಪುಟ 10 ಕ್ಕೆ

ಪಕ್ಷಗಳು ಮತ್ತು ಅವುಗಳ ಶೇಕಡಾವಾರು ಮತಗಳು

ಪಕ್ಷಗಳು	ಒಟ್ಟು ಸ್ಥಾನ 2009	ಏರಿಕೆ/ಇಳಿಕೆ	ಶೇಕಡಾವಾರು ಮತಗಳು 2009	2004	1999
• ಕಾಂಗ್ರೆಸ್	206	+61	28.67	26.7	28.3
ಬಿಜೆಪಿ	116	- 22	10.29	22.1	23.8
ಜೆಡಿ(ಯು)	20	+12	1.58	2.2	
ಸಿಪಿಎಂ	16	- 27	5.52	5.7	5.4
ಸಿಪಿಐ	4	6	1.45	1.4	1.5
ಬಿಎಸ್‌ಪಿ •	21	+ 2	6.27	5.3	4.2
ಎಐಎಡಿಎಂಕೆ	9	+ 9	1.79		
• ಡಿಎಂಕೆ	18	+ 2	1.91	1.8	
• ಟಿಸಿ	19	+17	3.43		
• ಎನ್‌ಸಿಪಿ	9	0	2.24	1.8	2.3
ಎಸ್‌ಪಿ •	23	- 13	3.44	4.2	3.8
ಟಿಡಿಪಿ	6	+ 1	1.53	3.0	
ಎಸ್‌ಎಸ್	11	1	1.67		
ಆರ್‌ಎಲ್‌ಡಿ	5	+2	0.49		
ಎಸ್‌ಎಡಿ	4	- 4	0.92	0.9	
• ಎನ್‌ಸಿ	3	+ 1	0.13		
ಆರ್‌ಜೆಡಿ	4	20	1.31	2.2	
ಎಲ್‌ಜೆಪಿ	0	4	0.48		
ಟಿಆರ್‌ಎಸ್	2	- 3	0.63		
ಬಿಜೆಡಿ	14	+ 3	1.35	1.3	
ಎಜಿಪಿ	1	- 1	0.45		
ಐಎನ್‌ಎಲ್‌ಡಿ	0	0	0.33		
ಜೆಡಿ(ಎಸ್) •	3	0	0.89		
• ಜೆಎಂಎಂ	2	- 3	0.43		
• ಐಯುಎಂಎಲ್	2	+ 1	0.23		
ಐಎನ್‌ಡಿ	9	+ 2	4.16		
ಇತರೆ	16	- 9	8.4		

15ನೇ ಲೋಕಸಭಾ ಚುನಾವಣೆಗಳ ಫಲಿತಾಂಶ ಕಾಂಗ್ರೆಸ್‌ಗೆ ಮುನ್ನಡೆ ನೀಡಿವೆ. ಎಡಪಕ್ಷಗಳು ಗಂಭೀರ ಹಿನ್ನಡೆ ಕಂಡಿವೆ. ಯಾಕೆ, ಏನು, ಹೇಗೆ ಎಂಬ ತೀವ್ರ ಆತ್ಮಾವಲೋಕನ ಎಡಪಕ್ಷಗಳಲ್ಲಿ ನಡೆದಿದೆ.

ಅಧಿಕಾರದತ್ತ ಕಾಂಗ್ರೆಸ್ ಮುನ್ನಡೆ ಎಡಪಕ್ಷಗಳಿಗೆ ಭಾರಿ ಹಿನ್ನಡೆ

2009ರ ಸಾರ್ವತ್ರಿಕ ಚುನಾವಣೆಗಳು ಕಾಂಗ್ರೆಸ್ ಪಕ್ಷ ಹಾಗೂ ಅದರ ಮಿತ್ರ ಪಕ್ಷಗಳನ್ನು ಮತ್ತೆ ಅಧಿಕಾರದತ್ತ ಮುನ್ನಡೆಸಿವೆ. ಒಟ್ಟು 543 ಲೋಕಸಭಾ ಸ್ಥಾನಗಳ ಪೈಕಿ 206 ಸ್ಥಾನಗಳನ್ನು ಪಡೆಯುವ ಮೂಲಕ ಕಾಂಗ್ರೆಸ್ ಅತಿದೊಡ್ಡ ಪಕ್ಷವಾಗಿ ಹೊರ ಹೊಮ್ಮುವಂತಾಗಿದೆ. ಅದರ ಚುನಾವಣಾ ಪೂರ್ವ ಮೈತ್ರಿ ಕೂಟದ ಪಕ್ಷಗಳು ಗೆದ್ದ ಸ್ಥಾನಗಳನ್ನು ಒಟ್ಟಿಗೆ ಸೇರಿಸಿಕೊಂಡರೆ ಯುಪಿಎಗೆ 262 ಸ್ಥಾನಗಳು ಸಿಕ್ಕಂತಾಗಿದೆ.

ನಿತ್ಯಾನಂದಸ್ವಾಮಿ

ಸರಳ ಬಹುಮತಕ್ಕೆ ಬೇಕಾಗಿರುವ ಕನಿಷ್ಠ 11 ಸ್ಥಾನಗಳನ್ನು ಅದು ಕೆಲವು ಸಣ್ಣ ಪಕ್ಷಗಳ ಹಾಗೂ ಜಯಶೀಲರಾಗಿರುವ ಸ್ವತಂತ್ರ ಅಭ್ಯರ್ಥಿಗಳ ಬೆಂಬಲ ಪಡೆದು ಅಧಿಕಾರವಹಿಸಿ ಕೊಳ್ಳುವುದು ಖಚಿತವಾಗಿದೆ.

ಚುನಾವಣಾ ಪ್ರಕ್ರಿಯೆಯ ಆರಂಭದ ದಿನಗಳಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ [illegible]ಟ ಮನೆಯಾಗಿತ್ತು. ಯುಪಿಎ ಕೂಟದ ಪ್ರಮುಖ ಅಂಗಪಕ್ಷಗಳಾದ ಎಸ್.ಪಿ., ಆರ್.ಜೆ.ಡಿ. ಮತ್ತು ಎಲ್‌ಜೆಪಿ ಕಾಂಗ್ರೆಸ್ ಜೊತೆ ಸ್ಥಾನ ಹಂಚಿಕೆ ಮಾಡಿಕೊಳ್ಳಲಾಗದೆ ಕಾಂಗ್ರೆಸ್‌ಗೆ ವಿರುದ್ಧವಾಗಿ ಸ್ಪರ್ಧೆ ಮಾಡುವಂತಾಗಿತ್ತು. ಆದಾಗ್ಯೂ ಕಾಂಗ್ರೆಸ್ ಜೊತೆ ಯುಪಿಎ ಕೂಟದಲ್ಲಿ ಉಳಿದುಕೊಂಡ ಡಿಎಂಕೆ, ಎನ್‌ಸಿಪಿ, ಟಿಎಂಸಿ ಮತ್ತು ಇತರರು ಮರಳಿ ಅಧಿಕಾರಕ್ಕೆ ಬರಲು ಅಗತ್ಯವಿರುವಷ್ಟು ಸ್ಥಾನಗಳನ್ನು ಪಡೆದುಕೊಂಡದ್ದು ಗಮನಾರ್ಹವಾಗಿದೆ. ಈ ಪ್ರಮಾಣದ ಮುನ್ನಡೆಯನ್ನು ಸ್ವತಃ ಕಾಂಗ್ರೆಸ್ ನಿರೀಕ್ಷೆ ಮಾಡಿರಲಿಲ್ಲ. ಆದ್ದರಿಂದಲೇ ಕೊನೆಯ ಹಂತದ ಮತದಾನ ಹತ್ತಿರ ಬರುತ್ತಿದ್ದಂತೆಯೇ ಕಾಂಗ್ರೆಸ್ ಪಕ್ಷವು ಬಿಹಾರದ ನಿತೀಶ್‌ಕುಮಾರ್ ಅಂತವರ ಸಹಯೋಗಕ್ಕೆ ಕೈಚಾಚಲಾರಂಭಿಸಿದ್ದು, ಗುಟ್ಟಿನ ವಿಷಯ ಆಗಿರಲಿಲ್ಲ. ಆದ್ದರಿಂದ ಕಾಂಗ್ರೆಸ್ ಪಕ್ಷದ ಈ ಅನಿರೀಕ್ಷಿತ ಸಾಧನೆಯ ಕಾರಣಗಳನ್ನು ವಿವರವಾಗಿ ವಿಶ್ಲೇಷಿಸುವುದು ಆಗಬೇಕಾಗಿದೆ.

ಭಾರತದ ಮತದಾರರು ಈ ಸಲ ಕೇಂದ್ರದಲ್ಲಿ ಒಂದು ಸ್ಥಿರ ಸರ್ಕಾರಕ್ಕಾಗಿ ಮತ ನೀಡಿದ್ದಾರೆ ಎಂಬ ವಿಶ್ಲೇಷಣೆ ಕೇಳಿಬರುತ್ತಿದೆ. ಇದನ್ನು ತಳ್ಳಿ ಹಾಕುವಂತಿಲ್ಲ. ಆದರೆ ಕಾಂಗ್ರೆಸ್ ಪಕ್ಷವು ಸ್ವಾತಂತ್ರ್ಯ ನಂತರ ಹಲವು ದಶಕಗಳ ಕಾಲ ದೇಶಕ್ಕೆ ಸ್ಥಿರ ಸರ್ಕಾರವನ್ನು ನೀಡುತ್ತಾ ಬಂದಿತ್ತು ಎಂಬುದನ್ನು ಮರೆಯಲಾಗದು. ಬಹುಮತದ ಬೆಂಬಲದೊಂದಿಗೆ ಬೆಳೆದು ಬಂಡೆಯಂತೆಯಾದ ಕಾಂಗ್ರೆಸ್ ಪಕ್ಷದ ಸರ್ಕಾರವು ಜನತೆಯ ಹಿತಗಳನ್ನು, ಅವರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಮೆಟ್ಟಿ ನಿಂತಾಗ, ಅದನ್ನು ಪದಚ್ಯುತಗೊಳಿಸಲು ದೇಶದ ಜನತೆ ಒಂದು ಸಂಗ್ರಾಮವನ್ನೇ ನಡೆಸುವಂತಾದದ್ದು ಈಗ ಇತಿಹಾಸ. ಒಂದು ಜನಪರವಲ್ಲದ ಸರ್ಕಾರದ ಸ್ಥಿರತೆ ಒಂದು ಅಸ್ಥಿರ ಸರ್ಕಾರಕ್ಕಿಂತ ಹೆಚ್ಚು ಅಪಾಯಕಾರಿಯಾಗುವ ಎಲ್ಲಾ ಸಾಧ್ಯತೆಗಳಿವೆ ಎಂಬುದನ್ನು ನಮ್ಮದೇಶದ ಈ ಹಿಂದಿನ ಅನುಭವವೇ ಸಾಬೀತು ಪಡಿಸುತ್ತದೆ.

ಹೊಟ್ಟೆ ಬಟ್ಟೆಗಿಂತಲೂ ಮುಖ್ಯವಾದ ಭದ್ರತೆಯ ಪ್ರಶ್ನೆ:

ಕೇಂದ್ರದಲ್ಲಿ ಇಂದು ಅಧಿಕಾರದ ಗದ್ದುಗೆಯನ್ನೇರಿದ ಕಾಂಗ್ರೆಸ್ ಪಕ್ಷ ಈ ಬಾರಿ ಶೇ.28.55ರಷ್ಟು ಮತಗಳನ್ನು ಪಡೆದಿದೆ. 2004 ರ ಚುನಾವಣೆಯಲ್ಲಿ ಅದು ಶೇ.26.53 ರಷ್ಟು ಮತಗಳನ್ನು ಪಡೆದಿತ್ತು. ಅಂದರೆ ಈ ಬಾರಿ ಅದು ಕೇವಲ ಶೇ.3 ರಷ್ಟು ಹೆಚ್ಚುವರಿ ಮತಗಳನ್ನ ಪಡೆದಿದೆ. ಈ ಹೆಚ್ಚುವರಿ ಮತಗಳು ಎಲ್ಲಿಂದ ಬಂದಿರಲು ಸಾಧ್ಯ? ಈ ಹೆಚ್ಚುವರಿ ಬಹುತೇಕವಾಗಿ ದೇಶದಲ್ಲಿ ಹೆಚ್ಚುತ್ತಿರುವ ಮತಗಳು ಭಯೋತ್ಪಾದನೆಗೆ ಬೆದರಿದ ಜನಗಳ ಮತಗಳು. ಈ ಶೇ.3 ರಷ್ಟು ಮತಗಳಲ್ಲಿ ಧಾರ್ಮಿಕ ಅಲ್ಪಸಂಖ್ಯಾತರ ಮತಗಳೇ ಗಣನೀಯ ಸಂಖ್ಯೆಯಲ್ಲಿ ಇವೆ. ಸಜ್ಜನ ಹಿಂದುಗಳ ಮತಗಳೂ ಇವೆ.

ಚುನಾವಣೆಗಳು ಸಮೀಪಿಸುತ್ತಿದ್ದಂತೆ, ಭಯೋತ್ಪಾದಕರ ದಾಳಿಗಳು ಹೆಚ್ಚಾಗಲಿವೆ ಎಂಬ ಅಬ್ಬರದ ಮತ್ತು ದುರುದ್ದೇಶಪೂರಿತ ಮಾಧ್ಯಮ ಪ್ರಚಾರ ಸಾಮಾನ್ಯ ಮತದಾರರ ಮತ್ತು ವಿಶೇಷವಾಗಿ ಧಾರ್ಮಿಕ ಅಲ್ಪಸಂಖ್ಯಾತ ಮತದಾರರ ಆತಂಕವನ್ನು ಹೆಚ್ಚಿಸಿತು. ಅವರಿಗೆ ಅವರ ಹೊಟ್ಟೆ ಬಟ್ಟೆಯ ಪ್ರಶ್ನೆಗಿಂತಲೂ ಬದುಕಿ ಉಳಿಯುವ ಪ್ರಶ್ನೆಯೇ ಮುಖ್ಯವಾಯಿತು. ಇದೇ ಸಮಯದಲ್ಲಿ 'ಭಯೋತ್ಪಾದನೆಯನ್ನು ತಡೆಗಟ್ಟಲು ಬಿಜೆಪಿಗೆ ಓಟು ಕೊಡಿ' ಎಂಬ ಆಹ್ವಾನ ಅಲ್ಪಸಂಖ್ಯಾತರನ್ನು ಕಂಗೆಡುವಂತೆ ಮಾಡಿತು. ಬಿಜೆಪಿಯು ಹರಡುತ್ತಿರುವ ಕೋಮುದ್ವೇಷವೇ ದೇಶದಲ್ಲಿ ಭಯೋತ್ಪಾದನೆ ಹೆಚ್ಚಾಗಲು ಕಾರಣವಾಗಿರುವುದು ಅವರ ಅನುಭವವೇ ಆಗಿತ್ತು. ಅದರ ಜೊತೆಯಲ್ಲಿ 'ಕೈ ಕತ್ತರಿಸು, ತಲೆ ಕತ್ತರಿಸು' ಮುಂತಾದ ಮಾತುಗಳನ್ನು ಕೇಳಿಸಿಕೊಂಡ ಅಲ್ಪಸಂಖ್ಯಾತರು, ಬಾಬರಿ ಮಸೀದಿಯನ್ನು ನಾಶ ಮಾಡಿದ ಬಿಜೆಪಿಯ 'ಉಕ್ಕಿನ ಮನುಷ್ಯ' ಪ್ರಧಾನಮಂತ್ರಿಯಾಗುತ್ತಾರೆ ಎಂಬ ಪ್ರಚಾರದಿಂದಾಗಿ ದಂಗುಬಡಿದರಂತಾದರು. ಪ್ರಚಾರದ ಕೊನೆಯ ಹಂತದಲ್ಲಂತೂ ಪ್ರಧಾನ ಮಂತ್ರಿ ಸ್ಥಾನಕ್ಕೆ ನರಹಂತಕ ನರೇಂದ್ರಮೋದಿಯ ಹೆಸರು ಪ್ರಸ್ತಾಪವಾಗುವುದರೊಂದಿಗೆ ಅಲ್ಪಸಂಖ್ಯಾತರ ಆತಂಕಕ್ಕೆ ಎಲ್ಲೆಯೇ ಇಲ್ಲದಂತಾಗಿ ಅವರು ದೇಶದ ಬಹುತೇಕ ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸಾಮೂಹಿಕವಾಗಿ ಮತ ಹಾಕಿದ ಪರಿಣಾಮವಾಗಿ ಈ ರೀತಿಯ ಚುನಾವಣಾ ಫಲಿತಾಂಶ ಹೊರಬರಲು .

ಪುಟ 10 ಕ್ಕೆ

ಸೀಟುಗಳು, ಮತಗಳು ಮತ್ತು ಶೇಕಡಾ : 2009 ಮತ್ತು 2004

2009 ರ ಮಹಾ ಚುನಾವಣೆಯ ಕೆಲವು ಅಂಕಿ ಸಂಖ್ಯೆಗಳನ್ನು 2004ರ ಮಹಾ ಚುನಾವಣೆಯ ಅಂಕಿ-ಅಂಶಗಳ ಒಂದು ಹೋಲಿಕೆಯನ್ನು ಇಲ್ಲಿ ಕೊಡುತ್ತಿದ್ದೇವೆ. ಕೇರಳದಲ್ಲಿ ಎಲ್‌ಡಿಎಫ್ 18 ರಿಂದ 4 ಸ್ಥಾನಕ್ಕಿಳಿದಿದೆ. ಆದರೆ ಮತಗಳ ಇಳಿಕೆ ಸುಮಾರು ಎರಡೂವರೆ ಲಕ್ಷ ಅಥವಾ 4.6 ಶೇಕಡಾ. ಯುಡಿಎಫ್ ಸ್ಥಾನಗಳು 1 ರಿಂದ 16ಕ್ಕೇರಿದೆ ಮತಗಳಿಕೆಯಲ್ಲಿ ಸುಮಾರು 9 ಶೇಕಡಾ ಹೆಚ್ಚಳವಾಗಿದೆ. ಬಿಜೆಪಿ ಪಡೆದ ಮತಗಳ ಪ್ರಮಾಣ 10.38 ಶೇಕಡಾದಿಂದ 6.31 ಕ್ಕೆ ಇಳಿದಿದೆ. ಪಶ್ಚಿಮಬಂಗಾಳದಲ್ಲಿ ಎಡರಂಗದ 27 ಸ್ಥಾನಗಳನ್ನು ಕಳೆದುಕೊಂಡಿದ್ದರೂ 43.30 ಶೇಕಡಾ ಮತಗಳಿಸಿದೆ. ಕಾಂಗ್ರೆಸ್ ಮತ್ತು ತೃಣಮೂಲ ಕಾಂಗ್ರೆಸಿನ ಮೈತ್ರಿಕೂಟಕ್ಕೆ 1.3 ಶೇಕಡಾ ಹೆಚ್ಚು ಮತಗಳಿಸಿ 19 ಹೆಚ್ಚಿನ ಸ್ಥಾನಗಳನ್ನು ಗಳಿಸಲು ಸಾಧ್ಯವಾಗಿದೆ. ಎಡರಂಗದ ಮತಗಳಿಕೆಯಲ್ಲಿ ಸುಮಾರು 7.5 ಶೇಕಡಾ ಇಳಿಕೆಯಾಗಿದೆ. ಇಲ್ಲಿ ಬಿಜೆಪಿ ಈ ಬಾರಿ ಒಂದು ಸ್ಥಾನವನ್ನು(ಡಾರ್ಜಿಲಿಂಗ್) ಗಳಿಸಿದರೂ ಅವರ ಮತಗಳಿಕೆ 2 ಶೇಕಡಾ ರಷ್ಟು ಇಳಿಸಿವೆ.

ಕೇರಳ

	2009				2004			
	ಸ್ಪರ್ಧೆ	ಗೆದ್ದದ್ದು	ಮತಗಳು	ಶೇಕಡಾ	ಸ್ಪರ್ಧೆ	ಗೆದ್ದದ್ದು	ಮತಗಳು	ಶೇಕಡಾ
ಎಲ್‌ಡಿಎಫ್								
ಸಿಪಿಐ(ಎಂ)	14	4	4887333	30.48	13	12	4754567	31.52
ಸಿಪಿಐ	4	0	1193300	7.44	4	3	1190526	7.89
ಕೇರಳ ಕಾಂಗ್ರೆಸ್	1	0	333688	2.08	1	1	353905	2.35
ಇತರರು	1	0	303117	1.89	2	2	663153	4.39
ಒಟ್ಟು	**20**	**4**	**6717438**	**41.90**	**20**	**18**	**6962151**	**46.50**
ಯುಡಿಎಫ್								
ಕಾಂಗ್ರೆಸ್	17	13	6434486	40.13	17	0	4846637	32.13
ಮುಸ್ಲಿಂ ಲೀಗ್	2	2	813741	5.07	2	1	733228	4.86
ಕೇರಳ ಕಾಂಗ್ರೆಸ್(ಎಂ)	1	1	404962	2.53	1	0	209880	1.39
ಒಟ್ಟು	**20**	**16**	**7653189**	**47.73**	**20**	**1**	**5789745**	**38.38**
ಇತರರು						1	256411	1.22
ಬಿಜೆಪಿ	19	0	1011563	6.31	19	0	1566569	10.38

ಪಶ್ಚಿಮ ಬಂಗಾಳ

	2009				2004			
	ಸ್ಪರ್ಧೆ	ಗೆದ್ದದ್ದು	ಮತಗಳು	ಶೇಕಡಾ	ಸ್ಪರ್ಧೆ	ಗೆದ್ದದ್ದು	ಮತಗಳು	ಶೇಕಡಾ
ಎಡರಂಗ								
ಸಿಪಿಐ(ಎಂ)	32	9	14145045	33.10	32	26	14271042	38.57
ಸಿಪಿಐ	3	2	1538059	3.60	3	3	1484152	4.01
ಆರ್ ಎಸ್ ಪಿ	4	2	1520812	3.56	4	3	1658787	4.48
ಫಾರ್ವರ್ಡ್ ಬ್ಲಾಕ್	3	2	1299507	3.04	3	3	1352423	3.66
ಒಟ್ಟು	**42**	**15**	**18503423**	**43.30**	**42**	**35**	**18766404**	**50.72**
ತೃಣಮೂಲ ಕಾಂಗ್ರೆಸ್	27	19	13326029	31.17	29	1	7786178	21.04
ಕಾಂಗ್ರೆಸ್	14	6	5749051	13.45	37	6	5385754	14.56
ಒಟ್ಟು	**41**	**25**	**19070080**	**44.62**		**7**	**13171932**	**35.60**
ಪಕ್ಷೇತರ	1	1	446200	1.04				
ಒಟ್ಟು	42	26	19516280	45.66		7	13171932	35.60
ಬಿಜೆಪಿ	**42**	**1**	**2625250**	**6.14**	13	**0**	**2983950**	**8.06**

ಎಡಪಕ್ಷಗಳಿಗೆ ಹಿನ್ನಡೆ.....

ಪುಟ 9 ರಿಂದ

ಕಾರಣವಾಗಿದ್ದಾರೆ. ಹೀಗೆ ಬಿಜೆಪಿ ವಿರುದ್ಧದ ಮತಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿರುವ ಕಾಂಗ್ರೆಸ್ ಅಧಿಕಾರವಹಿಸಿಕೊಳ್ಳಲು ಸಾಧ್ಯವಾಗಿದೆ. ಬಿಜೆಪಿಯ ಮತಗಳು ಕಳೆದ ಬಾರಿಗಿಂತ ಶೇ.2.9 ರಷ್ಟು ಕುಸಿದಿರುವುದು ಸಹ ಗಮನಾರ್ಹವಾಗಿದೆ. ಬಿಜೆಪಿಯ ಕಾರ್ಯವೈಖರಿಯನ್ನು ಕಂಡು ಬೇಸತ್ತ ಮತದಾರರು ಬಿಜೆಪಿಯಿಂದ ದೂರಸರಿಯುತ್ತಿದ್ದಾರೆ ಎಂಬುದರ ಸೂಚನೆ ಇದಾಗಿದೆ.

ಎಡಪಕ್ಷಗಳಿಗೆ ಬಹುದೊಡ್ಡ ಹಿನ್ನಡೆ

ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳಿಗೆ ಈ ಚುನಾವಣೆಯಲ್ಲಿ ಬಹುದೊಡ್ಡ ಹಿನ್ನಡೆಯುಂಟಾಗಿದ್ದು ದೇಶದ ಕಾರ್ಮಿಕ ವರ್ಗ ಹಾಗೂ ದುಡಿಯುವ ಜನತೆಯ ಹಿತದೃಷ್ಟಿಯಿಂದ ಅತ್ಯಂತ ಆತಂಕದ ಬೆಳವಣಿಗೆಯಾಗಿದೆ. ಮತದಾರರು ನೀಡಿದ ತೀರ್ಪಿಗೆ ಸಿಪಿಐ(ಎಂ) ಮತ್ತು ಎಡಪಕ್ಷಗಳು ವಿನಮ್ರವಾಗಿ ತಲೆಬಾಗಿವೆಯಲ್ಲದೆ ತಮ್ಮ ಈ ಅನಿರೀಕ್ಷಿತ ಕಳಪೆ ಪ್ರದರ್ಶನಕ್ಕೆ ಕಾರಣವೇನೆಂಬುದನ್ನು ಗಂಭೀರವಾಗಿ ಪರಿಶೀಲಿಸುವತ್ತ ಕಾರ್ಯೋನ್ಮುಖವಾಗಿವೆ.

ಎಡಪಕ್ಷಗಳು ಈ ಸಲ ಕೇಂದ್ರದಲ್ಲಿ ಒಂದು ಕಾಂಗ್ರೇಸೇತರ ಜಾತ್ಯಾತೀತ ಸರ್ಕಾರವನ್ನು ಅಧಿಕಾರಕ್ಕೆ ತರುವ ಗುರಿಯಿಟ್ಟುಕೊಂಡು ಸಾಕಷ್ಟು ಶ್ರಮಪಟ್ಟಿದ್ದವು. ಕೋಮುವಾದಿ ಬಿಜೆಪಿಗೆ ಈ ಬಾರಿ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ ಎಂಬುದು ಮನವರಿಕೆಯಾಗಿತ್ತು. ಇದರ ಜೊತೆಯಲ್ಲಿ ಒಂದು ಕಾಂಗ್ರೇಸೇತರ ಸರ್ಕಾರವನ್ನು ಅಧಿಕಾರಕ್ಕೆ ತರುವ ಮೂಲಕ ದೇಶದ ದುಡಿಯುವ ಜನವಿಭಾಗಗಳ ಹಿತರಕ್ಷಣೆ ಸಾಧಿಸುವತ್ತ ಒಂದು ಹೆಜ್ಜೆ ಮುಂದೆ ಹೋಗುವ ಗುರಿಯಿಟ್ಟುಕೊಳ್ಳಲಾಗಿತ್ತು. ಕಾಂಗ್ರೆಸ್ ಮತ್ತು ಬಿಜೆಪಿಯ ಆರ್ಥಿಕ ನೀತಿಗಳು ಒಂದೇ ಆಗಿರುವುದರಿಂದ ದೇಶದ ನೈಜ ಅಭಿವೃದ್ಧಿಗೆ ಅಗತ್ಯವಿರುವ ಪರ್ಯಾಯ ಧೋರಣೆಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸುವುದು ಈ ಚುನಾವಣಾ ಗುರಿಯ ಉದ್ದೇಶವಾಗಿತ್ತು.

ಕೇಂದ್ರದಲ್ಲಿ ಒಂದು ಕಾಂಗ್ರೇಸೇತರ ಹಾಗೂ ಬಿಜೆಪಿಯೇತರ ಸರ್ಕಾರ ಅಧಿಕಾರಕ್ಕೆ ಬರುವುದು ಅಸಾಧ್ಯವೇನಾಗಿರಲಿಲ್ಲ. ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳ ಒಟ್ಟು ಮತಗಳಿಕೆ(2004 ರಲ್ಲಿ) ಕೇವಲ ಶೇ.48 ಮಾತ್ರ. ಈ ಬಾರಿ ಅದು ಶೇ.47ಕ್ಕೆ ಇಳಿದಿದೆ ಹೊರತು ಹೆಚ್ಚಾಗಲಿಲ್ಲ. ಅಂದರೆ, ಕಾಂಗ್ರೇಸೇತರ ಮತ್ತು ಬಿಜೆಪಿಯೇತರ ಪಕ್ಷಗಳ ನಡುವೆಯೇ ಭಾರತದ ಮತದಾರರ ಬಹುಮತ ಅಡಗಿದೆ. ಕಾಂಗ್ರೆಸ್ ಮತ್ತು ಬಿಜೆಪಿ ಜೊತೆಯಲ್ಲಿ ಕೈ ಜೋಡಿಸಲು ಬಯಸದ ಪಕ್ಷಗಳು ಪರ್ಯಾಯ ಧೋರಣೆಗಳ ಆಧಾರದಲ್ಲಿ ಒಂದೇ ವೇದಿಕೆಗೆ ಬರಲು ಸಾಧ್ಯವಾದರೆ ಕೇಂದ್ರದಲ್ಲಿ ಪರ್ಯಾಯ ಸರ್ಕಾರದ ರಚನೆ ಮತ್ತು ಪರ್ಯಾಯ ಧೋರಣೆಗಳ ಅನುಷ್ಠಾನ ಸಾಧ್ಯವಿದೆ.

ಆದರೆ, ಪರ್ಯಾಯ ಸರ್ಕಾರದ ಈ ಸಾಧ್ಯತೆಯನ್ನು ಸಾಕಷ್ಟು ಮೊದಲೇ, ಇನ್ನು ಹೆಚ್ಚು ಪರಿಣಾಮಕಾರಿಯಾಗಿ ಜನರ ಮುಂದೆ ಬಿಂಬಿಸಲು ಸಾಧ್ಯವಾಗಿರುವುದು ಈ ಪ್ರಯೋಗದ ವಿಫಲತೆಗೆ ಕಾರಣವಾಯಿತು. ಎಡಪಕ್ಷಗಳ ನೇತೃತ್ವದ ಪರ್ಯಾಯ ಕೂಟವನ್ನು ಜನರ ಮುಂದೆ ಸರಿಯಾಗಿ ಬಿಂಬಿಸಲು ಸಾಧ್ಯವಾಗಲೇ ಇಲ್ಲ. ಎಡಪಕ್ಷಗಳೊಂದಿಗೆ ಕೈ ಜೋಡಿಸಲು ಮುಂದಾದ ರಾಜಕೀಯ ಪಕ್ಷಗಳಲ್ಲಿ ಪರ್ಯಾಯ ಧೋರಣೆಗಳ ಬಗ್ಗೆ ಸಹಮತಕ್ಕಿಂತ ಅಧಿಕಾರವನ್ನು ಗಿಟ್ಟಿಸಿಕೊಳ್ಳುವ ಸಂದರ್ಭ ಸಾಧಕತನವೇ ಪ್ರಧಾನವಾಗಿತ್ತು. ಹೀಗಾಗಿ ದೇಶದ ಮತದಾರರು ಈ ಪರ್ಯಾಯ ಕೂಟವನ್ನು ಗಂಭೀರವಾಗಿ ಪರಿಗಣಿಸಲೇ ಇಲ್ಲ. ಜನರ ಪ್ರಶ್ನೆಗಳಿಗಾಗಿ ಒಟ್ಟಾಗಿ ಹೋರಾಟಗಳನ್ನು ನಡೆಸಿ ಜನರ ವಿಶ್ವಾಸ ಗಳಿಸಿದ ಈ ಪಕ್ಷಗಳ ಮೇಲೆ ಜನ ವಿಶ್ವಾಸವಿಡಲು ಹಿಂದೇಟು ಹಾಕವಂತಾಯಿತು.

ಪರ್ಯಾಯ ಸರ್ಕಾರಕ್ಕೆ ಬೆನ್ನೆಲುಬು ಆಗಬೇಕಾಗಿದ್ದ ಎಡಪಕ್ಷಗಳು ಅವುಗಳ ಶಕ್ತಿ ಕೇಂದ್ರಗಳಲ್ಲೇ ತೀವ್ರ ಹಿನ್ನಡೆ ಅನುಭವಿಸುವಂತಾದದ್ದು ಈ ಪ್ರಯೋಗದ ವಿಫಲತೆಗೆ ಪ್ರಮುಖ ಕಾರಣವಾಗಿದೆ. ಎಡಪಕ್ಷಗಳು ತಮ್ಮ ಸೋಲಿನ ಗಂಭೀರ ವಿಮರ್ಶೆ ಮಾಡುವುದು ಅಗತ್ಯವಿದೆ. ಅದನ್ನು ಅವರು ಮಾಡದೇ ಇರುವುದಿಲ್ಲ. ಕೇರಳದಲ್ಲಿ ಸಿಪಿಐ(ಎಂ) ಕೇವಲ 4 ಸ್ಥಾನಗಳನ್ನು ಮಾತ್ರ ಗಳಿಸಿ 8 ಸ್ಥಾನಗಳನ್ನು ಕಳೆದುಕೊಂಡಿದೆ. ಆದರೆ ಸಿಪಿಐ(ಎಂ) ನೇತೃತ್ವದ ಎಲ್‌ಡಿಎಫ್ ನ ಮತಗಳಿಕೆ ಕೇವಲ 2 ಲಕ್ಷ ಮತಗಳಿಂದ ಕಡಿಮೆಯಾಗಿದೆ ಎಂಬುದು ಗಮನಾರ್ಹ. ಆದರೆ ಪಶ್ಚಿಮಬಂಗಾಳದಲ್ಲಿ ಸಿಪಿಐ(ಎಂ) ಸುಮಾರು ಶೇ.5.52 ರಷ್ಟು ಮತಗಳನ್ನು ಕಳೆದುಕೊಂಡಿದೆ. ಇದರ ಕಾರಣಗಳನ್ನು ಕಂಡುಕೊಳ್ಳುವುದು ಅತ್ಯಗತ್ಯವಾಗಿದೆ.

ಸಿಪಿಐ(ಎಂ) ಮತ್ತು ಎಡಪಕ್ಷಗಳ ನೇತೃತ್ವದ ಒಂದು ಪರ್ಯಾಯ ಸರ್ಕಾರ ಕೇಂದ್ರದಲ್ಲಿ ರಚನೆಯಾಗುವುದನ್ನು ತಡೆಯಲು ವಿಶ್ವ ಹಣಕಾಸು ಬಂಡವಾಳವೂ ಸೇರಿದಂತೆ ಎಲ್ಲ ಪ್ರತಿಗಾಮಿ ಶಕ್ತಿಗಳು ಒಂದಾಗಿದ್ದವು ಎಂಬ ವಿಚಾರ ಮಾತ್ರ ಈಗ ಗುಟ್ಟಾಗಿ ಉಳಿದಿಲ್ಲ. ಎಡಪಕ್ಷಗಳ ಮೇಲೆ ಅವಲಂಬನೆ ಇಲ್ಲದೆ ಕಾಂಗ್ರೆಸ್ ನೇತೃತ್ವದ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬರುತ್ತಿರುವ ಬಗ್ಗೆ ಕಾರ್ಪೊರೇಟ್ ಭಾರತ ವ್ಯಕ್ತಪಡಿಸುತ್ತಿರುವ ಸಂತಸವನ್ನು ನೋಡಿದರೆ ಮುಂದೆ ದೇಶದ ದುಡಿಯುವ ಜನತೆ ಅನುಭವಿಸಬೇಕಾಗುವ ಸಂಕಷ್ಟಗಳ ಹೊರೆಯನ್ನು ಅಂದಾಜು ಮಾಡಬಹುದಾಗಿದೆ. ದೇಶದ ಸಾರ್ವಜನಿಕ ವಲಯ ಬ್ಯಾಂಕುಗಳ, ಅತ್ಯಂತ ಲಾಭದಾಯಕವಾಗಿ ನಡೆಯುತ್ತಿರುವ ವಿಮಾರಂಗ, ಪಿಂಚಣಿ ನಿಧಿ ಮೊದಲಾದವುಗಳನ್ನು ನುಂಗಲು ಕೊನೆಗೂ ಅವಕಾಶಸಿಕ್ಕಿತೆಂಬ ಸಂತಸದಲ್ಲಿ ಅವುಗಳು ಜೊಲ್ಲು ಸುರಿಸುತ್ತಿವೆ. ಪ್ರತಿರೋಧ ವ್ಯಕ್ತಪಡಿಸುವ ಕಾರ್ಮಿಕ ವರ್ಗವನ್ನು ಸದೆಬಡಿಯುವ ಪ್ರಸ್ತಾಪಗಳು ಈಗಾಗಲೇ ಕೇಳಿಬರತೊಡಗಿವೆ. ಹೀಗಾಗಿ ಮುಂದಿನ ದಿನಗಳು ಕಾರ್ಮಿಕ ವರ್ಗಕ್ಕೆ ಸಂಘರ್ಷದ ದಿನಗಳಾಗಲಿವೆ ಎಂದು ಈಗಾಗಲೇ ಹೇಳಬಹುದಾಗದೆ.

ಅನೈತಿಕ ರಾಜಕೀಯದಿಂದ ಗೆಲುವು....

ಪುಟ 8 ರಿಂದ

ಹೆಸರೂ ಇರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ರಾಜಕೀಯದಲ್ಲಿ ಹೆಸರೂ ಗೊತ್ತಿಲ್ಲದ ಸಾಮಾನ್ಯ ಆರೆಸ್ಸೆಸ್ ಕಾರ್ಯಕರ್ತನನ್ನು ಸ್ಪರ್ಧೆಗಿಳಿಸಿತ್ತು. ಕಟೀಲು ದುರ್ಗಾ ಪರಮೇಶ್ವರಿಯ ಬ್ರಹ್ಮ ಕಲಶೋತ್ಸವ, ಸೌತ್ರಾಮಣಿ ಯಾಗವನ್ನು ಜನರಿಂದ ಕೋಟಿಗಟ್ಟಲೆ ಹಣವನ್ನು ಸಂಗ್ರಹಿಸಿ ಮಾಡಿದ್ದರೆಂಬುದಷ್ಟೇ ವ್ಯಕ್ತಿಯ ಕೀರ್ತಿ. ರಾಜ್ಯದಲ್ಲಿ ಅತಿ ಹೆಚ್ಚು ವಿದ್ಯಾವಂತರನ್ನುಳ್ಳ ಈ ಕ್ಷೇತ್ರದಲ್ಲಿ ಆರೆಸ್ಸೆಸ್ ಕೇವಲ ಒಬ್ಬ ಹತ್ತನೇ ತರಗತಿ ಪಾಸಾದ ವ್ಯಕ್ತಿಯನ್ನು ಕಣಕ್ಕಿಳಿಸಿ ಎಂತಹವರನ್ನು ಗೆಲ್ಲಿಸಿಕೊಳ್ಳುವ ಶಕ್ತಿ ತನಗಿದೆಯೆಂದು ಸಾರಲೆಂದೇ ನಿಲ್ಲಿಸಿತ್ತು.

ಜೊತೆಗೆ ಈ ಮಧ್ಯೆ ಚರ್ಚ್ ಮೇಲಿನ ಧಾಳಿಗಳು, ದನಗಳ ಸಾಗಾಟ, ಮಾಂಸದ ಮಾರಾಟ, ಹೋಟೆಲ್, ಬಸ್‌ಗಳಲ್ಲಿ, ಪಬ್‌ಗಳಲ್ಲಿ ಮುಸ್ಲಿಮ್, ಹಿಂದೂ ಹುಡುಗ, ಹುಡುಗಿಯರ ಮೇಲೆ ಧಾಳಿಗಳಿಂದ ಆ ಪ್ರದೇಶದಲ್ಲಿದ್ದ ಶೇ.30ರಷ್ಟಿದ್ದ ಮುಸ್ಲಿಂ ಕ್ರಿಶ್ಚಿಯನ್ ಅಲ್ಪಸಂಖ್ಯಾತರಲ್ಲಿ ಸಿಟ್ಟನ್ನು ಉದ್ರೇಕಿಸಿತ್ತು. ಈ ಘಟನೆಗಳ ಇಡೀ ದೇಶದಲ್ಲಿಯೇ ಪ್ರತಿಧ್ವನಿಗೊಂಡಿತ್ತು. ಚುನಾವಣೆ ಘೋಷಣೆಗೊಂಡ ಮೇಲೆಯೂ ಹಿಂದೂ ಮತಬ್ಯಾಂಕ್ ಸೃಷ್ಟಿಸುವ ಘೋಷಣೆಯ ಮೇಲೆ ಹಿಂದೂ ಸಮಾಜೋತ್ಸವ ನಡೆಸಿತು. ಆರಂಭದಲ್ಲಿಯೇ ಕೋಮುಗಲಭೆಗಳನ್ನು ಮೂರು ನಾಲ್ಕು ಕಡೆ ನಡೆಸಲಾಯಿತು. ಇಂತಹ ಅನುಕೂಲ ಪರಿಸ್ಥಿತಿಯಲ್ಲಿಯೂ ಕೂಡ ಹೇಗೆ ಸೋಲಬಹುದೆಂಬುದನ್ನು ಕಾಂಗ್ರೆಸ್ ಪಕ್ಷ ಪ್ರದರ್ಶಿಸಿತು.

ಆರೆಸ್ಸೆಸ್ ತನ್ನೆಲ್ಲಾ ಸಂಘಟನಾ ಶಕ್ತಿಯನ್ನು ಕಣಕ್ಕಿಳಿಸಿತು. ನೂರಾರು ಮಹಿಳೆಯರ ಸಭೆಗಳು, ಪೂಜೆಗಳು, ಮಧ್ಯೆ ಬಂದ ಹಬ್ಬಗಳ ದುರುಪಯೋಗ, ಸಾವಯುವ ಕೃಷಿ ಸಮಿತಿ, ಗೋ ಸಂರಕ್ಷಣಾ ಸಮಿತಿಯ, ಸಾಮೂಹಿಕ ವಿವಾಹಗಳ ಹೆಸರಿನಲ್ಲಿ ಚುನಾವಣಾ ಪ್ರಚಾರ, ಜಾಹೀರಾತು, ಉಣಿಸು ತಿನಿಸುಗಳಿಗೆ ಹತ್ತುಹಲವು ಲಕ್ಷ ರೂ. ವೆಚ್ಚ ಮಾಡಿ ಭ್ರಷ್ಟಾಚಾರ ಮತ್ತು ಅನೈತಿಕತೆಯನ್ನು ಪ್ರದರ್ಶಿಸಿತು.

ಮಾಧ್ಯಮಗಳನ್ನು ಭ್ರಷ್ಟಗೊಳಿಸದೇ ಬಿಡಲಿಲ್ಲ

ರಾಜ್ಯಮಟ್ಟದ ಕೆಲವು ಪತ್ರಿಕೆಗಳು ಬಿಜೆಪಿ ಮತ್ತು ಕೋಮುವಾದದ ಕರಪತ್ರವಾದದ್ದಲ್ಲದೆ, ಕೆಲವು ಸ್ಥಳೀಯ ಪತ್ರಿಕೆಗಳು ಕೂಡ ಬಿಜೆಪಿಯ ಮುಖವಾಣಿಗಳಾದುವು. ಸ್ಥಳೀಯ ಟಿ.ವಿ. ಛಾನೆಲ್‌ಗಳಿಗೆ ಹಲವು ಹತ್ತು ಲಕ್ಷ ರೂಪ ಕಪ್ಪು ಹಣ ನೀಡಿ ಪ್ರತಿ ಗಂಟೆಗೂ ಸುದ್ದಿ ಎಂಬ ಹೆಸರಿನಲ್ಲಿ ಗುಪ್ತ ಜಾಹೀರಾತುಗಳು, ಸಂದರ್ಶನಗಳು ಮತ್ತಿತರ ಕಾರ್ಯಕ್ರಮಗಳನ್ನು ಚುನಾವಣಾ ಸಂಹಿತೆ ಹಾಗೂ ವೆಚ್ಚಮಿತಿಯನ್ನು ಉಲ್ಲಂಘಿಸಿ ಕೈಗೊಂಡಿತು. ಹೀಗೆ ಮಾಧ್ಯಮಗಳೆಂಬ ಪ್ರಜಾಪ್ರಭುತ್ವದ ಆಧಾರ ಸ್ಥಂಭಗಳು ಕೋಮುವಾದದ ಕಾಲ್ತುಳಿತಕ್ಕೊಳಗಾಗಿ ನಲುಗಿದವು.

ರಾಜ್ಯದಲ್ಲಿಯೇ ಅತಿ ಹೆಚ್ಚು ಮತದಾರರು

ಇಡೀ ರಾಜ್ಯದಲ್ಲಿಯೇ ಅತಿ ಹೆಚ್ಚು ಮತದಾನವನ್ನು ಕಂಡ ದಕ್ಷಿಣ ಕನ್ನಡ ಕ್ಷೇತ್ರದಲ್ಲಿ ಬಿಜೆಪಿ ಪ್ರಾಬಲ್ಯವಿರುವ ವಿಧಾನಸಭಾ ಕ್ಷೇತ್ರಗಳು ಶೇ.80ರಷ್ಟು ಮತದಾನವನ್ನು ಕಂಡವು. ಹೀಗೆ ಆರೆಸ್ಸೆಸ್ ಕರಾವಳಿ ತನ್ನ ಮೇಲುಗೈಯನ್ನು ಮೆರೆಯಿತು. ○

ಚುನಾವಣಾ ಫಲಿತಾಂಶದ ಕುರಿತು ಸಿಪಿಐ(ಎಂ) ಪೊಲಿಟ್‌ಬ್ಯೂರೋ

15ನೇ ಲೋಕಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ಯಶಸ್ಸು ಗಳಿಸಿವೆ ಮತ್ತು ಅವು ಸರ್ಕಾರ ರಚಿಸುವ ಸ್ಥಿತಿಯಲ್ಲಿವೆ. ಕಾಂಗ್ರೆಸ್ ಪಕ್ಷವು 2004ರ ಚುನಾವಣೆಯಲ್ಲಿ ಗಳಿಸಿದ್ದಕ್ಕಿಂತ 61 ಹೆಚ್ಚು ಸ್ಥಾನಗಳನ್ನು ಗಳಿಸಿದೆ. ಸದ್ಯಕ್ಕೆ ಲಭ್ಯವಾದ ಮಾಹಿತಿಗಳ ಪ್ರಕಾರ ಕಾಂಗ್ರೆಸ್‌ನ ಮತಗಳಿಕೆ ಶೇ.3 ರಷ್ಟು ಹೆಚ್ಚಳವಾಗಿದೆ. ಮಿತ್ರ ಪಕ್ಷಗಳೊಂದಿಗೆ ಸೇರಿ ಅಧಿಕಾರಕ್ಕೇರುವ ಬಿಜೆಪಿಯ ಪ್ರಯತ್ನವು ಸತತವಾಗಿ ಎರಡನೇ ಬಾರಿ ಕೂಡ ವಿಫಲವಾಗಿದೆ. ಬಿಜೆಪಿಯ ಸ್ಥಾನಗಳಿಕೆ 22 ರಷ್ಟು ಕಡಿಮೆಯಾಗಿದೆ. ಬಿಜೆಪಿಯ ಮತಗಳಿಕೆ ಪ್ರಮಾಣ ಶೇ 2.9 ರಷ್ಟು ಕುಸಿದಿದೆ. ಈ ಸ್ಥಿತಿಯಲ್ಲಿ ಬಿಜೆಪಿಯು ಕಳೆದುಕೊಂಡ ಮತಗಳು ಸರಿಸುಮಾರು ಕಾಂಗ್ರೆಸ್‌ಗೆ ಹೋಗಿವೆ. 2004 ರ ಚುನಾವಣೆಯಲ್ಲಿ ಆದಂತೆ ಈ ಚುನಾವಣೆಯಲ್ಲಿಷ್ಟೆ ಸಹ ಕಾಂಗ್ರೆಸ್ ಮತ್ತು ಬಿಜೆಪಿ ಈ ಎರಡೂ ಪಕ್ಷ... ಗಳಿಸಿದ ಒಟ್ಟು ಮತ ಗಳಿಕೆಯು ಶೇ.49 ಕ್ಕಿಂತ ಕಡಿಮೆಯೇ ಇದೆ ಎಂಬ ಅಂಶವನ್ನು ಇಲ್ಲಿ ಗಮನಿಸಬೇಕಾಗಿದೆ.


ಕಾಂಗ್ರೆಸ್ ಪಕ್ಷಕ್ಕೆ ಕೇಂದ್ರ ಯುಪಿಎ ಸರ್ಕಾರವು ಎಡಪಕ್ಷಗಳ ತೀವ್ರ ಒತ್ತಡದಿಂದಾಗಿ ಜಾರಿಗೆ ತಂದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ ಅರಣ್ಯ ಹಕ್ಕು ಕಾಯ್ದೆ ಮತ್ತಿತರ ಸಾಮಾಜಿಕ ಕಲ್ಯಾಣ ಕ್ರಮಗಳು ಸಹಾಯಕವಾಗಿ ಒದಗಿಬಂದಿದೆ.

ಕಾಂಗ್ರೆಸ್ ಪಕ್ಷವು ಕೇಂದ್ರದಲ್ಲಿ ಬಿಜೆಪಿಯು ಅಧಿಕಾರಕ್ಕೇರಬಾರದೆಂಬ ತವಕ ಹೊಂದಿದ್ದ ಜಾತ್ಯಾತೀತ ಮನಸ್ಸಿನ ಜನರು ಹಾಗೂ ಅಲ್ಪಸಂಖ್ಯಾತರ ನಡುವೆ ಕಾಂಗ್ರೆಸ್ ಪಕ್ಷವು ಹೆಚ್ಚಿನ ಬೆಂಬಲ ಗಳಿಸಿದೆ.

ಬಲಪಂಥೀಯ ಆರ್ಥಿಕ ನೀತಿಗಳೊಂದಿಗೆ ಕೋಮುವಾದಿ ಅಜೆಂಡಾಗಳನ್ನು ಬಿಟ್ಟು ಬೇರೇನನ್ನು ಜನರ ಮುಂದಿಡಲು ಸಾಧ್ಯವಾಗದ ಬಿಜೆಪಿಯು ಜನರಿಂದ ತಿರಸ್ಕಾರಕ್ಕೆ ಗುರಿಯಾಗಿದೆ. ಈ ನೀತಿಗಳನ್ನು 2004 ರಲ್ಲೇ ಜನರು ತಿರಸ್ಕರಿಸಿದ್ದರು. ವರುಣ್‌ಗಾಂಧಿ, ನರೇಂದ್ರ ಮೋದಿ ಮುಂತಾದವರ ಕೋಮುವಾದಿ ಅಬ್ಬರವು ಬಿಜೆಪಿಯ ಚುನಾವಣಾ ಪ್ರಚಾರದ ಪ್ರಧಾನ ಅಂಶವಾಗಿತ್ತು.

ಎಡಪಕ್ಷಗಳು ವಿವಿಧ ರಾಜ್ಯಗಳಲ್ಲಿ ಹಲವು ಕಾಂಗ್ರೆಸ್ಸೇತರ ಬಿಜೆಪಿಯೇತರ ಪಕ್ಷಗಳೊಂದಿಗೆ ಮೈತ್ರಿ ಹೊಂದಿದ್ದವು. ಜಾತ್ಯಾತೀತ ಚುನಾವಣಾ ಪರ್ಯಾಯವನ್ನು ರೂಪಿಸುವ ನಿಟ್ಟಿನಲ್ಲಿ ಇದು ಅಗತ್ಯವಾಗಿತ್ತು. ಕೆಲವು ರಾಜ್ಯಗಳಲ್ಲಿ ಚುನಾವಣಾ ಸಂದರ್ಭದಲ್ಲಿ ಮಾಡಿಕೊಳ್ಳಲಾದ ಈ ಮೈತ್ರಿಗಳನ್ನು ಜನರು ಕಾರ್ಯಸಾಧ್ಯವಾದ ಮತ್ತು ವಿಶ್ವಾಸಾರ್ಹವಾದ ರಾಷ್ಟ್ರೀಯ ಪರ್ಯಾಯ ಎಂದು ಪರಿಗಣಿಸಲಿಲ್ಲ.

ಪಶ್ಚಿಮ ಬಂಗಾಳ ಮತ್ತು ಕೇರಳಗಳಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳು ಅನುಭವಿಸಿರುವ ಗಂಭೀರ ಹಿನ್ನಡೆಯು ತೀವ್ರ ಆತಂಕದ ವಿಚಾರವಾಗಿದೆ. ಸಿಪಿಐ(ಎಂ) ಪಕ್ಷವು ಈ ಎರಡು ರಾಜ್ಯಗಳಲ್ಲಿ ಗಳಿಸಿದ್ದ ಸ್ಥಾನಗಳಲ್ಲಿ 25 ಸ್ಥಾನಗಳನ್ನು →



ನಮ್ಮ ಆಳರಸರ ನಿರಾಕರಣೆಯ ಮನೋಸ್ಥಿತಿ ಮತ್ತು ಸಾರ್ವಜನಿಕ ಹೂಡಿಕೆಗಳನ್ನು ಬೃಹತ್ ಪ್ರಮಾಣದಲ್ಲಿ ಹೆಚ್ಚಿಸಲು ಅವರ ನಕಾರ ಈಗ ಬಹಳಷ್ಟು ದುಷ್ಪರಿಣಾಮಗಳನ್ನು ಉಂಟು ಮಾಡಿದೆ. ಜನಗಳ ಸಂಕಟಗಳು ಇನ್ನಷ್ಟು ಹೆಚ್ಚದಿರಬೇಕಾದರೆ ಹೊಸ ಸರಕಾರ ಉದ್ಯೋಗ ಮತ್ತು ಆಂತರಿಕ ಬೇಡಿಕೆಗಳನ್ನು ಹೆಚ್ಚಿಸಲು ಸಾರ್ವಜನಿಕ ಹೂಡಿಕೆಗಳನ್ನು ಗಮನಾರ್ಹ ಪ್ರಮಾಣದಲ್ಲಿ ಹೆಚ್ಚಿಸಬೇಕಾಗುತ್ತದೆ ಮತ್ತು ಅದೇ ವೇಳೆಗೆ ದೇಶದಲ್ಲಿ ಅತೀ ಅಗತ್ಯವಾದ ಆರ್ಥಿಕ ಮತ್ತು ಸಾಮಾಜಿಕ ಮೂಲರಚನೆಗಳನ್ನು ಕಟ್ಟಬೇಕಾಗುತ್ತದೆ. ಸರಕಾರ ಇಂತಹ ಕ್ರಮ ವಹಿಸುತ್ತದೆಯೇ?

ಜಾಗತಿಕ ಹಿಂಜರಿತದ ಕರಾಳ ನೆರಳು ಉದ್ದವಾಗುತ್ತಿದೆ

ಜಾಗತಿಕ ಆರ್ಥಿಕ ಹಿಂಜರಿತದ ಪ್ರಭಾವ ನಮ್ಮ ದೇಶದ ಮೇಲೆ ಬೀಳುವುದಿಲ್ಲ ಎಂದು ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಹೇಳುತ್ತಿದ್ದು ದೇಶ ಈಗ ಅದಕ್ಕೆ ಭಾರೀ ಬೆಲೆ ತೆರಬೇಕಾಗಿ ಬಂದಿದೆ. ನವ-ಉದಾರವಾದಿ ಮನೋಸ್ಥಿತಿಯಲ್ಲಿ ಸಿಲುಕಿಕೊಂಡಿರುವ ಈ ಪಕ್ಷಗಳು ಈಗಿನ ಹಿಂಜರಿತ ಬಂಡವಾಳಶಾಹಿ ವ್ಯಾಪಾರ ಚಕ್ರದಲ್ಲಿ ಸಾಮಾನ್ಯವಾಗಿ ಕಂಡು ಬರುವ ಏರಿಳಿತಗಳಷ್ಟೇ ಎಂಬ ಭ್ರಮೆಯಲ್ಲಿವೆ. ಆದರೆ ವಾಸ್ತವವಾಗಿ ಈ ಹಿಂಜರಿತ ಬಂಡವಾಳಶಾಹಿ ವ್ಯವಸ್ಥೆಯ ಅಸಮರ್ಪಕ ರಚನೆಯಿಂದಾಗಿಯೇ ಉಂಟಾಗಿದೆ. ಆದ್ದರಿಂದ ಇದು ಬಂಡವಾಳಶಾಹಿಯ ಬಿಕ್ಕಟ್ಟೇ ಹೊರತು ನಿಯಂತ್ರಣವಿಲ್ಲದ್ದರಿಂದ ಅಥವಾ ತಪ್ಪು ನಿಯಂತ್ರಣಗಳಿಂದ ಅಥವಾ ಕೆಲವು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಕುಳಗಳ ವಿಪರೀತ ದುರಾಸೆಯಿಂದ ಉಂಟಾದದ್ದಲ್ಲ. ಇದನ್ನು ಅರಿತುಕೊಳ್ಳಬೇಕಾಗಿದೆ.

"ಆರ್ಥಿಕ ವೈರುಧ್ಯ"

ಆರು ತಿಂಗಳ ಹಿಂದೆ ಹಣಕಾಸು ಮಾರುಕಟ್ಟೆಗಳಲ್ಲಿ ಬೃಹತ್ ಬಿಕ್ಕಟ್ಟಿನಿಂದ ಆರಂಭವಾದದ್ದು ಆಧುನಿಕ ಇತಿಹಾಸದಲ್ಲೇ ಅತ್ಯಂತ ತೀಕ್ಷ್ಣವಾದ ಆರ್ಥಿಕ ವೈರುಧ್ಯವಾಗಿ ಪರಿವರ್ತನೆಗೊಂಡಿದೆ ಎಂದು ಸ್ವತಃ ವಿಶ್ವ ಬ್ಯಾಂಕ್ ತನ್ನ 'ಜಾಗತಿಕ ಆರ್ಥಿಕ ಪ್ರತೀಕ್ಷೆಗಳು, 2009'ರಲ್ಲಿ ಹೇಳಿದೆ. 2009 ರಲ್ಲಿ ಒಟ್ಟು ವಿಶ್ವ ಉತ್ಪಾದನೆ 1,7 ಶೇಕಡಾದಷ್ಟು ಕುಗ್ಗಬಹುದು, ಇಂತಹ ಕುಗ್ಗುವಿಕೆಯನ್ನು ಜಗತ್ತು ಹಿಂದೆಂದೂ ಕಂಡಿಲ್ಲ ಎಂದೂ ಅದು ಹೇಳುತ್ತದೆ.

ಮಧ್ಯಮ ಮತ್ತು ಕಡಿಮೆ ಆದಾಯದ ದೇಶಗಳ ಆರ್ಥಿಕ ಬೆಳವಣಿಗೆ ದರ 2008 ರಲ್ಲಿ 5.8 ಶೇಕಡಾ ಇದ್ದದ್ದು 2009ರಲ್ಲಿ 2.ಶೇ. ಕ್ಕೆ ಅಂದರೆ 3.7 ಶೇ.ದಷ್ಟು ಇಳಿಯಬಹುದು, ಅದೇ ರೀತಿ ಉನ್ನತ ಆದಾಯದ ದೇಶಗಳ ಬೆಳವಣಿಗೆ ದರ 0.7 ಶೇ.ದಿಂದ ಋಣಾತ್ಮಕ 3.0ಶೇ.ಕ್ಕೆ ಅಂದರೆ ಅದು ಕೂಡಾ 3.7ಶೇ.ದಷ್ಟು ಇಳಿಯಬಹುದು ಎಂಬುದು ವಿಶ್ವಬ್ಯಾಂಕಿನ ನಿರೀಕ್ಷೆ. ಅಂದರೆ ನಮ್ಮಂತಹ ದೇಶಗಳ ಆರ್ಥಿಕಗಳೂ ಈ ಹಿಂಜರಿತದ ನೇರ ಹೊಡೆತಕ್ಕೆ ಒಳಗಾಗಿವೆ ಎಂದರ್ಥ. ಬಂಡವಾಳ ಈ ದೇಶಗಳಿಂದ ಹರಿದು ಹೋಗುತ್ತಿದೆ, ಶೇರು ಮಾರುಕಟ್ಟೆಗಳು ಕುಸಿಯುತ್ತಿವೆ, ಒಟ್ಟಾರೆಯಾಗಿ ಹೂಡಿಕೆಗಳು ಸ್ಥಗಿತಗೊಂಡಿವೆ, ಹಲವು ಅಭಿವೃದ್ಧಿಶೀಲ ದೇಶಗಳಲ್ಲಿ ಹೂಡಿಕೆಗಳು ಇಳಿಮುಖ ಗೊಂಡಿವೆ ಎಂದೂ ಈ ವರದಿ ಹೇಳುತ್ತದೆ.



ಭಾರತದಲ್ಲಿ ಎಡಪಕ್ಷಗಳು ಇದನ್ನೇ ಹೇಳುತ್ತಾ ಬಂದಿವೆ. ಆದ್ದರಿಂದಲೇ ಸಾರ್ವಜನಿಕ ಹೂಡಿಕೆಗಳಲ್ಲಿ ದೊಡ್ಡ ಪ್ರಮಾಣದ ನೆಗೆತ ತರದಿದ್ದರೆ ಆಂತರಿಕ ಬೇಡಿಕೆಗಳನ್ನು ಹೆಚ್ಚಿಸುವುದು, ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು ಸಾಧ್ಯವಿಲ್ಲ ಎಂದು ಅವು ವಾದಿಸುತ್ತಿವೆ. ಹೀಗೆ ಮಾಡದಿದ್ದರೆ ಆರ್ಥಿಕದಲ್ಲಿ ಬೆಳವಣಿಗೆಗೆ ಉತ್ತೇಜನೆ ಕೊಡುವುದು, ಅದು ಹಿಂಜರಿತಕ್ಕೆ ಇಳಿಯದಂತೆ ತಡೆಯುವುದು ಸಾಧ್ಯವಿಲ್ಲ. ದುರದೃಷ್ಟವಶಾತ್, ಮನಮೋಹನ ಸಿಂಗ್ ಸರಕಾರ ಇದಕ್ಕೆ ಕಿವಿಗೊಡಲಿಲ್ಲ. ಇಂತಹ ನಿರ್ಧಾರವನ್ನು ಮುಂದೂಡ ಬಾರದು, ಅದರಿಂದ ಮುಂದೆ ಸರಿಪಡಿಸಲಾಗದಂತಹ ದುಷ್ಪರಿಣಾಮಗಳಾಗಬಹುದು ಎಂದು ಎಡಪಕ್ಷಗಳು ಸಂಸತ್ತಿನಲ್ಲಿಯೂ, ಹೊರಗೆಯೂ ಪ್ರತಿಪಾದಿಸಿದ್ದವು.

ದುಷ್ಪರಿಣಾಮಗಳು ಕಾಣುತ್ತಿವೆ

ಅವರ ನಿರಾಕರಣೆಯ ಮನೋಸ್ಥಿತಿ ಮತ್ತು ಸಾರ್ವಜನಿಕ ಹೂಡಿಕೆಗಳನ್ನು ಬೃಹತ್ ಪ್ರಮಾಣದಲ್ಲಿ ಹೆಚ್ಚಿಸಲು ಅವರ ನಕಾರ ಈಗ ಬಹಳಷ್ಟು ದುಷ್ಪರಿಣಾಮಗಳನ್ನು ಉಂಟು ಮಾಡಿದೆ. ನಮ್ಮ ಕೈಗಾರಿಕಾ ಉತ್ಪಾದನೆ ತೀವ್ರವಾಗಿ ಕುಸಿದಿದೆ. ಮಾರ್ಚ್ ತಿಂಗಳಲ್ಲಿ ಸೊನ್ನೆಗಿಂತಲೂ 2.3 ಶೇ. ಕೆಳಗಿಳಿದಿದೆ. ಅದರಲ್ಲೂ ತಯಾರಿಕಾ ವಲಯದಲ್ಲಿ ಮತ್ತೂ 1ಶೇ.ರಷ್ಟು ಹೆಚ್ಚು ಇಳಿಕೆ ದಾಖಲಾಗಿದೆ.

ವಿದೇಶಿ ನೇರ ಹೂಡಿಕೆಯಲ್ಲಿ 55 ಶೇಕಡಾ ಇಳಿಕೆಯಾಗಿದೆ. ಮಾರ್ಚ್2008ರಲ್ಲಿ 440 ಕೋಟಿ ಡಾಲರುಗಳು ಬಂದಿದ್ದು ಮಾರ್ಚ್ 2009ರಲ್ಲಿ ಅದು 200 ಕೋಟಿಗಿಳಿದಿದೆ. ಭಾರತದ ರಫ್ತು ಪ್ರಮಾಣ ಸತತವಾಗಿ ಏಳು ತಿಂಗಳಲ್ಲಿ ಇಳಿಮುಖವಾಗಿದ್ದು ಎಪ್ರಿಲ್ 2009ರ ವೇಳೆಗೆ 33 ಶೇ. ಇಳಿಕೆಯಾಗಿದೆ. ಆಮದುಗಳಲ್ಲಿಯೂ 35 ಶೇ. ಇಳಿಕೆಯಾಗಿದೆ.

ಮನಮೋಹನ ಸಿಂಗ್ ಸರಕಾರ ಭಾರತದ ಜಿಡಿಪಿ ಬೆಳವಣಿಗೆಯ ಬಗ್ಗೆ ಬಹಳವಾಗಿ ಹೇಳಿಕೊಂಡರೂ, ಈ ವರ್ಷ ಅದು 5.5 ಶೇ.ಕ್ಕೆ ಇಳಿದಿದ್ದು, ಮುಂದಿನ ವರ್ಷ 4ಶೇ. ಕ್ಕೆ ಇಳಿಯಬಹುದು ಎಂದು ವಿಶ್ವಬ್ಯಾಂಕ್ ಹೇಳಿದೆ. ಈಗಾಗಲೇ ಉದ್ಯೋಗದ ಮೇಲೆ ಇದು ಭಾರೀ ದುಷ್ಪರಿಣಾಮ ಬೀರಿದ್ದು (ಇದುವರೆಗೆ ಒಂದು ಕೋಟಿಗೂ ಹೆಚ್ಚು ಉದ್ಯೋಗ ನಷ್ಟವಾಗಿದ್ದು, ಲಕ್ಷಾಂತರ ಮಂದಿ ವಿದೇಶಗಳಿಂದ ಉದ್ಯೋಗ ಕಳಕೊಂಡು ಹಿಂದಿರುಗುತ್ತಿದ್ದಾರೆ ಎಂದು ಹೇಳಲಾಗುತ್ತಿದೆ), ಬೆಳವಣಿಗೆ ದರದಲ್ಲಿನ ಈ ತೀವ್ರ ಇಳಿಕೆ ಭಾರತದಲ್ಲಿನ ಬಡತನದ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸಲಿದೆ.

ವಿಶ್ವಬ್ಯಾಂಕಿನ ಅಂದಾಜಿನ ಪ್ರಕಾರ ಕಾಲುಭಾಗಕ್ಕಿಂತಲೂ ಹೆಚ್ಚು ಭಾರತೀಯರು "ವಿಪರೀತ ದಾರಿದ್ರ್ಯ" ದಲ್ಲಿ ಬದುಕುತ್ತಿದ್ದಾರೆ. ನಮ್ಮಲ್ಲಿ ಬಡತನದ ರೇಖೆಯ ಕೆಳಗಿರುವವರ ಪ್ರಮಾಣ ಸಹಾರಾ ಮರುಭೂಮಿಯ ಕೆಳಗಿರುವ ಅತೀ ಬಡದೇಶಗಳಿಗಿಂತ ತುಸು ಉತ್ತಮವಾಗಿದೆಯಷ್ಟೇ. ಇದು ನಮ್ಮದ್ದೇ ಅರ್ಜುನ್ ಸೇನ್‌ಗುಪ್ತಾ ವರದಿ ಹೇಳಿರುವುದರೊಂದಿಗೆ ತಾಳೆಯಾಗುತ್ತದೆ. ಅದರ ಪ್ರಕಾರ ನಮ್ಮ ದೇಶದ 78 ಶೇ. ಮಂದಿ ದಿನಕ್ಕೆ 20 ರೂ. ಕ್ಕಿಂತಲೂ ಕಡಿಮೆ ಆದಾಯದಲ್ಲಿ ಬದುಕುತ್ತಿದ್ದಾರೆ.

ಹೀಗಿದೆ ನಮ್ಮ ಆರ್ಥಿಕ ಮೂಲಾಂಶಗಳು. ಸದ್ಯದಲ್ಲೇ ಭಾರತೀಯ ಜನತೆ ಇನ್ನೂ ಕಷ್ಟಕರವಾದ ಆರ್ಥಿಕ ಪರಿಸ್ಥಿತಿಗಳನ್ನು ಎದುರಿಸಬೇಕಾಗುತ್ತದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಹೀಗಾಗದಿರಬೇಕಾದರೆ, ಜನಗಳ ಸಂಕಟಗಳು ಇನ್ನಷ್ಟು ಹೆಚ್ಚದಿರಬೇಕಾದರೆ ಹೊಸ ಸರಕಾರ ಉದ್ಯೋಗ ಮತ್ತು ಆಂತರಿಕ ಬೇಡಿಕೆಗಳನ್ನು ಹೆಚ್ಚಿಸಲು ಸಾರ್ವಜನಿಕ ಹೂಡಿಕೆಗಳನ್ನು ಗಮನಾರ್ಹ ಪ್ರಮಾಣದಲ್ಲಿ ಹೆಚ್ಚಿಸಬೇಕಾಗುತ್ತದೆ ಮತ್ತು ಅದೇ ವೇಳೆಗೆ ದೇಶದಲ್ಲಿ ಅತೀ ಅಗತ್ಯವಾದ ಆರ್ಥಿಕ ಮತ್ತು ಸಾಮಾಜಿಕ ಮೂಲರಚನೆಗಳನ್ನು ಕಟ್ಟಬೇಕಾಗುತ್ತದೆ. ○

→ ಫಲಿತಾಂಶದ ಕುರಿತು ಪೊಲಿಟ್‌ಬ್ಯೂರೋ

ಕಳೆದುಕೊಂಡಿದೆ. ಸಿಪಿಐ(ಎಂ) ಪಕ್ಷ 16 ಸ್ಥಾನಗಳನ್ನು ಗೆದ್ದಿದೆ ಮತ್ತು ಸಿಪಿಐ(ಎಂ) ಮತಗಳಿಕೆ 2004 ರಲ್ಲಿದ್ದ ಶೇ.5.66 ರಿಂದ 5.52 ಕ್ಕೆ ಅಲ್ಪ ಪ್ರಮಾಣದ ಇಳಿಕೆಯನ್ನು ಕಂಡಿದೆ.

ಈ ಹಿನ್ನಡೆಗೆ ಕಾರಣವಾದ ಅಂಶಗಳ ಕುರಿತು ಗಂಭೀರವಾದ ವಿಮರ್ಶೆ ಮಾಡಿಕೊಳ್ಳುವುದು ಅಗತ್ಯವಾಗಿದೆ.

ರಾಷ್ಟ್ರಮಟ್ಟದ ಮತ್ತು ರಾಜ್ಯಕ್ಕೆ ನಿರ್ದಿಷ್ಟವಾದ ಎರಡೂ ಅಂಶಗಳೂ ಕೂಡ ಈ ರೀತಿಯ ಹಿನ್ನಡೆಗೆ ಕಾರಣವಾಗಿವೆ. ಒಂದು ಸ್ವಯಂ ವಿಮರ್ಶಾತ್ಮಕವಾದ ಪರಾಮರ್ಶೆಯನ್ನು ಪಕ್ಷದ ರಾಜ್ಯ ಸಮಿತಿಗಳು ಮತ್ತು ಪಕ್ಷದ ಕೇಂದ್ರ ಸಮಿತಿಗಳು ನಡೆಸಲಿವೆ. ಮತ್ತು ಇಂತಹ ಸ್ವಯಂ ವಿಮರ್ಶೆಯು ಸರಿಪಡಿಸಿಕೊಳ್ಳುವಿಕೆಗೆ ಆಧಾರವಾಗಲಿವೆ. ಪಕ್ಷದ ಬಗೆಗೆ ವಿಶ್ವಾಸ ಕಳೆದುಕೊಂಡಿರುವ ಮತ್ತು ಪಕ್ಷದಿಂದ ದೂರವಾಗಿರುವ ಜನರ ಬೆಂಬಲವನ್ನು ವಿಶ್ವಾಸವನ್ನು ಮರಳಿ ಗಳಿಸಲು ಎಲ್ಲ ಪ್ರಯತ್ನಗಳನ್ನೂ ಸಿಪಿಐ(ಎಂ) ನಡೆಸಲಿದೆ.

ರಾಜ್ಯದ ಎರಡೂ ಸಿಪಿಐ(ಎಂ) ಅಭ್ಯರ್ಥಿಗಳಿಗೆ ಭಾರಿ ವಿಜಯವನ್ನು ನೀಡಿರುವ ತ್ರಿಪುರ ಜನತೆಯನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಅಭಿನಂದಿಸಿದೆ. ತ್ರಿಪುರದ ಎರಡು ಲೋಕಸಭಾ ವ್ಯಾಪ್ತಿಯಲ್ಲಿ ಬರುವ ಎಲ್ಲ 60 ವಿಧಾನಸಭಾ ಕ್ಷೇತ್ರಗಳಲ್ಲೂ ಜನತೆ ಸಿಪಿಐ(ಎಂ) ಗೆ ಮುನ್ನಡೆ ನೀಡಿರುವುದು ಗಮನಾರ್ಹವಾದ ಅಂಶವಾಗಿದೆ.

ಸಿಪಿಐ(ಎಂ) ಮತ್ತು ಎಡಪಕ್ಷಗಳು ಹೊಣೆಗಾರಿಕೆಯ ವಿರೋಧಪಕ್ಷಗಳಾಗಿ ಕೆಲಸ ಮಾಡಲಿವೆ. ದೇಶವು ಜನಗಳ ಜೀವನಾಧಾರದ ಮೇಲೆ ನೇರ ಪರಿಣಾಮ ಬೀರುವ ಗಂಭೀರ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದೆ. ಹೊಸ ಸರ್ಕಾರವು ಈ ಪ್ರಶ್ನೆಯನ್ನು ತುರ್ತಾಗಿ ಮತ್ತು ನೇರವಾಗಿ ಎದುರಿಸಿ ಕ್ರಮವಹಿಸಬೇಕಾಗಿದೆ. ಸಿಪಿಐ(ಎಂ) ಪಕ್ಷವು ಈ ಪ್ರಶ್ನೆಯಲ್ಲಿ ಜನರ ಹಿತಾಸಕ್ತಿಗಳ ರಕ್ಷಣೆಗಾಗಿ ಎಚ್ಚರ ವಹಿಸಲಿದೆ. ಸಿಪಿಐ(ಎಂ) ಪಕ್ಷವು ಎಡ ಐಕ್ಯತೆಯನ್ನು ಬಲಪಡಿಸಲು ಹಾಗೂ ವಿರೋಧಗಳಲ್ಲಿನ ಇತರ ಜಾತ್ಯತೀತ ಪಕ್ಷಗಳೊಂದಿಗೆ ಸಹಕರಿಸುವುದನ್ನು ಮುಂದುವರೆಸುತ್ತದೆ. ○

ಮಾಧ್ಯಮ ಮಂಥನ

ಸಿಪಿಐ(ಎಂ)ನಲ್ಲಿ 'ಬಂಡಾಯ' ಮಾಧ್ಯಮಗಳ ಸೃಷ್ಟಿ

ಆರ್.ರಾಮಕೃಷ್ಣ

15ನೇ ಲೋಕಸಭಾ ಚುನಾವಣೆಯ ಫಲಿತಾಂಶಗಳು ಬಂದ ಮೇಲೆ ಎಡರಂಗ, ಕಮ್ಯೂನಿಸ್ಟ್ ಪಕ್ಷಗಳೂ ಆದರಲ್ಲೂ ಸಿಪಿಐ(ಎಂ) ಪಕ್ಷದ ವಿರುದ್ಧ ವ್ಯಾಪಕವಾದ ದಾಳಿಗಳನ್ನು ಹರಿಯಬಿಡಲಾಗುತ್ತಿದೆ. ಪಶ್ಚಿಮಬಂಗಾಳದಲ್ಲಿ ದೈಹಿಕ ದಾಳಿಗಳ ಸರಣಿ ಆರಂಭವಾಗಿದೆ. ದೇಶಾದ್ಯಂತ ಸೈದ್ಧಾಂತಿಕ ದಾಳಿಗಳೂ ನಡೆಯುತ್ತಿವೆ.

ಇವು ಸಾಲದೆಂದು ಮಾಧ್ಯಮಗಳಲ್ಲಿ ಬಗೆಬಗೆಯ ರಂಜಕ ಸುದ್ದಿಗಳ 'ದಾಳಿ'.

ಒಂದು ಚಾನಲ್‌ನಲ್ಲಿ, 'ಸಿಪಿಐ(ಎಂ)ನಲ್ಲಿ ಭುಗಿಲೆದ್ದ ಬಂಡಾಯ' ಎಂಬ ಸ್ಫೋಟಕ ಸುದ್ದಿ (Breaking News). ಏನು ಅಂತ ನೋಡಿದರೆ ಮಾಜಿ ಸ್ಪೀಕರ್ ಸೋಮನಾಥ ಚಟರ್ಜಿಯವರ ಅಸಂಬದ್ಧ ಪ್ರಲಾಪಗಳನ್ನೇ ಇವರು ಸ್ಫೋಟಕ ಸುದ್ದಿ ಎನ್ನುವುದು.

ಸೋಮನಾಥ ಚಟರ್ಜಿಯವರನ್ನು ಸಿಪಿಐ(ಎಂ) ಪಕ್ಷದಿಂದ ಉಚ್ಚಾಟಿಸಿ ಎಷ್ಟು ಕಾಲವಾಯಿತು!! ಅವರಿನ್ನೂ ಸಿಪಿಐ(ಎಂ) ಒಳಗೇ ಇದ್ದು ಈಗ ಅವರಾಡಿರುವ ಮಾತನಾಡಿದ್ದರೆ ಆಗ ಅದು ಬಂಡಾಯ ಅಂತಾಗುತ್ತಿತ್ತು. ಪಕ್ಷದಲ್ಲೇ ಇಲ್ಲದವರ ಮಾತು, ನಡವಳಿಕೆಯನ್ನು ಬಂಡಾಯ ಎನ್ನುತ್ತಾರೆಯೇ?

ಇನ್ನು ಪಶ್ಚಿಮಬಂಗಾಳದ ಮುಖ್ಯಮಂತ್ರಿ 'ಬುದ್ಧದೇವ ಭಟ್ಟಾಚಾರ್ಯ ರಾಜಿನಾಮೆ', ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಪ್ರಕಾಶ್‌ಕಾರಟ್ 'ರಾಜಿನಾಮೆ' ಇತ್ಯಾದಿ ಇತ್ಯಾದಿ ಉಹಾಪೋಹಗಳಿಗೇನೂ ಕೊರತೆಯಿಲ್ಲ.

ಮೇ 18 ರಂದು ದೆಹಲಿಯಲ್ಲಿ ನಡೆದ ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸಭೆಯಲ್ಲಿ ಬುದ್ಧದೇವ ಭಟ್ಟಾಚಾರ್ಯ ಭಾಗವಹಿಸುತ್ತಿಲ್ಲ.





ಭಾಗವಹಿಸಲಿಲ್ಲ ಎಂಬುದನ್ನು 'ಬುದ್ದದೇವರ ರಾಜಿನಾಮೆ'ಗೆ ಥಳಕು ಹಾಕಲಾಯಿತು.


ವಾಸ್ತವ ಏನು? ಲೋಕಸಭಾ ಚುನಾವಣಾ ಫಲಿತಾಂಶ ಬಂದ ಬೆನ್ನಿಗೆ ಪಶ್ಚಿಮಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್‌ನ ಲೂಟಿ, ಮನೆಗಳಿಗೆ ಬೆಂಕಿ, ಹಲ್ಲೆ, ಬಾಂಬ್ ದಾಳಿ, ಕೊಲೆ ಎಲ್ಲವೂಗಳ ಹೊಸ ಅವತರಣಿಕೆ ಆರಂಭವಾಗಿದೆ. ಇಂತಹ ಸನ್ನಿವೇಶದಲ್ಲಿ ಮುಖ್ಯಮಂತ್ರಿಯವರು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಹೊಣೆ ಹೊತ್ತವರು ರಾಜ್ಯದಲ್ಲೇ ಉಳಿಯುವುದು ಅಗತ್ಯವೆಂಬ ಕಾರಣಕ್ಕೆ ಪಾಲಿಟ್‌ಬ್ಯೂರೋ ಸಭೆಗೆ ಗೈರು ಹಾಜರಾಗಿದ್ದಾರೆ. ಇಷ್ಟು ಸಾಕಲ್ಲ ಬೊಬ್ಬೆ ಹಾಕಲು. ಇದೇ ತರಹದ ಕಾರಣಕ್ಕಾಗಿ ಕೇರಳದ ಪೊಲಿಟ್‌ಬ್ಯೂರೋ ಸದಸ್ಯರು, ಗೃಹ ಸಚಿವರೂ ಆಗಿರುವ ಕೊಡಿಯೇರಿ ಬಾಲಕೃಷ್ಣನ್ ಪೊಲಿಟ್‌ಬ್ಯೂರೋ ಸಭೆಯಲ್ಲಿ ಭಾಗವಹಿಸದೆ ಹಿಂದಿರುಗಿದ್ದಾರೆ. ಇನ್ನೊಂದು ಮಾತು. ಚುನಾವಣೆಯಲ್ಲಿ ಎಡರಂಗಕ್ಕೆ - ತೃತೀಯ ರಂಗಕ್ಕೆ ಆದ ಹಿನ್ನಡೆ ಆಧಾರದಲ್ಲಿ ಪ್ರಕಾಶ್ ಕಾರಟ್ ರಾಜೀನಾಮೆ ಕೊಡುತ್ತಾರೆಂಬ ಬಗ್ಗೆ. ಪ್ರಕಾಶ್ ಕಾರಟ್ ಯಾಕೆ ರಾಜಿನಾಮೆ ಕೊಡಬೇಕು? ಕಾರಟ್ ಯಾಕೆ ರಾಜಿನಾಮೆ ಕೊಡುತ್ತಾರೆ? ಕೇಂದ್ರದಲ್ಲಿ ಕಾಂಗ್ರೇಸೇತರ, ಬಿಜೆಪಿಯೇತರ ಪರ್ಯಾಯ ರೂಪಿಸುವ ಧೋರಣೆ ಪ್ರಕಾಶ್ ಕಾರಟ್ ಅವರ ವೈಯಕ್ತಿಕ ನಿಲುವಲ್ಲ. ಸಿಪಿಐ(ಎಂ)ಪಕ್ಷ ಪ್ರಜಾಸತ್ತಾತ್ಮಕ ಹಾಗೂ ಸಾಮೂಹಿಕ ನಾಯತ್ವಕದ ಆಧಾರದಲ್ಲಿ ನಡೆಯುವಂಥದ್ದು. ಸೋಲಿನ ಕಾರಣಗಳ ಕುರಿತು ಪಕ್ಷ ಸಾಮೂಹಿಕವಾಗಿ ವಿಮರ್ಶೆ ಮಾಡಿಕೊಂಡು ಮುಂದೆ ಹೆಜ್ಜೆ ಇಡಬೇಕಿದೆ. ಪ್ರಕಾಶ್‌ಕಾರಟ್ ಪಾಲಿಸಿದ ಧೋರಣೆ ಕಾರಟ್‌ಅವರ ಖಾಸಗಿ ನಿಲುವಲ್ಲ. ಅದು ಪಕ್ಷದ ಧೋರಣೆ.



ಸಿಪಿಐ(ಎಂ) ರೀತಿ -ನೀತಿ, ಬದ್ಧತೆ, ಸಂಘಟನಾತ್ಮಕ ರೀತಿ-ರಿವಾಜುಗಳು ನಮ್ಮ ಎಷ್ಟೋ ಜನಕ್ಕೆ ಅರ್ಥವೇ ಆಗುವುದಿಲ್ಲ. ಹಲವು ಸಾರಿ ಅದು ಅರ್ಥವಾಗುವುದು ಅವರಿಗೆ ಬೇಕಾಗಿಯೂ ಇರುವುದಿಲ್ಲ. ಈ ಮಾತು ಕಾರ್ಪೋರೇಟ್ ಮಾಧ್ಯಮಗಳಿಗಂತು ಇನ್ನೂ ಚೆನ್ನಾಗಿ ಅನ್ವಯಿಸುತ್ತದೆ ಅಲ್ಲವೇ?

ತ್ರಿಪುರದಾದ ಎಡರಂಗಕ್ಕೆ ಪ್ರಚಂಡ ಜಯ

ತ್ರಿಪುರಾದ ಎರಡೂ ಲೋಕಸಭಾ ಕ್ಷೇತ್ರಗಳಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳು ಪ್ರಚಂಡ ಜಯ ಗಳಿಸಿದ್ದಾರೆ. ತ್ರಿಪುರಾ ಪಶ್ಚಿಮ ಕ್ಷೇತ್ರದಲ್ಲಿ ಸಿಪಿಐ(ಎಂ)ನ ಖಗೇನ್‌ದಾಸ್ ಹತ್ತಿರದ ಕಾಂಗ್ರೆಸ್ ಪ್ರತಿಸ್ಪರ್ಧಿಯನ್ನು 2,48,549 ಮತಗಳ ಅಂತರದಿಂದ ಸೋಲಿಸಿದರೆ, ತ್ರಿಪುರಾ ಪೂರ್ವ ಕ್ಷೇತ್ರದಲ್ಲಿ ಸಿಪಿಐ(ಎಂ)ನ ಬಾಜುಬನ್ ರಿಯಾನ್ ತಮ್ಮ ಸಮೀಪದ ಕಾಂಗ್ರೆಸ್ ಪ್ರತಿಸ್ಪರ್ಧಿಯನ್ನು 2,95,581 ಮತಗಳ ಭಾರಿ ಅಂತರದಲ್ಲಿ ಸೋಲಿಸಿದ್ದಾರೆ. ಬಿಜೆಪಿ, ಎನ್‌ಸಿಪಿ, ತೃಣಮೂಲ ಕಾಂಗ್ರೆಸ್, ಆಮ್ರಬಂಗಾರಿ, ಸಿಪಿಐ(ಎಂಎಲ್) ಮತ್ತು ಪಕ್ಷೇತರರೆಲ್ಲಾ ಠೇವಣಿ ಕಳಕೊಂಡಿದ್ದಾರೆ. ತ್ರಿಪುರಾದ ಎಲ್ಲಾ 60 ವಿಧಾನಸಭಾ ಕ್ಷೇತ್ರಗಳಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳು ಮುನ್ನಡೆ ಸಾಧಿಸಿದ್ದಾರೆ. ಇತ್ತೀಚಿನ ವಿಧಾನಸಭಾ ಚುನಾವಣೆಗಳಲ್ಲಿ ಎಡರಂಗದ ಅಭ್ಯರ್ಥಿಗಳು ಸೋತ ಕ್ಷೇತ್ರಗಳಲ್ಲಿಯೂ ಮುನ್ನಡೆ ದೊರೆತಿದೆ. ತ್ರಿಪುರಾದಲ್ಲಿ ಶೇಕಡಾ 80.86 ಮತದಾನ ನಡೆದಿತ್ತು.



ಫಲಿತಾಂಶಗಳು

ತ್ರಿಪುರಾ ಪಶ್ಚಿಮ

ಒಟ್ಟು ಮತಗಳು	937217
ಖಗೇನ್‌ದಾಸ್ ಸಿಪಿಐ(ಎಂ)	563799
ಸುದಿಪ್‌ರಾಯ್ ಬರ್ಮನ್, ಕಾಂಗ್ರೆಸ್	315250

ತ್ರಿಪುರಾ ಪೂರ್ವ (ಪರಿಶಿಷ್ಟ ಬುಡಕಟ್ಟು)

ಒಟ್ಟು ಮತಗಳು	988466
ಬಾಜುಬನ್ ರಿಯಾನ್ ಸಿಪಿಐ(ಎಂ)	521084
ಚಿಬಚಂದ್ರ ಹ್ರಾಂಗ್‌ಕ್ವಾಲ್, ಕಾಂಗ್ರೆಸ್	225503

ವಿವಿಧ ಕೂಟಗಳ ಬಲಾಬಲ

ಯುಪಿಎ

ಪಕ್ಷ	ಸ್ಥಾನ
ಕಾಂಗ್ರೆಸ್	206
ತೃಣಮೂಲ	19
ಡಿಎಂಕೆ	18
ಎನ್‌ಸಿಪಿ	9
ಜೆಕೆಎನ್‌ಸಿ	3
ಜೆಎಂಎಂ	2
ಎಐಎಂಐಎಂ	1

ಎನ್‌ಡಿಎ

ಪಕ್ಷ	ಸ್ಥಾನ
ಬಿಜೆಪಿ	116
ಜೆಡಿ(ಯು)	21
ಎಸ್‌ಹೆಚ್‌ಎಸ್	11
ಆರ್‌ಎಲ್‌ಡಿ	5
ಎಸ್‌ಎಡಿ	4
ಟಿಆರ್‌ಎಸ್	2
ಎಜಿಪಿ	1

ತೃತೀಯ ರಂಗ

ಪಕ್ಷ	ಸ್ಥಾನ
ಬಿಎಸ್‌ಪಿ	21
ಸಿಪಿಎಂ	16
ಬಿಜೆಡಿ	14
ಎಐಎಡಿಎಂಕೆ	9
ಟಿಡಿಪಿ	6
ಸಿಪಿಐ	4
ಜೆಡಿ(ಎಸ್)	3
ಎಐಎಫ್‌ಬಿ	2
ಆರ್‌ಎಸ್‌ಪಿ	2
ಹೆಚ್‌ಜೆಸಿ(ಬಿಎಲ್)	1
ಎಂಡಿಎಂಕೆ	1

ಇತರರು

ಪಕ್ಷ	ಸ್ಥಾನ
ಎಸ್‌ಪಿ	23
ಆರ್‌ಜೆಡಿ	3
ಪಕ್ಷೇತರ	9
ಇತರೆ	11

ಕರ್ನಾಟಕದಲ್ಲಿ ಎಡಪಕ್ಷಗಳ ಮತ ಗಳಿಕೆ

ದಕ್ಷಿಣ ಕನ್ನಡ

ಬಿ.ಮಾಧವ (ಸಿಪಿಐಎಂ)	18,328

ಉಡುಪಿ-ಚಿಕ್ಕಮಗಳೂರು

ರಾಧಾ ಸುಂದರೇಶ್(ಸಿಪಿಐ)	24,991

15ನೇ ಲೋಕಸಭಾ ಚುನಾವಣೆಗಳಲ್ಲಿ 58.43ಶೇ. ಮತದಾನ

ಚುನಾವಣಾ ಆಯೋಗ ಪ್ರಕಟಿಸಿರುವ ಅಂಕಿ-ಅಂಶಗಳ ಪ್ರಕಾರ 15ನೇ ಲೋಕಸಭಾ ಚುನಾವಣೆಗಳಲ್ಲಿ ದೇಶದಲ್ಲಿ 58.43 ಶೇಕಡಾ ಮತದಾನವಾಗಿದೆ. ಒಟ್ಟು 71,00,74,177 ಮತದಾರರಲ್ಲಿ 41,49,13,023 ಮತದಾರರು ಮತದಾನದಲ್ಲಿ ಭಾಗವಹಿಸಿದ್ದಾರೆ. 14ನೇ ಲೋಕಸಭಾ ಚುನಾವಣೆಗಳಲ್ಲಿ (2004) ಒಟ್ಟು 67,14,87,930 ಮತದಾರರಲ್ಲಿ 38,99,48,330 ಮತದಾರರು , ಅಂದರೆ 58.07ಶೇ. ಮಂದಿ ಮತದಾನ ಮಾಡಿದ್ದರು. 13ನೇ ಲೋಕಸಭಾ ಚುನಾವಣೆಗಳಲ್ಲಿ (1998)ಇದು 61.97ಶೇ. ಇತ್ತು. 60,58,80,192 ಮತದಾರರಲ್ಲಿ 37,54,41,739 ಮಂದಿ ಮತದಾನ ಮಾಡಿದ್ದರು.

ಎಡ ಚಳುವಳಿಗಳ ನೆಲೆಗಳಾದ ಕೇರಳ, ಪಶ್ಚಿಮ ಬಂಗಾಳ ಮತ್ತು ತ್ರಿಪುರಗಳಲ್ಲಿ ಮತದಾನದ ಪ್ರಮಾಣವು ರಾಷ್ಟ್ರೀಯ ಸರಾಸರಿಗಿಂತಲೂ ಸಾಕಷ್ಟು ಹೆಚ್ಚೇ ಇರುತ್ತದೆ ಎಂಬುದನ್ನು ಯಾರಾದರೂ ಗಮನಿಸಬಹುದು. ರಾಜಕೀಯ ಪ್ರಕ್ರಿಯೆಯಲ್ಲಿ ಜನರು ಹೆಚ್ಚು ಹೆಚ್ಚು ಪಾತ್ರವಹಿಸುವ ಪ್ರಜಾಸತ್ತಾತ್ಮಕ ಅಂಶ ಇದರಲ್ಲಿ ಎದ್ದು ಕಾಣುತ್ತದೆ. ಇದು ಪ್ರಜಾಪ್ರಭುತ್ವಕ್ಕೆ ಎಡ ಚಳುವಳಿಯ ಕೊಡುಗೆ ಎಂದರೆ ಅದರಲ್ಲಿ ಉತ್ಪ್ರೇಕ್ಷೆ ಏನೂ ಇಲ್ಲ ಅಲ್ಲವೇ?

ಕರ್ನಾಟಕದಲ್ಲಿ ಈ ಬಾರಿ 63..33 ಶೇಕಡಾ ಮತದಾನವಾಗಿದೆ. 2004ರಲ್ಲಿ ಇದು 65.14 ಶೇ. ಹಾಗೂ 1998ರಲ್ಲಿ 64.92ಶೇ. ಇತ್ತು. 15ನೇ ಲೋಕಸಭಾ ಚುನಾವಣೆಗಳ ರಾಜ್ಯವಾರು ಮತದಾನದ ಅಂಕಿ-ಅಂಶಗಳು ಹೀಗಿವೆ:

ರಾಜ್ಯ/ ಕೇಂದ್ರಾಡಳಿತ ಪ್ರದೇಶ	ಕ್ಷೇತ್ರಗಳು	ಒಟ್ಟು ಮತದಾರರು	ಮತ ನೀಡಿದವರು	ಶೇಕಡಾ 2004ರಲ್ಲಿ	ಶೇಕಡಾ 1999ರಲ್ಲಿ	ಶೇಕಡಾ 2009ರಲ್ಲಿ
ಕರ್ನಾಟಕ	28	38758177	24544066	63.33	65.14	64.92
ಕೇರಳ	20	21803908	15993463	73.35	71.45	70.66
ತಮಿಳುನಾಡು	39	41579000	30173305	72.57	60.81	57.95
ಆಂಧ್ರಪ್ರದೇಶ	42	57859171	41865931	72.36	69.95	66.00
ಪುದುಚೇರಿ	1	762028	607641	79.74	76.07	62.78
ಮಹಾರಾಷ್ಟ್ರ	48	72818768	36963831	50.76	54.38	57.11
ಗೋವಾ	2	1019977	564361	55.33	58.77	61.16
ಗುಜರಾತ	26	36466933	17473134	47.92	45.18	59.31
ರಾಜಸ್ಥಾನ	25	36965271	17906126	48.44	49.97	60.26
ಮಧ್ಯಪ್ರದೇಶ	29	38056994	19359320	50.87	48.09	61.74
ಛತ್ತಿಸ್‌ಗಡ	11	15466821	8553068	55.3	52.09	
ಒರಿಸ್ಸಾ	21	27160572	17747370	65.34	66.06	58.03
ಪಶ್ಚಿಮ ಬಂಗಾಳ	42	52420609	42285383	80.67	78.04	79.27
ತ್ರಿಪುರಾ	2	2079807	1749692	84.13	67.08	80.86
ಅಸ್ಸಾಂ	14	17443449	12137796	69.58	69.11	61.06
ಮೇಘಾಲಯ	2	1276758	822325	64.41	52.69	74.38
ಮಿಜೋರಾಂ	1	626288	318981	50.93	63.60	69.56
ಮಣಿಪುರ	2	1727245	1338561	77.50	67.41	56.83
ನಾಗಾಲ್ಯಾಂಡ್	1	1317729	1199012	90.99	91.77	45.41
ಅರುಣಾಚಲ ಪ್ರದೇಶ	2	734214	499579	68.04	56.35	59.17
ಸಿಕ್ಕಿಂ	1	300165	246252	82.04	77.95	67.14
ಬಿಹಾರ	40	54442945	24412757	44.84	58.02	64.60
ಜಾರ್ಖಂಡ್	14	17705136	9122151	51.52	55.69	-
ಉತ್ತರ ಪ್ರದೇಶ	80	114474591	54139880	47.29	67.08	55.49
ಉತ್ತರಾಖಂಡ	5	5794398	3126758	53.96	48.07	-
ಹರ್ಯಾಣ	10	11998597	8151463	67.94	65.72	68.99
ಹಿಮಾಚಲ ಪ್ರದೇಶ	4	4606674	2688111	58.35	59.71	66.35
ಜಮ್ಮು-ಕಾಶ್ಮೀರ	6	6534801	2607071	39.90	35.20	44.21
ದಿಲ್ಲಿ	7	11093348	5750309	51.84	47.09	51.29
ಚಂಡೀಗಡ	1	524444	343538	65.51	51.14	53.69
ದಮನ್-ದೀವ್	1	95382	67997	71.29	70.16	72.83
ದಾದ್ರಾ-ನಗರ್ ಹವೇಲಿ	1	154212	110348	71.56	69.04	77.43
ಲಕ್ಷದ್ವೀಪ	1	45936	39509	86.01	81.52	85.10
ಅಂಡಮಾನ್-ನಿಕೋಬಾರ್	1	265036	169535	63.97	63.66	63.66
ಅಖಿಲ ಭಾರತ	543	710074177	414913023	58.43	58.07	61.97

ಸುದ್ದಿ ಬಿಂಬ

ಸೋತುಹೋದವರಿಗೆ ಕಲ್ಲೆಸೆಯುವ ಮೊದಲು

ಇದು ಪ್ರಜಾವಾಣಿಯ ಅಂಕಣಕಾರ ದಿನೇಶ್ ಅಮೀನ್‌ಮಟ್ಟು 'ದೆಹಲಿ ನೋಟ' ದಿಂದ ಆಯ್ದ ಭಾಗ. ಹೆಚ್ಚು ವಿವರಣೆ ಅಗತ್ಯವಿಲ್ಲ ಅನಿಸುತ್ತದೆ. ಓದಿ ನೋಡಿ.

"........ ಸಿಪಿಎಂ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಕಾಶ್‌ಕಾರಟ್ ಅವರನ್ನು ಯುಪಿಎ ಆಡಳಿತದ ಕಾಲದ ಖಳನಾಯಕನೆಂದು ಚಿತ್ರಿಸಲಾಗುತ್ತಿದೆ. ಈ ಕಮ್ಯುನಿಸ್ಟ್‌ರೆಲ್ಲಾ ಅಭಿವೃದ್ಧಿ ವಿರೋಧಿಗಳು, ದೇಶದ್ರೋಹಿಗಳೆನ್ನುವ ಮಟ್ಟಿಗೆ ಅಪಪ್ರಚಾರ ನಡೆಯುತ್ತಿದೆ. ನಾಗರೀಕ ಪರಮಾಣು ಸಹಕಾರ ಒಪ್ಪಂದದ ಬಗ್ಗೆ ಎಡಪಕ್ಷಗಳ ನಿಲುವಿನ ಬಗ್ಗೆ ಭಿನ್ನಾಭಿಪ್ರಾಯ ಇರುವುದು ಸಹಜ....... ಆದರೆ ಅವರ ವಿರುದ್ಧ ಆರೋಪ ಮಾಡುವವರೆಲ್ಲಾ ರೈತರ ಸಾಲಮನ್ನಾ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ(ಎನ್‌ಆರ್‌ಇಜಿ) ಗಳನ್ನೆಲ್ಲಾ ಕೊಂಡಾಡುತ್ತಾರೆ. ಕಾಂಗ್ರೆಸ್ ಗೆಲುವಿಗೆ ಅದರ ಕೊಡುಗೆಯನ್ನು ನೆನೆಸುತ್ತಾರೆ. ಆಂಧ್ರಪ್ರದೇಶದ ಮುಖ್ಯಮಂತ್ರಿ ಆಡಳಿತವಿರೋಧಿ ಅಲೆಯನ್ನು ಎದುರಿಸಿದ್ದೇ ಈ ಯೋಜನೆಗಳ ಬಲದಿಂದ ಎಂಬ ವಿಶ್ಲೇಷಣೆ ಕೇಳಿಬರುತ್ತಿವೆ. ಆದರೆ ಈ ಯೋಜನೆಗಳ ಯುಪಿಎಯ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಸೇರಿಕೊಳ್ಳಲು ಕಮ್ಯುನಿಸ್ಟರೂ ಕಾರಣ ಎನ್ನುವುದನ್ನು ಮರೆಯುತ್ತಾರೆ. ಕಾಂಗ್ರೆಸ್ ನಾಯಕರೊಂದಿಗೆ ಸೀತಾರಾಂ ಯೆಚೂರಿ ಸಿಎಂಪಿ ರಚನೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದು ಈಗ ಯಾರಿಗೂ ನೆನಪಿಲ್ಲ.

ಅದು ಹೋಗಲಿ ಬಿಡಿ, ಇತ್ತೀಚಿನ ಆರ್ಥಿಕ ಹಿಂಜರಿತಕ್ಕೆ ಸಿಕ್ಕಿ ಅಮೇರಿಕಾದ ಬ್ಯಾಂಕುಗಳೆಲ್ಲಾ ಒಂದೊಂದಾಗಿ ದಿವಾಳಿಯೆದ್ದು ಹೋಗುತ್ತಿದ್ದಾಗ ಭಾರತದ ಬ್ಯಾಂಕುಗಳಲ್ಲಿನ ನಮ್ಮ ಠೇವಣಿ ಮಾತ್ರ ಭದ್ರವಾಗಿದ್ದದ್ದು ಹೇಗೆ? ಇದರ ಬಗ್ಗೆ ಎಷ್ಟು ಮಂದಿ ಯೋಚಿಸಿದ್ದಾರೆ? ರಾಷ್ಟ್ರೀಯ ಬ್ಯಾಂಕ್‌ಗಳ ಶೇಕಡಾ 74ರಷ್ಟು ಪಾಲುಬಂಡವಾಳವನ್ನು ವಿದೇಶಿ ಬ್ಯಾಂಕುಗಳಿಗೆ ನೀಡುವ ಹಿಂದಿನ ಎನ್‌ಡಿಎ ಸರ್ಕಾರ ಯೋಚನೆಯನ್ನು ಯುಪಿಎ ಸರ್ಕಾರ ಕಾರ್ಯರೂಪಕ್ಕೆ ತಂದಿದ್ದರೆ? ಇಲ್ಲಿಯ ವಿಮಾ ಕಂಪನಿಗಳಲ್ಲಿನ ಖಾಸಗಿ ಪಾಲುಬಂಡವಾಳದ ಪ್ರಮಾಣವನ್ನು ಶೇಕಡಾ 49ಕ್ಕೆ ಹೆಚ್ಚಿಸಿದ್ದರೆ? ಸಂಬಳಕ್ಕಾಗಿ ದುಡಿಯುವವರ ನಿವೃತ್ತಿ ನಂತರದ ಏಕೈಕ ಭದ್ರತೆಯಾದ ಪಿಂಚಣಿ ನಿಧಿಯಲ್ಲಿನ ಹಣವನ್ನು ಷೇರು ಮಾರುಕಟ್ಟೆಯಲ್ಲಿ ವಿನಿಯೋಗಿಸಲು ಮತ್ತು ಅದರ ನಿರ್ವಹಣೆಯನ್ನು ಖಾಸಗಿಯವರಿಗೆ ಒಪ್ಪಿಸಿದ್ದರೆ?

ಇಂದು ಇಡೀ ದೇಶದಲ್ಲಿ ಹಾಹಾಕಾರ ಉಂಟಾಗುತ್ತಿತ್ತು. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಹಣ ಇಟ್ಟ ಠೇವಣಿದಾರರು, ಭದ್ರತೆಗಾಗಿ ವಿಮೆ ಮಾಡಿಸಿಕೊಂಡವರು ಮತ್ತು ನಿವೃತ್ತಿ ಜೀವನಕ್ಕಾಗಿ ಪಿಂಚಣಿಹಣವನ್ನೇ ನಂಬಿದವರ ಗತಿ ಏನಾಗುತ್ತಿತ್ತು? ಸಾಮೂಹಿಕ ಆತ್ಮಹತ್ಯೆಗಳು ನಡೆದುಹೋಗಿದ್ದರೂ ಅಚ್ಚರಿಯೇನಿರಲಿಲ್ಲ. ಯುಪಿಎ ಸರ್ಕಾರದ ಈ ಎಲ್ಲಾ ಆರ್ಥಿಕ ಸುಧಾರಣೆಗಳನ್ನು ವಿರೋಧಿ ನಿಲುವು ಎಂದು ಟೀಕಿಸಿದವರಿದ್ದರು. 'ಬ್ಲಾಕ್‌ಮೇಲ್' ಎಂದು ಹಂಗಿಸಿದವರಿದ್ದರು. ಇನ್ನೇನೋ ಹೇಳಿದವರಿದ್ದರು. ಆದರೆ ಇದರಿಂದಾಗಿ ಒಂದಷ್ಟು ಬಡಜೀವಗಳು ನೆಮ್ಮದಿಯಿಂದ ಬದುಕುಳಿಯುವಂತಾಯಿತಲ್ಲಾ, ಅದಕ್ಕಾಗಿ ಯಾದರೂ ಎಡಪಕ್ಷಗಳಿಗೆ ಕೃತಜ್ಞತೆ ಸಲ್ಲಿಸುವುದು ಬೇಡವೇ? ಪ್ರಕಾಶ್ ಕಾರಟ್‌ಗೆ ಎಸೆಯಲು ಕಲ್ಲು ಎತ್ತುವ ಮೊದಲು ಇದನ್ನು ಯೋಚಿಸಿ, ಸಾಧ್ಯವಾದರೆ ಅವರ ಬಿಳಿ ಅಂಗಿಯನ್ನು ನೋಡಿ ಅದರಲ್ಲಿ ಒಂದು ಸಣ್ಣ ಕಪ್ಪು ಕಲೆಯೂ ಇಲ್ಲವಲ್ಲಾ? ಹಾಗೆಯೇ ಗೆದ್ದವರ ಕಡೆಯೂ ಒಮ್ಮೆ ನೋಡಿಬಿಡಿ".

ಕೃಪೆ: ಪ್ರಜಾವಾಣಿ

ಜಗದಗಲ

ಶರತ್‌ಚಂದ್ರ

ಪಾಕಿಸ್ತಾನದ ಪ್ರಜಾಪ್ರಭುತ್ವಕ್ಕೆ ತಾಲಿಬಾನ್ ಸವಾಲು

ಪಾಕಿಸ್ತಾನ ಪ್ರಜಾಪ್ರಭುತ್ವ ಸ್ಥಾಪನೆಯತ್ತ ಪುನಃ ಹೆಜ್ಜೆಗಳನ್ನು ಇಡುತ್ತಿರುವ ಪರಿಸ್ಥಿತಿಯಲ್ಲಿ ತಾಲಿಬಾನ್ ಅದಕ್ಕೆ ತೀವ್ರ ಸವಾಲು ಒಡ್ಡಿದೆ. ಪಾಕಿಸ್ತಾನದ 'ಸ್ವಿಟ್ಜರ್ ಲ್ಯಾಂಡ್' ಎಂದು ಕರೆಯಲಾಗುವ ಸ್ವಾತ್ ಕಣಿವೆಯಲ್ಲಿ ತನ್ನ ನೆಲೆ ಭದ್ರಗೊಳಿಸಿ ಹೆಚ್ಚು ಕಡಿಮೆ 'ಸಮಾನಾಂತರ ಸರ್ಕಾರ' ನಡೆಸುತ್ತಿದೆ. ಸ್ವಾತ್ ಕಣಿವೆ ಪಾಕಿಸ್ತಾನದ ವಾಯುವ್ಯ ಗಡಿ ಪ್ರಾಂತ್ಯದ ಭಾಗ. ಈ ಪ್ರದೇಶ ರಾಜದಾನಿ ಇಸ್ಲಾಮಾಬಾದ್ ನಿಂದ ಕೇವಲ 100 ಕಿ.ಮಿ. ದೂರದಲ್ಲಿದೆ. ಆ ಪ್ರದೇಶದಲ್ಲಿ ಸುಮಾರು ನಾಲ್ಕು ಸಾವಿರಕ್ಕೂ ಹೆಚ್ಚು ಗೆರಿಲ್ಲಾ ಸೈನಿಕರನ್ನು ಹೊಂದಿದೆ. ಅದು ಹೇಳಿದ್ದೇ ಕಾನೂನು. ಅದರ ಆಡಳಿತ ಮಧ್ಯಕಾಲೀನ ಹಿಂಸಾಚಾರದ್ದು. ಅದು ಎಷ್ಟು ಪ್ರಬಲವಾಗಿತ್ತು ಎಂದರೆ ಆ ಪ್ರಾಂತೀಯ ಸರ್ಕಾರದ ಜತೆ ಸ್ವಾತ್ ಪ್ರದೇಶದಲ್ಲಿ 'ಶಾಂತಿ ಸ್ಥಾಪಿಸಲು' ಶರತ್ತಾಗಿ ಅಲ್ಲಿ 'ಶರಿಯತ್ ಕಾನೂನು' ಜಾರಿ ಮಾಡಲು ಗುಪ್ತ ಒಪ್ಪಂದವಾಗಿತ್ತು. ಇದು ಹೊರಬಿದ್ದು ದೇಶದಾದ್ಯಂತ ಚರ್ಚೆ ಮತ್ತು ವಿವಾದಕ್ಕೆ ಒಳಗಾಗಿತ್ತು.

ಅಲ್ಲದೆ ಈ ಒಪ್ಪಂದವನ್ನೂ ಉಲ್ಲಂಘಿಸಿ ತಾಲಿಬಾನ್ ಭಯೋತ್ಪಾದಕ ಮತ್ತು ಹಿಂಸಾತ್ಮಕ ಚಟುವಟಿಕೆಯಲ್ಲಿ ತೊಡಗಿತ್ತು. ರಾಜಧಾನಿಯ ಪ್ರತಿಷ್ಠಿತ ಸ್ಕೂಲು ಒಂದಕ್ಕೆ ದಾಳಿಯ ಮೊಬೈಲ್ ಸಂದೇಶ ಕಳಿಸಿತ್ತು. ಇಂತಹ ಬೆದರಿಕೆಗೆ ಹೆದರಿ ಲಾಹೋರಿನ ಒಂದು ಸ್ಕೂಲು ಹುಡುಗಿಯರು ಜೀನ್ಸ್ ಧರಿಸಬಾರದು ಎಂತ ನಿಯಮ ತಂದಿತು. ತಾಲಿಬಾನ್ ಬೆದರಿಕೆಯಿಂದ ರಾಜಧಾನಿಯ ಒಂದು



ಪ್ರದೇಶದ ಮಾರ್ಕೆಟ್ ಎರಡು ದಿನಗಳ ಕಾಲ ತೆರೆದಿರಲಿಲ್ಲ. ಒಂದು ಬೀದಿಯಲ್ಲಿ ಹೋಗುತ್ತಿದ್ದ 17 ವರ್ಷದ ಬಾಲಕಿಯನ್ನು ಸಾರ್ವಜನಿಕವಾಗಿ ಅಮಾನುಷ ಚಾಟಿಯೇಟಿನ ಶಿಕ್ಷೆಗೆ ಗುರಿಪಡಿಸಿತು. ಮನೆಯವರಲ್ಲದ (ತಂದೆ ಅಥವಾ ಗಂಡ) ಗಂಡಸಿನ ಜತೆ ಸಾರ್ವಜನಿಕವಾಗಿ ಕಾಣಿಸಿ ಕೊಂಡದ್ದೇ ಆಕೆಯ ಅಪರಾಧ. ಇದರ ವಿಡಿಯೋ ಇಂಟರ್‌ನೆಟ್ ನಲ್ಲಿ ಕಾಣಿಸಿಕೊಂಡು ದೇಶದ ತುಂಬಾ ಸಾಕಷ್ಟು ಪ್ರತಿಭಟನೆ, ಆಕ್ರೋಶ ಮತ್ತು ಆತಂಕಕ್ಕೆ ಕಾರಣವಾಗಿತ್ತು.

ತಾಲಿಬಾನ್ ಅಫ್ಘಾನಿಸ್ತಾನದ ಸೋವಿಯೆಟ್ ಬೆಂಬಲಿತ ಪ್ರಗತಿಪರ ಸರ್ಕಾರ ಉರುಳಿಸಿದ ಕುಖ್ಯಾತ ಗೆರಿಲ್ಲಾ ಪಡೆ. 80-90 ರ ದಶಕದಲ್ಲಿ ಅಮೆರಿಕದ ಸಿ.ಐ.ಎ. ಮತ್ತು ಪಾಕಿಸ್ತಾನದ ಐ.ಎಸ್.ಐ. ಮಿಲಿಟರಿ ಮತ್ತು ಮೂಲಭೂತವಾದಿ-ಇಸ್ಲಾಮಿಕ್ ಸೈದ್ಧಾಂತಿಕ ತರಬೇತಿ ನೀಡಿ ತಾಲಿಬಾನನ್ನು ಸಿದ್ಧ ಪಡಿಸಿತು ಎಂದು ಈಗ ಬಹಳ ಜನರಿಗೆ ಮರೆತು ಹೋಗಿದೆ. ಪಾಕಿಸ್ತಾನ ಮತ್ತು ಇತರ ಮುಸ್ಲಿಂ ದೇಶಗಳ ಯುವಕರನ್ನು ತಾಲಿಬಾನ್‌ಗೆ ವಿಶೇಷವಾಗಿ ಆಯ್ಕೆ ಮಾಡಿ ತರಬೇತಿ ಮಾಡಲಾಗಿತ್ತು. ಅದು ಅಫ್ಘಾನಿಸ್ತಾನವನ್ನು ಹಲವು ವರ್ಷ ಆಳಿತು ಕೂಡಾ. ತಾಲಿಬಾನ್ ಸರ್ಕಾರಕ್ಕೆ ಅಮೆರಿಕ, ಪಾಕಿಸ್ತಾನ ಮತ್ತು ಅವುಗಳ ಕೆಲವೇ ಮಿತ್ರದೇಶಗಳು ಮಾನ್ಯ ಮಾಡಿದ್ದವು. 2001 ರಲ್ಲಿ ವಿಶ್ವ ವಾಣಿಜ್ಯ ಕೇಂದ್ರದ ಮೇಲೆ ಭಯೋತ್ಪಾದಕ ದಾಳಿ ನಡೆದ ಮೇಲೆ ತಾಲಿಬಾನ್ ಸರ್ಕಾರ ಈ ಭೀಕರ ಕೃತ್ಯ ಎಸಗಿದ ಭಯೋತ್ಪಾದಕರಿಗೆ ಬೆಂಬಲ ನೀಡುತ್ತಿದೆ ಎಂದು ಅಮೆರಿಕ ಸರ್ಕಾರಕ್ಕೆ 'ಜ್ಞಾನೋದಯ' ಆಯಿತು.

ಅಫ್ಘಾನಿಸ್ತಾನದ ಮೇಲೆ ದಾಳಿ ಮಾಡಿ ಅಮೆರಿಕ ತಾಲಿಬಾನ್ ಸರ್ಕಾರವನ್ನು ಉರುಳಿಸಿತು. ಅಲ್ಲಿಂದ ಕಾಲು ಕಿತ್ತ ತಾಲಿಬಾನ್ ಪಾಕಿಸ್ತಾನ-ಅಫ್ಘಾನಿಸ್ತಾನದ ಗಡಿ ಪ್ರಾಂತ್ಯಗಳಲ್ಲಿ ಗುಪ್ತ ನೆಲೆಗಳನ್ನು ಸ್ಥಾಪಿಸಿತು. ಅಫ್ಘಾನಿಸ್ತಾನದಂತೆ ಮೂಲಭೂತವಾದಿ ಇಸ್ಲಾಮಿಕ್ ಆಡಳಿತವನ್ನು ಪಾಕಿಸ್ತಾನದಲ್ಲಿ ಸ್ಥಾಪಿಸುವುದು ಅದರ ಹೊಸ ಗುರಿಯಾಯಿತು. ಪಾಕಿಸ್ತಾನದ ಮಿಲಿಟರಿ ಸರ್ಕಾರ ಮತ್ತು ಐ.ಎಸ್.ಐ. ಅದಕ್ಕೆ ತನ್ನ ಸುಪ್ತ ಬೆಂಬಲ ಮುಂದುವರೆಸಿತ್ತು ಎಂಬುದು ಬಹಿರಂಗ ಗುಟ್ಟು. ಮಿಲಿಟರಿ ಸರ್ಕಾರ ತಾಲಿಬಾನಿ ಬೆದರಿಕೆಯನ್ನು ರಾಜಕೀಯ ಪಕ್ಷಗಳನ್ನು ಹದ್ದುಬಸ್ತಿನಲ್ಲಿ ಇಡಲು ಮತ್ತು ತನ್ನ ಆಡಳಿತಕ್ಕೆ ನೆಪವಾಗಿ ಬಳಸಿತು. ಮಿಲಿಟರಿ ಸರ್ಕಾರ ಹೋಗಿ ನಾಗರಿಕ ಸರ್ಕಾರ ಬಂದ ಮೇಲೂ ಈಗಲೂ ಅದನ್ನು ಮಿಲಿಟರಿ ಮತ್ತು ಐ.ಎಸ್.ಐ. ನಾಯಕತ್ವದ ಒಂದು ವಿಭಾಗ ಮುಂದುವರೆಸಲು ಪ್ರಯತ್ನಿಸುತ್ತಿದೆ. ಆದರೆ ಈಗ ಅದು ಪೆಡಂಭೂತವಾಗಿ ಬೆಳೆದು ಯಾರ ಅಂಕೆಗೂ ಸಿಕ್ಕದ ಭೀಕರ ಶಕ್ತಿ ಆಗಿದೆ. ಪಾಕಿಸ್ತಾನದ ಸರ್ಕಾರಕ್ಕೆ ಮತ್ತು ಮಿಲಿಟರಿಗೂ ಸವಾಲು ಎಸೆದಿದೆ.

ಜನ ಅದರ ಫ್ಯಾಸಿಸ್ಟ್ ಮುಖವನ್ನು ಅರ್ಥ ಮಾಡಿಕೊಂಡಿದ್ದು ಅದರ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಒತ್ತಡ ಹೇರುತ್ತಿದ್ದಾರೆ. 'ಗೋ ಅಮೆರಿಕಾ ಗೋ' ಜತೆಗೆ 'ಗೋ ತಾಲಿಬಾನ್ ಗೋ' ಹೊಸ ಘೋಷಣೆ ಆಗಿದೆ. ಅಮೆರಿಕ ಮತ್ತು ಅದರ ಅಫ್ಘಾನಿಸ್ತಾನದ ಬಾಲಬಡುಕ ಸರ್ಕಾರಕ್ಕೂ ತಾಲಿಬಾನ್ ತಲೆನೋವಾಗಿದೆ. ಅಮೆರಿಕ ಈಗ ತಾಲಿಬಾನ್ ಮೇಲೆ ಮಿಲಿಟರಿ ಕಾರ್ಯಾಚರಣೆಗೆ ಪಾಕಿಸ್ತಾನ ಸರ್ಕಾರದ ಮೇಲೆ ಒತ್ತಡ ಹೇರುತ್ತಿದೆ. ಮಿಲಿಟರಿ ಮೊದ ಮೊದಲು ಹಿಂಜರಿದರೂ ಒಂದು ಕಡೆ ಅಮೆರಿಕ ಮತ್ತು ಪಾಕಿಸ್ತಾನದ ಸರ್ಕಾರ ಮತ್ತು



ಇನ್ನೊಂದು ಕಡೆ ಜನತೆಯ ಒತ್ತಡ ತಾಳಲಾರದೆ ಈಗ ತಾಲಿಬಾನ್ ವಿರುದ್ಧ ತೀವ್ರ ಕಾರ್ಯಾಚರಣೆಗೆ ಇಳಿದಿದೆ. 14 ಸಾವಿರ ಸೈನಿಕ ತುಕಡಿ ತಾಲಿಬಾನ್ ಮೇಲೆ ತೀವ್ರ ದಾಳಿ ನಡೆಸಿತು. 400ಕ್ಕೂ ಹೆಚ್ಚು ತಾಲಿಬಾನ್ ಗೆರಿಲ್ಲಾಗಳು ದಾಳಿಯಲ್ಲಿ ಸತ್ತಿದ್ದಾರೆ. ನೂರಾರು ತಾಲಿಬಾನಿಗಳು ಪಾಕಿಸ್ತಾನದ ಇತರ ಪ್ರದೇಶಗಳಿಗೆ ಓಡಿ ಹೋಗಿದ್ದಾರೆ. ಅಲ್ಲಿ ತಲೆ ಮರೆಸಿಕೊಂಡು ಇದ್ದು ಆ ಮೇಲೆ ಭಯೋತ್ಪಾದಕ ಕೃತ್ಯಗಳಲ್ಲಿ ತೊಡಗ ಬಹುದು ಎಂಬ ಭೀತಿ ಹೆಚ್ಚಿದೆ.

ಈ ದಾಳಿ ತೀರಾ ಗಡಿಬಿಡಿಯಲ್ಲಿ ತಯಾರಿ ಇಲ್ಲದೆ ನಡೆಸಿದ್ದಲ್ಲದೆ ನಾಗರಿಕರ ಸುರಕ್ಷತೆ ಬಗ್ಗೆ ಪಾಕಿಸ್ತಾನ ಸರ್ಕಾರ ಮತ್ತು ಸೈನ್ಯ ಹೆಚ್ಚು ತಲೆಕೆಡಿಸಿಕೊಳ್ಳಲಿಲ್ಲ. ನಾಗರಿಕರಿಗೆ ಘರ್ಷಣೆಯ ಪ್ರದೇಶಗಳಿಂದ ದೂರ ಕ್ಯಾಂಪುಗಳನ್ನು ನಿರ್ಮಿಸಿದರೂ ಅವರನ್ನು ಅಲ್ಲಿಗೆ ಸಾಗಿಸಲು ಯಾವ ವ್ಯವಸ್ಥೆಯನ್ನೂ ಮಾಡಲಿಲ್ಲ. ಆದ್ದರಿಂದ ಸುಮಾರು ಐದು ಲಕ್ಷಕ್ಕೂ ಹೆಚ್ಚು ಜನ ಸ್ವಾತ್ ಕಣಿವೆ ಪ್ರದೇಶದಿಂದ ಇದ್ದ ಬದ್ದ ವಸ್ತುಗಳೊಂದಿಗೆ ಮನೆ ಮಾರು ಬಿಟ್ಟು ಕ್ಯಾಂಪುಗಳತ್ತ ಸಿಕ್ಕ ವಾಹನಗಳಲ್ಲಿ ಧಾವಿಸುತ್ತಿದ್ದಾರೆ. ಆದರೆ ವಾಹನಗಳ ತೀವ್ರ ಅಭಾವದಿಂದ ಬಹುಸಂಖ್ಯಾತರು ಕಾಲ್ನಡಿಗೆಯಲ್ಲೇ ಧಾವಿಸುವ ಬವಣೆ ಅನುಭವಿಸುತ್ತಿದ್ದಾರೆ. ಲಕ್ಷಾಂತರ ಜನರ ಅಗತ್ಯಗಳಿಗೆ ಪರಿಹಾರ ಸಾಮಗ್ರಿಗಳ ತೀವ್ರ ಅಭಾವದಿಂದ ದೊಡ್ಡ ಮಾನವೀಯ ಬಿಕ್ಕಟ್ಟು ಉಂಟಾಗಿದೆ ಎಂದು ಅದರಲ್ಲಿ ತೊಡಗಿರುವ ವಿಶ್ವ ಸಂಸ್ಥೆಯ ಪರಿಹಾರ ಕಮಿಶನರ್ ಹೇಳಿದ್ದಾರೆ.

ಈ ಮಿಲಿಟರಿ ಕಾರ್ಯಾಚರಣೆ ಪಾಕಿಸ್ತಾನದ ದೇಶದ ಅಸ್ತಿತ್ವಕ್ಕೂ ಮತ್ತು ಪ್ರಜಾಪ್ರಭುತ್ವಕ್ಕೂ ಇರುವ ಅಪಾಯ ಹೋಗಲಾಡಿಸುವುದು ಇರಲಿ, ಕಡಿಮೆ ಸಹಾ ಮಾಡಲು ಈ ವರೆಗೆ ವಿಫಲವಾಗಿದೆ ಎನ್ನಲಾಗಿದೆ.

ಎಲ್‌ಟಿಟಿಇ ನಾಯಕತ್ವದ ಅಂತ್ಯ?

ಶ್ರೀಲಂಕಾ ಸರ್ಕಾರದ ಸೈನ್ಯ ಮತ್ತು ಎಲ್.ಟಿ.ಟಿ.ಇ. ನಡುವೆ ಈಗ ಹಲವು ವಾರಗಳಿಂದ ನಡೆಯುತ್ತಿರುವ ನಿರ್ಣಾಯಕ ಕೊನೆಯ ಯುದ್ಧದಲ್ಲಿ ಪ್ರಭಾಕರನ್, ಪೊಟ್ಟು ಅಮ್ಮನ್ ಸೇರಿದಂತೆ ಎಲ್.ಟಿ.ಟಿ.ಇ. ಉನ್ನತ ನಾಯಕತ್ವ ನಾಶವಾಗಿದೆ ಎಂಬ ವರದಿಗಳು ಬಂದಿವೆ. ಶ್ರೀಲಂಕಾದ ಸರ್ಕಾರ ಹೀಗೆಂದು ಹೇಳಿಕೊಂಡಿದ್ದರೂ ಅದಕ್ಕೆ ಇನ್ನೂ ಪುರಾವೆಗಳು ಸಿಕ್ಕಿಲ್ಲ. ಪ್ರಭಾಕರನ್ ಮಗನ ಹೆಣದ ವಿಡಿಯೋ ಬಿಟ್ಟರೆ ಬೇರೆ ಯಾವ ಪುರಾವೆ ಇಲ್ಲ. ಎಲ್.ಟಿ.ಟಿ.ಇ. ಪ್ರಭಾಕರನ್ ಸತ್ತಿಲ್ಲ ಎಂದು ಹೇಳಿದೆ. (ಪತ್ರಿಕೆ ಮುದ್ರಣಕ್ಕೆ ಹೋಗುವ ಹೊತ್ತಿಗೆ ಡಿಎನ್‌ಎ ಪರೀಕ್ಷೆಯಿಂದ ಪ್ರಭಾಕರನ್‌ರವರದ್ದೆಂದು ದೃಢಪಟ್ಟಿದೆ ಎನ್ನಲಾದ ಮೃತದೇಹವನ್ನು ಟಿ.ವಿ. ವಾಹಿನಿಗಳು ಪ್ರಸಾರ ಮಾಡಿವೆ) ಇವೆಲ್ಲಾ ಏನೇ ಇದ್ದರೂ ನಿರ್ಣಾಯಕ ಕೊನೆಯ ಯುದ್ಧದಲ್ಲಿ ಎಲ್.ಟಿ.ಟಿ.ಇ.ಗೆ ಸೋಲಾಗಿರುವುದು ಸ್ಪಷ್ಟ. ಆದರೆ ಇದು ಯಾವುದೇ ರೀತಿಯಲ್ಲಿ ತಮಿಳು ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದರಲ್ಲಿ ಸಹಾಯ ಮಾಡುವುದಿಲ್ಲ ಎಂಬುದು ಅಷ್ಟೇ ಸ್ಪಷ್ಟ. ಶ್ರೀಲಂಕಾ ಸರ್ಕಾರದ ಸೈನ್ಯ ಮತ್ತು ಎಲ್.ಟಿ.ಟಿ.ಇ. ನಡುವೆ ನಡೆಯುತ್ತಿದ್ದ ಯುದ್ಧ ಈಗಾಗಲೇ ದೊಡ್ಡ ಪ್ರಮಾಣದ ನಿರಾಶ್ರಿತರು ಮುಂತಾದ ಮಾನವೀಯ ಬಿಕ್ಕಟ್ಟು ಸೃಷ್ಟಿಸಿದೆ. ಶ್ರೀಲಂಕಾ ಸರ್ಕಾರ ತಮಿಳು ಸಮಸ್ಯೆಗೆ ಮಿಲಿಟರಿ ಪರಿಹಾರದ ಬಗ್ಗೆ ಮಾತ್ರ ಗಮನ ಕೊಟ್ಟಿದ್ದು ಸಮಸ್ಯೆ ಇನ್ನಷ್ಟು ಉಲ್ಬಣಗೊಳ್ಳುವ ಸಾಧ್ಯತೆ ಇದೆ. ಎಲ್.ಟಿ.ಟಿ.ಇ ನಾಶವಾದರೆ ತಮಿಳು ಸಮಸ್ಯೆ ಶಾಂತಿಯುತವಾಗಿ ಬಗೆಹರಿಸಬಹುದು ಎಂಬ ಶ್ರೀಲಂಕಾ ಸರ್ಕಾರದ ಧೋರಣೆಗೆ ಯಾವುದೇ ಆಧಾರಗಳಿಲ್ಲ. ತಮಿಳರ ಮೇಲೆ ದಶಕಗಳ ಜನಾಂಗೀಯ ತಾರತಮ್ಯ ಮತ್ತು ದಬ್ಬಾಳಿಕೆಗೆ ಪ್ರತಿಕ್ರಿಯೆ ಆಗಿ ಎಲ್.ಟಿ.ಟಿ.ಇ ಬೆಳೆದದ್ದು. ಅದಕ್ಕೆ ಶಾಶ್ವತ ನ್ಯಾಯಯುತ ಪರಿಹಾರ ಹುಡುಕದೆ ಇದ್ದರೆ ಎಲ್.ಟಿ.ಟಿ.ಇ. ಯಂತಹ ಸಂಘಟನೆಗಳು ಹುಟ್ಟಿಕೊಳ್ಳುತ್ತಿರುತ್ತವೆ ಎಂದು ಶ್ರೀಲಂಕಾ ಸರ್ಕಾರ ನೆನಪಿನಲ್ಲಿ ಇಟ್ಟುಕೊಳ್ಳಬೇಕು.

ಜನಾಂಗವಾದದ ವಿರುದ್ಧದ ವಿಶ್ವ ಸಮ್ಮೇಳನಕ್ಕೆ ಅಮೆರಿಕ - ಇಸ್ರೇಲ್ ಬಹಿಷ್ಕಾರ

ಜನಾಂಗವಾದದ ವಿರುದ್ಧ ಜಿನಿವಾದಲ್ಲಿ ್ತೀಚೆಗೆ ನಡೆದ ಎರಡನೇ ವಿಶ್ವ ಸಮ್ಮೇಳನವನ್ನು ಮೆರಿಕ, ಕೆನಡಾ ಮತ್ತು ಇಸ್ರೇಲ್ ಬಹಿಷ್ಕರಿಸಿವೆ. ್ರೇಲಿನ ವಿರುದ್ಧ ಅನಗ್ಯತ ಟೀಕೆ ಮಾಡುವ ಕೆಂಡಾ ಸಮ್ಮೇಳನದ್ದು ಎಂಬ ಆಧಾರರಹಿತ ರಣವನ್ನು ಇದಕ್ಕೆ ಕೊಡಲಾಯಿತು. ಕೆನಡಾ ಮತ್ತು ್ರೇಲ್ ಮೊದಲೇ ಸಮ್ಮೇಳನದಲ್ಲಿ ಗವಹಿಸುವುದಿಲ್ಲ ಎಂದು ಹೇಳಿದ್ದವು. ಆದರೆ ಶ್ ಸರ್ಕಾರದ ವಿಶ್ವಸಂಸ್ಥೆ ದ್ವೇಷಿಸುವ ನೀತಿಯನ್ನು ್ಪದ ಒಬಾಮಾ ಸರ್ಕಾರ ಸಮ್ಮೇಳನದಲ್ಲಿ ಗವಹಿಸುವುದು ಎಂದು ವ್ಯಾಪಕವಾಗಿ ೀಕ್ಷಿಸಲಾಗಿತ್ತು. ಆದರೆ ಕೊನೆಗಳಿಗೆಯಲ್ಲಿ ಅಮೆರಿಕ ಮ್ಮೇಳನದಲ್ಲಿ ಭಾಗವಹಿಸುವುದಿಲ್ಲ ಎಂದಿತು. ಆ ಕ ಬುಶ್ ಸರ್ಕಾರಕ್ಕಿಂತ ನಿರ್ಣಾಯಕವಾಗಿ ್ನವಾದ ಅಂತ ರ್ರಾಷ್ಟ್ರೀಯ ನೀತಿ ಅಂಗೀಕರಿಸಲು ಬಾಮಾ ಇನ್ನೊಂದು ಬಾರಿ ವಿಫಲವಾಗಿದ್ದಾರೆ. ಗಾಗಲೇ ಇರಾಕ್‌ನಿಂದ ಸೈನ್ಯ ವಾಪಸು ಸಿಕೊಳ್ಳುವ ಮತ್ತು ಗ್ವಾಟಾನಾಮೊ ಮಿಲಿಟರಿ ್ಂಪು ಮುಚ್ಚುವ ಒಬಾಮಾ 'ಶೂರ ಮಾತು' ಬರಿ ಅಷ್ಟೇ? 'ಶೂರ ಮಾತು'. ಅದನ್ನು ಜಾರಿ ಮಾಡುವ ಉದ್ದೇಶ ಇಲ್ಲ ಎಂದು ಸ್ಪಷ್ಟವಾಗುತ್ತಿದೆ. ಅಮೆರಿಕ ಸಮ್ಮೇಳನದಲ್ಲಿ ಭಾಗವಹಿಸಬೇಕು. ಮಾತ್ರವಲ್ಲ ವಿಶ್ವ ಸಂಸ್ಥೆ ಮಾನವ ಹಕ್ಕುಗಳ ಮಂಡಳಿಯ ಸದಸ್ಯ ಸಹ ಆಗಬೇಕು ಅಂತ ಅಮೆರಿಕದ ಹಲವು ಮಾನವ ಹಕ್ಕು, ಕರಿಯ ಸಂಘಟನೆಗಳು ತೀವ್ರ ಒತ್ತಡ ತಂದಿದ್ದವು. ಅವರಿಗೂ ಒಬಾಮಾ ನಿರಾಶೆ ಉಂಟು ಮಾಡಿದ್ದಾರೆ.

ದಕ್ಷಿಣ ಆಫ್ರಿಕಾದ ದರ್ಬನ್‌ನಲ್ಲಿ ನಡೆದ ಮೊದಲ ಸಮ್ಮೇಳನದ ನಿರ್ಣಯಗಳ ಜಾರಿ ಮತ್ತು ಮಾನವ ಹಕ್ಕುಗಳ ಇಂದಿನ ಪರಿಸ್ಥಿತಿಯ ವಿಮರ್ಶೆ ಸಮ್ಮೇಳನದ ಉದ್ದೇಶ ಆಗಿತ್ತು. ಆ ಸಮ್ಮೇಳನ ವಸಾಹತುವಾದ, ಗುಲಾಮರ ವ್ಯಾಪಾರ ಮತ್ತು ಜನಾಂಗವಾದ ಹಲವು ಹೊಸ ರೂಪಗಳಲ್ಲಿ ಮುಂದುವರೆಯುತ್ತಿರುವುದನ್ನು ಗುರುತಿಸಿತ್ತು. ಇಸ್ರೇಲಿನ ಜಿಯೋನಿಸಂ ಜನಾಂಗವಾದದ ರೂಪ ಎಂದು ಗುರುತಿಸಿತ್ತು. ಕಳೆದ ಎಂಟು ವರ್ಷಗಳಲ್ಲಿ ಇರಾಕ್ ಮತ್ತು ಅಫ್ಘಾನಿಸ್ತಾನಗಳ ಮೇಲೆ ಅಮೆರಿಕದ ಯುದ್ಧ, ಬುಶ್ ಅಧ್ಯಕ್ಷಗಿರಿಯಲ್ಲಿ ಮಾನವ ಹಕ್ಕುಗಳ ತೀವ್ರ ಉಲ್ಲಂಘನೆ, ಇತ್ತೀಚೆಗೆ ಗಾಜಾ ಪಟ್ಟಿಯ ಮೇಲೆ ಇಸ್ರೇಲಿ ದಾಳೀ - ಮುಂತಾದವು ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿವೆ.' ಮಾನವ ಹಕ್ಕುಗಳು ಮತ್ತು ಜನಾಂಗವಾದದ ಬಗ್ಗೆ ಪಾಶ್ಚಿಮಾತ್ಯ ದೇಶಗಳ ಇಬ್ಬಗೆ ನೀತಿ ಬಡ ದೇಶಗಳಲ್ಲಿ ಇನ್ನಷ್ಟು ಆಕ್ರೋಶ ಉಂಟು ಮಾಡಿದೆ. ಇಸ್ರೇಲಿ ಜನಾಂಗವಾದ ಮತ್ತು ಮಾನವ ಹಕ್ಕುಗಳ ದಮನದ ಬಗ್ಗೆ ಉಸಿರೆತ್ತದ ಪಾಶ್ಚಿಮಾತ್ಯ ದೇಶಗಳು ಆ ಬಗ್ಗೆ ಇರಾನಿ ಅಧ್ಯಕ್ಷರ ಟೀಕಾತ್ಮಕ ಭಾಷಣದ ಬಗ್ಗೆ ದೊಡ್ಡ ಗದ್ದಲ ಎಬ್ಬಿಸಿದರು. ಕೆಲವು ದೇಶಗಳು ಸಮ್ಮೇಳನದಿಂದ ವಾಕೌಟ್ ಸಹ ಮಾಡಿದವು. ಕೊನೆಗೂ ಒಂಬತ್ತು ದೇಶಗಳ ಗೈರು ಹಾಜರಿಯಲ್ಲಿ ಸಮ್ಮೇಳನ ಭಾರೀ ಬಹುಮತದಿಂದ ಅಂತಿಮ ಘೋಷಣೆ ಅಂಗೀಕರಿಸಿತು.

ಈ ನಡುವೆ ವಿಶ್ವ ಸಂಸ್ಥೆ ಮಾನವ ಹಕ್ಕು ಮಂಡಳಿ ಗಾಜಾ ಪಟ್ಟಿಯ ಮೇಲೆ ಇಸ್ರೇಲ್ ನಡೆಸಿದ 22 ದಿನಗಳ ದಾಳಿಯಲ್ಲಿ ನಡೆಸಿದ ಮಾನವ ಹಕ್ಕು ಉಲ್ಲಂಘನೆ ಮತ್ತು ಯುದ್ಧ ಅಪರಾಧಗಳ ಬಗ್ಗೆ ತನಿಖೆಗೆ ನೇಮಿಸಿದ ಸಮಿತಿ ಜತೆ ಸಹಕಾರ ನೀಡುವುದಿಲ್ಲ ಎಂದು ಇಸ್ರೇಲಿ ಸರ್ಕಾರ ಹೇಳಿದೆ.

ಸವಾರಿ.........

ಪುಟ 16 ರಿಂದ

ೋರಾಡುವುದರಿಂದ ಜನರ ಸಮಸ್ಯೆ ರಿಹಾರವಾಗುವುದಿಲ್ಲವೆಂಬುದನ್ನು ಮನಗಂಡು ನರ ಮಧ್ಯೆ ಕೆಲಸ ಮಾಡುವ ಉದ್ದೇಶದಿಂದ ನಕ್ಸಲ್ ೋರಾಟವನ್ನು ತ್ಯಜಿಸಿ ಹೊರಬಂದಿರುತ್ತಾನೆ. ್ನ ಸಹಿಸದ ನಕ್ಸಲ್ ಪಡೆಯ ಮೇಲ್ಪಮಿತಿ ತನ ಹತ್ಯೆಗೆ ಆದೇಶಿಸಿರುತ್ತದೆ.

ಸ್ನೇಹಿತ ತನ್ನ ನಕ್ಸಲ್ ಸ್ನೇಹಿತರಿಗೆ ಅವರು ಳಿದಿರುವ ದಾರಿ ತಪ್ಪೆಂದು ಮನವರಿಕೆ ಮಾಡಿಕೊಡಲು ಯತ್ನಿಸುತ್ತಾನೆ. ಹಿಂಸೆಯಿಂದ ದಲಾವಣೆ ಅಸಾಧ್ಯವೆನ್ನುತ್ತಾನೆ. ಜನರ ಮಧ್ಯೆ ದ್ದು, ಅವರೊಂದಿಗೆ ವ್ಯವಸ್ಥೆಯ ವಿರುದ್ಧ ಧ್ವನಿ ತ್ತಬೇಕಾದ ಅಗತ್ಯತೆಯನ್ನು ವಿವರಿಸುತ್ತಾನೆ.

ಇದಕ್ಕೆ ಕಿವಿಗೊಡದ ನಕ್ಸಲರು ಆತನ ಹತ್ಯೆಗೆ ಮುಂದಾದಾಗ ಅಡ್ಡ ಬರುವ ಅಭಿರಾಮ್ ತಾನು ದುಡ್ಡಿನ ಗುಂಗಿನಲ್ಲಿದ್ದಾಗ ಈ ಸಮಾಜವನ್ನು ರಸ್ಕರಿದ್ದು, ದುಡ್ಡಿನಿಂದ ಏನಾದರೂ ಮಾಡಬಹುದೆಂಬ ಹುಂಬತನವಿದ್ದುದ್ದನ್ನು ತಿಳಿಸಿ, ಈಗ ಜನರ ಮಧ್ಯೆ ಬಂದಾಗ ನನ್ನ ತಪ್ಪಿನ ಅರಿವಾದದ್ದನ್ನು ತಿಳಿಸುತ್ತಾನೆ. ಮತ್ತು ನೀವೂ ಅದೇ ಹುಂಬತನದಲ್ಲಿದ್ದೀರೆಂದು ಜರೆಯುತ್ತಾನೆ. ಆತನನ್ನು ಜನರ ಮಧ್ಯೆ ಇರಲು ಬಿಟ್ಟುಬಿಡಿ ಎಂಬ ಆತನ ವಿನಂತಿಗೂ ನಕ್ಸಲರು ಕರಗುವುದಿಲ್ಲ.

ಗ ಗಾಳಿ ಸೀನು ಅಡ್ಡಬರುತ್ತಾನೆ. ಒಬ್ಬ ಸಾಮಾನ್ಯ ಪ್ರಜೆಯ ಪ್ರತಿನಿಧಿಯಾಗಿ ಮಾತನಾಡುತ್ತಾನೆ. ತನ್ನ ತಂದೆ ನಿಮ್ಮನ್ನು ಮೆಚ್ಚುತ್ತಿದ್ದನೆಂದು, ತಮಗೆ ಕಷ್ಟ ಬಂದಾಗ ನಕ್ಸಲರು ಸಹಾಯ ಮಾಡುತ್ತಾರೆಂದು ಹೇಳುತ್ತಿದ್ದ. ಆವನ ಆರೋಗ್ಯ ಕೆಟ್ಟು, ಆಸ್ಪತ್ರೆ ಸೇರಿದಾಗ ನೀವು ಸಹಾಯಕ್ಕೆ ಬರಲಿಲ್ಲ. ಬಡತನದ ಕಾರಣಕ್ಕೆ ನನಗೆ ಶಾಲೆಗೆ ಸೇರಲಾಗದಿದ್ದಾಗ ನೀವು ಸಹಾಯಕ್ಕೆ ಬರಲಿಲ್ಲ. ನನಗೆ ಕಷ್ಟ ಬಂದಾಗಲೆಲ್ಲ ನಿಮ್ಮನ್ನು ನೆನಪಿಸಿಕೊಳ್ಳುತ್ತಿದ್ದೆ. ಆದರೆ ನೀವು ಯಾವಾಗಲೂ ನನ್ನ ಸಹಾಯಕ್ಕೆ ಬರಲೇ ಇಲ್ಲ. ನಮ್ಮಂತಹ ಬಡವರ ಸಹಾಯಕ್ಕೆ ನೀವು ಯಾವತ್ತೂ ಬರುವುದೆ ಇಲ್ಲವೆಂದ ಮೇಲೆ ಈ ಹೋರಾಟ ಯಾತಕ್ಕಾಗಿ ಎಂದು ಪ್ರಶ್ನಿಸುತ್ತಾರೆ. ಅಷ್ಟರಲೇ ಪೊಲೀಸರು ಧಾಳಿ ನಡೆಸುತ್ತಾರೆ.

ನಕ್ಸಲ್ ಸಮಸ್ಯೆಯನ್ನು ಬಹಳ ಸಮರ್ಥವಾಗಿ ಚಿತ್ರದಲ್ಲಿ ಬಳಸಿಕೊಂಡಿರುವುದು ಮತ್ತು ಅದರ ದುಸ್ಸಾಹಸವಾದಿ ನಿಲುವು, ಅವರಲ್ಲೇ ಇರುವ ದ್ವಂದ್ವ, ಹಿಂಸಾ ಪ್ರವೃತ್ತಿ, ಜನಪರ ಹೋರಾಟದ ಮೇಲೆ ಅವರ ಪ್ರಹಾರ ಈ ಎಲ್ಲಾ ಅಂಶಗಳನ್ನು ಸೂಕ್ಷ್ಮವಾಗಿ ಮತ್ತು ಸಮರ್ಥವಾಗಿ ಬಿಂಬಿಸಿರುವ ಕಥೆಗಾರ ರಾಧಾಕೃಷ್ಣ (ತೆಲುಗು ಮೂಲ 'ಗಮ್ಯಂ'ನ ನಿರ್ದೇಶಕ) ಮತ್ತು ನಿರ್ದೇಶಕರ ಪ್ರಯತ್ನ ನಿಜಕ್ಕೂ ಶ್ಲಾಘನೀಯ.

ಗಾಳಿ ಸೀನನಿಗೆ ಪೊಲೀಸರ ಗುಂಡು ಬೀಳುತ್ತದೆ. ಆದರೂ ನಕ್ಸಲ್ ಸ್ನೇಹಿತ ಮತ್ತು ಅಭಿರಾಮ್ ಅಲ್ಲಿಂದ ತಪ್ಪಿಸಿಕೊಳ್ಳುವಲ್ಲಿ ಸಹಕರಿಸುತ್ತಾನೆ. ಬಹಳ ದೂರ ಸಾಗಿದ ಮೇಲೆ ಪ್ರಾಣ ಬಿಡುವ ಸಂದರ್ಭದಲ್ಲಿ ಅಭಿಯ ಪ್ರೀತಿಯ ಹುಡುಗಿಯ ಫೋಟೋ ನೋಡಲು ಬಯಸಿ, ಫೋಟೋ ನೋಡಿದಾಗ ಆಕೆಯನ್ನು ತಾವು ಬರುವ ದಾರಿಯಲ್ಲಿ ನೋಡಿದ್ದನ್ನು ಹೇಳಿ, ನಿನಗೆ ಸಹಾಯ ಮಾಡಿದ ಖುಷಿಯಲ್ಲಿ ತಾನು ಪ್ರಾಣ ಬಿಡುತ್ತಿರುವುದಾಗಿ ಹೇಳಿ ಸಂತೋಷದಿಂದ ಪ್ರಾಣ ಬಿಡುತ್ತಾನೆ.

ಯಾವುದೇ ಸಂಬಂಧವಿಲ್ಲದಿದ್ದರೂ ಪಯಣದಲ್ಲಿ ಜೊತೆಯಾಗಿ ಕೊನೆಗೆ ತನಗಾಗಿ ಪ್ರಾಣ ತೆತ್ತ ಗಾಳಿಸೀನನ ಸಾವಿಗೆ ಅಭಿರಾಮ್ ಅತೀವ ದುಃಖ ಪಡುತ್ತಾನೆ. ಮತ್ತು ಇಷ್ಟೊತ್ತಿಗಾಗಲೇ ಸ್ನೇಹ, ಪ್ರೀತಿಗಳ ಅರ್ಥವನ್ನು ಅರಿತುಕೊಂಡ ಅಭಿರಾಮ್ ಜೀವನಾನುಭವನ್ನು ಪಡೆದಿರುತ್ತಾನೆ. ತನ್ನ ಪ್ರೀತಿಯ ಹುಡುಗಿ ಜಾನಕಿಯನ್ನು ಭೇಟಿ ಮಾಡಿ, ಅವಳೊಂದಿಗೆ ಹೆಜ್ಜೆ ಹಾಕುವ ನಿರ್ಧಾರದೊಂದಿಗೆ ಚಿತ್ರ ಅಂತ್ಯವಾಗುತ್ತದೆ.

ಚಿತ್ರದ ಪ್ರಮುಖ ಆಕರ್ಷಣೆ ಗಾಳಿ ಸೀನನ ಪಾತ್ರದಲ್ಲಿ ಮಿಂಚಿರುವ ಶ್ರೀನಗರ ಕಿಟ್ಟಿ. ರಘು ಮುಖರ್ಜಿ ಮತ್ತು ಕಮಲಿನಿ ಮುಖರ್ಜಿ ಸಹ ತಮ್ಮ ಗಂಭೀರವಾದ ಅಭಿನಯದಿಂದ ಗಮನ ಸೆಳೆಯುತ್ತಾರೆ. ನವಿರಾದ ಹಾಸ್ಯ ಚಿತ್ರದಲ್ಲಿ ಹಾಸುಹೊಕ್ಕಾಗಿದ್ದರೂ ಸಾದು ಕೋಕಿಲ ಕೂಡಾ ಮಧ್ಯೆ ಒಮ್ಮೆ ಮುಖ ತೋರಿಸಿ ನಗಿಸುತ್ತಾರೆ.

ಚಿತ್ರದಲ್ಲಿ ಸಂಗೀತದ ಅಬ್ಬರವಿದ್ದರೂ ಒಂದೆರೆಡು ಹಾಡು ಇಂಪಾಗಿವೆ. ಕದ್ರಿ ಗೋಪಾಲ್‌ನಾಥ್ ಅವರ ಪುತ್ರ ಮಣಿಕಾಂತ್ ಕದ್ರಿ ಇದರ ಸಂಗೀತ ನಿರ್ದೇಶಕರೆಂಬುದು ವಿಶೇಷ. ಎರಡು ಹಾಡುಗಳಿಗೆ ಮಾತ್ರ ಇ.ಎಸ್. ಮೂರ್ತಿ ಎಂಬುವರು ಸಂಗೀತ ಒದಗಿಸಿದ್ದಾರೆ.

ಕುಟುಂಬ ಸಮೇತರಾಗಿ ಯಾವುದೇ ಮುಜುಗರವಿಲ್ಲದೇ ನೋಡಬಹುದಾದಂತಹ ಚಿತ್ರ 'ಸವಾರಿ'. ಸದಾ ಇಂತಹ ಸದಭಿರುಚಿಯ ಚಿತ್ರಗಳಿಗೆ ಪ್ರಾಶಸ್ತ್ಯ ಕೊಡುವ ನಿರ್ಮಾಪಕ ರಾಮೋಜಿರಾವ್ ಅವರಿಗೆ ಅಭಿನಂದನೆ ಸಲ್ಲಬೇಕು. ○

ಏನಿದು ಅನಿರೀಕ್ಷಿತ 'ಶೃತಿ'?


ಚಿತ್ರನಟಿ ಶೃತಿ ಇತ್ತೀಚೆಗೆ ಮಾಧ್ಯಮಗಳಲ್ಲಿ ಸುದ್ದಿಯಾದರು. ಚಲನಚಿತ್ರ ನಿರ್ದೇಶಕರಾದ ಪತಿ ಮಹೇಂದರ್ ಅವರಿಂದ ವಿಚ್ಛೇದನ ಕೋರಿ ಅವರು ನ್ಯಾಯಾಲಯದ ಮೆಟ್ಟಿಲು ಹತ್ತಿದ್ದಾರೆ ಹಾಗೂ ಭವಿಷ್ಯಕ್ಕೆ ಅವರು ಬಾಳ ಸಂಗಾತಿಯಾಗಿ ಬೇರೊಬ್ಬರನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಇದನ್ನು ಅವರೇ ಸ್ಪಷ್ಟಿಸಿದ್ದಾರೆ.

ಇದು ಸಂಪೂರ್ಣವಾಗಿ ಶೃತಿಯವರ ವೈಯಕ್ತಿಕ ವಿಚಾರ. ತಮ್ಮ ವೈಯಕ್ತಿಕ ಜೀವನದ ಕುರಿತು ಯಾವುದೇ ತೀರ್ಮಾನ ಕೈಗೊಳ್ಳುವ ಹಕ್ಕು ಅವರಿಗಿದೆ. ಸ್ವತಃ ಶೃತಿಯವರೇ ಇದನ್ನು ಬಹಿರಂಗಪಡಿಸುತ್ತಿರುವುದರಿಂದ ಇದು ಮಾಧ್ಯಮಗಳಿಗೆ ಒಂದು ಸಣ್ಣ ಸುದ್ದಿಗೆ ಅರ್ಹವಾದ ಸಮಾಚಾರ ಅಷ್ಟೆ.

ಉಹೂಂ, ನಮ್ಮ ಮಾಧ್ಯಮಗಳೂ ಹಾಗೆ ಭಾವಿಸಿದಂತಿಲ್ಲ. ಭಾರತೀಯ ಜನತಾ ಪಕ್ಷದ ಕೆಲವು ಮುಖಂಡರೂ ಹಾಗೆ ಭಾವಿಸಿಲ್ಲ. ಮಹೇಂದರ್, ಶೃತಿ ಇಬ್ಬರೂ ಇತ್ತೀಚಿನವರೆಗೂ ಬಿಜೆಪಿ ಪಕ್ಷದ ಪರವಾಗಿ ಪ್ರಚಾರದಲ್ಲಿದ್ದು ಸಕ್ರಿಯ ರಾಜಕಾರಣದಲ್ಲಿ ತೊಡಗಿರುವವರು. ಬಿಜೆಪಿ ರಾಜ್ಯಾಧ್ಯಕ್ಷ ಸದಾನಂದಗೌಡರು ಮಹೇಂದರ್-ಶೃತಿ ನಡುವೆ ರಾಜಿ-ಹೊಂದಾಣಿಕೆಗೆ ಪ್ರಯತ್ನಿಸಿದ್ದರಂತೆ. ಇಬ್ಬರೂ ಪರಿಚಿತರಿರುವುದರಿಂದ ಹಾಗೆ ಮಾಡುವುದರಲ್ಲಿ ತಪ್ಪಿಲ್ಲವೇನೋ?

ಆದರೆ ಮಾಜಿ ಶಾಸಕಿ, ಬಿಜೆಪಿಯ ನಾಯಕಿ ಪ್ರಮೀಳಾ ನೇಸರ್ಗಿಯವರಂತೂ ಕೆಲವು ಅತಿರೇಕದ ಮಾತನ್ನಾಡಿದ್ದಾರೆ. ಶೃತಿಯವರ ನಿರ್ಧಾರ ತಪ್ಪು. ಅವರನ್ನು ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಸ್ಥಾನದಿಂದ ತೆಗೆಯುತ್ತೇವೆ... ಇತ್ಯಾದಿ ಇತ್ಯಾದಿ... ತೀರಾ ವೈಯಕ್ತಿಕ ವಿಷಯಕ್ಕೆ ಸಂಬಂಧಿಸಿದ ನಿರ್ಧಾರವನ್ನು ಆಧರಿಸಿ ಇಂತಹ ಮಾತನ್ನಾಡುವುದು ಬಿಜೆಪಿಯ 'ಸಂಸ್ಕೃತಿ' ಏನು ಎಂಬುದಕ್ಕೆ ಸಾಕ್ಷಿಯಾಗಿದೆ. ಅಳುವ, ಗೋಳಾಡುವ, ಸೋಲುವ, ಶರಣಾಗುವ ಕಣ್ಣೀರ ಕೋಡಿ ಹರಿಸುವ ಪಾತ್ರಗಳಲ್ಲೇ 'ತವರು', 'ತಾಳಿ', ಬ್ರ್ಯಾಂಡ್‌ನ ಸಿನಿಮಾಗಳಲ್ಲೇ ಶೃತಿಯವರನ್ನು ಹೆಚ್ಚಾಗಿ ನೋಡಿದ ಒಂದು ವರ್ಗದ ಪ್ರೇಕ್ಷಕ ವಿಭಾಗವನ್ನು ಶೃತಿಯವರ ನಿರ್ಧಾರ ಚಕಿತಗೊಳಿಸಿದೆ.

ಸಿನಿಮಾಗಳಲ್ಲಿ ನಟಿಸುವ ಪಾತ್ರಗಳನ್ನು ನೋಡಿ ನಟರ ವ್ಯಕ್ತಿತ್ವ, ನಿಲುವನ್ನು ಕಲ್ಪಿಸಿಕೊಂಡು, ವಾಸ್ತವಿಕ ಜೀವನದಲ್ಲಿ ಅವರು ಅದಕ್ಕಿಂತ ಭಿನ್ನವಾಗಿ ನಿರ್ಧಾರ ಕೈಗೊಂಡಾಗ 'ಚಕಿತ'ಗೊಳ್ಳುವ ಪ್ರೇಕ್ಷಕರ ಮುಗ್ಧತೆಗೆ ಏನನ್ನುವುದು! ಇನ್ನೂ ಶೃತಿಯ ಆಯ್ಕೆಯ ಬಗೆಗೆ ಹಲವು ಪತ್ರಿಕೆಗಳು ತಮ್ಮ ಅಭಿಪ್ರಾಯ ಬರೆದುಕೊಂಡಿವೆಯಂತೆ. ಅದು ನಮಗೆ ಸಂಬಂಧಪಟ್ಟ ವಿಷಯವಲ್ಲ ಬಿಡಿ.



ಸವಾರಿ - ಪಯಣದಿಂದ ಜೀವನಾನುಭವ

ಮಾಧ್ಯಮ ದೊರೆ ರಾಮೋಜಿರಾವ್ ತಮ್ಮ ಉಷಾಕಿರಣ್ ಮೂವೀಸ್ ಅಡಿಯಲ್ಲಿ ಹೊಸಬರಿಗೆ, ಪ್ರತಿಭಾವಂತರಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಅನೇಕ ಹೊಸ ಪ್ರತಿಭೆಗಳಿಗೆ ತೆಲುಗು ಚಿತ್ರರಂಗದಲ್ಲಿ ಅವಕಾಶ ನೀಡುತ್ತಿದ್ದಾರೆ. ಅಂತಹ ಕೆಲವು ಚಿತ್ರಗಳು ಕನ್ನಡಕ್ಕೂ ಅವರದೇ ಬ್ಯಾನರಿನಡಿ ಯಲ್ಲಿ ಬಂದಿವೆ. ಇಲ್ಲೂ ಹೊಸ ಪ್ರತಿಭೆಗಳಿಗೆ ಹೆಚ್ಚಿನ ಅವಕಾಶ ನೀಡುತ್ತಿರುವುದು ವಿಶೇಷ. ಅಂತಹ ಇನ್ನೊಂದು ಚಿತ್ರವೇ 'ಸವಾರಿ'. ಇದು ತೆಲುಗಿನ 'ಗಮ್ಯಂ'ನ ರೀಮೇಕ್.

ಇದೊಂದು ಸಾಮಾನ್ಯ ಪ್ರೇಮ ಕಥೆಯೇ ಆದರೂ ಚಿತ್ರದ ಉದ್ದೇಶವೇ ಬೇರೆ ಇದೆ. ಅಭಿರಾಮ್ (ರಘು ಮುಖರ್ಜಿ) ಅಗರ್ಭ ಶ್ರೀಮಂತರ ಮಗ. ಹೈ-ಫೈ ಸಂಸ್ಕೃತಿಯ ಅವನಿಗೆ ಬಡಬಗ್ಗರರನ್ನು ಕಂಡರೆ ತೀವ್ರ ಅಸಡ್ಡೆ. ಆದರೆ ಮಧ್ಯಮವರ್ಗ, ಬಡಜನರ ಬಗ್ಗೆ ಕಾಳಜಿ ಹೊಂದಿದ ಜಾನಕಿ (ಕಮಲಿನಿ ಮುಖರ್ಜಿ)ಯ ಮೇಲೆ ಅವನಿಗೆ ಪ್ರೀತಿ. ಆಕೆ ಡಾಕ್ಟರ್. ಬಡಬಗ್ಗರ ಬೀದಿಗಳಲ್ಲೇ ಅವಳ ಕಾಯಕ. ಅವನಿಗದು ಅಸಹ್ಯ. ಆಲೋಚನೆ ಯಲ್ಲಾಗಲಿ, ಜೀವನಶೈಲಿ ಯಲ್ಲಾಗಲೀ ಆತ ಹೊಂದಾಣಿಕೆಯಾಗದ್ದನ್ನು ಮನಗಂಡ ಜಾನಕಿ ಆತನನ್ನು ತಿರಸ್ಕರಿಸಿ ದೂರ ಹೋಗುತ್ತಾಳೆ.



ನಿಜಕ್ಕೂ ಆಕೆಯನ್ನು ತುಂಬಾ ಪ್ರೀತಿಸುತ್ತಿದ್ದ ಅಭಿರಾಮ್ ಅವಳನ್ನು ಹುಡುಕಲು ಹೊರಡುತ್ತಾನೆ. ಈ ಪಯಣವೇ 'ಸವಾರಿ'ಯ ಮುಖ್ಯ ಹೂರಣ. ಜೀವನದಲ್ಲಿ ದುಡ್ಡೇ ಮುಖ್ಯವಲ್ಲ. ಬದುಕಿಗೆ ಅಗತ್ಯವಾದುದು ಇನ್ನೂ ಬೇರೆಯೇ ಇದೆ. ಅದು ಸ್ನೇಹ, ಪ್ರೀತಿ, ಸಹಬಾಳ್ವೆ ಎಂಬ ಸಂದೇಶವನ್ನು ಆಕರ್ಷಣೀಯ ಶೈಲಿಯಲ್ಲಿ ಪ್ರೇಕ್ಷಕರಿಗೆ ಮುಟ್ಟಿಸಲು ಯತ್ನಿಸಿದ್ದಾರೆ ನಿರ್ದೇಶಕ ಜಾಕೊಬ್ ವರ್ಗೀಸ್. ಕಚಗುಳಿ ಯಿಡುವಂತಹ ಸಂಭಾಷಣೆಯ ಮೂಲಕ ಇವರಿಗೆ ಉತ್ತಮ ಸಾಥ್ ನೀಡಿದ್ದಾರೆ ಮಂಜು ಮಾಂಡವ್ಯ.

ಗಾಳಿ ಸೀನು (ಶ್ರೀನಗರ ಕಿಟ್ಟಿ) ಅಭಿರಾಮ್‌ಗೆ ಪಯಣದಲ್ಲಿ ಜೊತೆಯಾಗುತ್ತಾನೆ. ಅಭಿರಾಮ್‌ನ ದುಬಾರಿ ಬೈಕ್‌ನ ಮೇಲೆ ಅವನ ಕಣ್ಣು. ಆತನೊಬ್ಬ ಸಣ್ಣ ಕಳ್ಳನಾದರೂ ಗುಣಸ್ವಭಾವದಲ್ಲಿ ಸಹೃದಯನೇ. ಅವನ ನಡವಳಿಕೆಗಳೇ ಅಭಿರಾಮ್‌ನ ಮೇಲೆ ಸಾಕಷ್ಟು ಪ್ರಭಾವ ಬೀರುತ್ತದೆ. ಜೀವನಕ್ಕೆ ಬೇಕಾದ ಅನೇಕ ಪಾಠಗಳನ್ನು ಕಲಿಸಿಕೊಡುತ್ತದೆ. ಗಾಳಿಸೀನು ಆತನ ಪ್ರೀತಿಯ ವಿಷಯ ತಿಳಿದು, ಬೈಕ್ ಕದಿಯುವ ಆಸೆ ಕೈಬಿಟ್ಟು ಕೊನೆವರೆಗೂ ಅವನ ಜೊತೆಯಲ್ಲಿರುವುದಾಗಿ ಮಾತುಕೊಡುತ್ತಾನೆ.

ಚಿತ್ರ ಅಂತಿಮ ಹಂತದಲ್ಲಿ ಅನಿರೀಕ್ಷಿತ ತಿರುವೊಂದನ್ನು ಪಡೆದುಕೊಳ್ಳುತ್ತದೆ. ಇವರಿಬ್ಬರೂ ನಕ್ಸಲೈಟ್‌ರ ಬಲೆಗೆ ಸಿಕ್ಕಿಬೀಳುತ್ತಾರೆ. ಹಿಂದೊಮ್ಮೆ ಪರಿಚಯವಾಗಿದ್ದ ಸ್ನೇಹಿತನೊಡನೆ ಮಾತನಾಡುವಾಗ ನಕ್ಸಲೈಟರು ಅವರನ್ನು ಅಪಹರಿಸುತ್ತಾರೆ. ಅವರ ಉದ್ದೇಶ ಆ ಸ್ನೇಹಿತನನ್ನು ಹತ್ಯೆಗೈಯುವುದಾಗಿರುತ್ತದೆ. ಜೊತೆಯಲ್ಲಿ ಇವರೂ ಇದ್ದರೆಂಬ ಕಾರಣಕ್ಕೆ ವಿನಾಕಾರಣ ಅವರನ್ನು ಎಳೆದೊಯ್ಯುತ್ತಾರೆ. ಆ ಸ್ನೇಹಿತ ಹಿಂದೆ ನಕ್ಸಲೈಟ್ ಆಗಿದ್ದು, ಕಾಡಿನಲ್ಲಿ ಬಂದೂಕು ಹಿಡಿದು

ಪುಟ 15ಕ್ಕೆ

ಮುಂದುವರೆದ ಚಂದ್ರದರ್ಶನ : ಚಂದ್ರಯಾನ - 1 ಯಶೋಗಾಥೆ



ನಮ್ಮ ಬಾಹ್ಯಾಕಾಶ ಸಂಸ್ಥೆ ಇಸ್ರೋ ಕಳೆದ ಆರು ತಿಂಗಳಲ್ಲಿ ಚಂದ್ರನಲ್ಲಿಗೆ ಹಾರಿಬಿಟ್ಟ ಚಂದ್ರಯಾನ-1 ಗಗನನೌಕೆಯು ನಮಗೆ ಮಾಹಿತಿ ಮತ್ತು ಭೂಮಿ-ಚಂದ್ರರ ಚಿತ್ರಗಳ ಆಗರವನ್ನೇ ಕಳುಹಿಸಿಕೊಡುತ್ತಿದೆ. ಅದು ಚಂದ್ರನನ್ನು ತಲುಪಿದ 100 ದಿನಗಳ ಭರ್ಜರಿ ಯಶಸ್ಸನ್ನು ಇಸ್ರೋ ಇತರೆ ದೇಶಗಳ ಬಾಹ್ಯಾಕಾಶ ಸಂಸ್ಥೆಗಳೊಂದಿಗೆ ಹಂಚಿಕೊಳ್ಳುವುದರೊಳಗೆ 200 ದಿನಗಳ ಯಶೋಗಾಥೆಯ ಸಮಾರಂಭಗಳನ್ನು ದೇಶದ ಹಲವು ವಿಜ್ಞಾನ ಸಂಸ್ಥೆಗಳು ಆಚರಿಸುತ್ತಿವೆ.

ಗಗನನೌಕೆಯಲ್ಲಿ ಏರಿದ ಉಷ್ಣಾಂಶದ ಭೀತಿ

ಚಂದ್ರಯಾನ ಗಗನನೌಕೆಯು ನಿಗದಿಪಡಿಸಿದ ಕಕ್ಷೆಯನ್ನು ತಲುಪಿದ ಒಂದು ತಿಂಗಳೊಳಗೆ ಅದರೊಳಗಿನ ಉಷ್ಣಾಂಶ ಏರಿಕೆಯಾಗಿ ಆತಂಕ ಉಂಟಾಗಿತ್ತು. ಇದಕ್ಕೆ ಕಾರಣವೆಂದರೆ, ಗಗನನೌಕೆಯು ಸೂರ್ಯನಿಂದ ಚಂದ್ರನ ಮೇಲೆ ಬೆಳಕು ಬೀಳುವ ದಿಕ್ಕಿನಲ್ಲಿದ್ದುದ್ದರಿಂದ, ಸೂರ್ಯ ಮತ್ತು ಚಂದ್ರನಿಂದ ಹೊರಬೀಳುವ ಅತಿನೇರಳೆ ವಿಕಿರಣಗಳನ್ನು ಅದು ಪಡೆಯುತ್ತಿತ್ತು. ಗಗನನೌಕೆಯನ್ನು ಸುಮಾರು 20 ಡಿಗ್ರಿಗಳಷ್ಟು ಬೇರೆಡೆ ತಿರುಗಿಸಿ ಮತ್ತು ಕೆಲವು ಉಪಕರಣಗಳ ಸ್ವಿಚ್ ಆಫ್ ಮಾಡುವ ಮೂಲಕ ಅದರಲ್ಲಿನ ಉಷ್ಣಾಂಶವನ್ನು ಸುಮಾರು 10 ಡಿಗ್ರಿಗಳಷ್ಟು ತಗ್ಗಿಸಲಾಯಿತು.





ಭೂಮಿ-ಚಂದ್ರರ ಮಾಹಿತಿ ರವಾನೆ

ಗಗನನೌಕೆಯಿಂದ ಚಂದ್ರನ ಮೇಲೆ ಪಾದಾರ್ಪಣೆ ಮಾಡಿ ಚಂದ್ರನ ಮೇಲ್ಮೈಯನ್ನು ಶೋಧಿಸುತ್ತಿರುವ ಖನಿಜ ಶೋಧಕವು ಕಬ್ಬಿಣ ಮತ್ತು ಪೈರಾಕ್ಸಿನ್‌ನಂತಹ ಕಬ್ಬಿಣ ಹೊಂದಿರುವ ಖನಿಜಗಳು ಹೇರಳ ಪ್ರಮಾಣದಲ್ಲಿರುವುದನ್ನು ರುಜುವಾತುಪಡಿಸಿದೆಯಲ್ಲದೆ, ಚಂದ್ರನಲ್ಲಿನ ಶಿಲೆ ಮತ್ತು ಖನಿಜಗಳಲ್ಲಿ ಉಂಟಾಗುತ್ತಿರುವ ಬದಲಾವಣೆಯನ್ನು ಅದು ಗುರುತಿಸಿದೆ. ಚಂದ್ರಯಾನ ಗಗನನೌಕೆಯು ಹೊಂದಿರುವ ಕ್ಯಾಮೆರಾವು ಅದು ತಲುಪಿದ 75 ದಿನಗಳಲ್ಲಿ ಸುಮಾರು 40,000 ಚಿತ್ರಗಳನ್ನು ನಮಗೆ ಉಣಬಡಿಸಿದೆ, ಅಂದರೆ ದಿನವೊಂದಕ್ಕೆ ಸುಮಾರು 535 ಚಿತ್ರಗಳನ್ನು ಕಳುಹಿಸಿಕೊಟ್ಟಿದೆ. ಇದರಲ್ಲಿ ಭೂಮಿಯ ಪೂರ್ಣ ಪ್ರಮಾಣದ ಚಿತ್ರಗಳನ್ನು ಮತ್ತು ನಮ್ಮ ದೇಶವನ್ನು ಕೇಂದ್ರವಾಗುಳ್ಳ ಏಷ್ಯಾ, ಆಫ್ರಿಕಾದ ಭಾಗಗಳು ಮತ್ತು ಆಸ್ಟ್ರೇಲಿಯಾ ದೇಶಗಳನ್ನು ಒಳಗೊಂಡ ಚಿತ್ರಗಳನ್ನು ಅದು ಸೆರೆಹಿಡಿದಿದೆ. ಚಂದ್ರನ ಮೇಲ್ಮೈ ಮೇಲೆ ಅಪೋಲೋ ಗಗನನೌಕೆಯು ಇಳಿದಿದ್ದ ಸ್ಥಳದಿಂದ ಹೊರಹೊಮ್ಮುತ್ತಿರುವ ಅತಿ ಸಣ್ಣ ಪ್ರಮಾಣದ ಕ್ಷ-ಕಿರಣಗಳನ್ನು ಗುರುತಿಸಿ ವಿಜ್ಞಾನಿಗಳಿಗೆ ಅಚ್ಚರಿ ಮೂಡಿಸಿದೆ. ಕ್ಷ-ಕಿರಣಗಳ ಮೂಲಕ ಚಂದ್ರನ ಉಗಮ ಮತ್ತು ವಿಕಾಸವನ್ನು ಅಂದಾಜು ಮಾಡಬಹುದು. ಚಂದ್ರನಲ್ಲಿರುವ ಬೆಟ್ಟ, ಗುಡ್ಡ, ಕಣಿವೆ, ಪರ್ವತ ಇವೆಲ್ಲವನ್ನು ಜಾಲಾಡಿ ಅಲ್ಲಿನ ಮಾಹಿತಿಗಳು ನಮಗೆ ರವಾನೆಯಾಗುತ್ತಿವೆ.

ನೀರು ಮಂಜುಗಡ್ಡೆಯುಳ್ಳ ಪ್ರದೇಶಗಳನ್ನು ಶೋಧಿಸುವಲ್ಲಿ ಚಂದ್ರಯಾನ-1 ಗಗನನೌಕೆಯು ಉತ್ತಮ ಸಾಮರ್ಥ್ಯ ಹೊಂದಿದೆಯೆಂದು ಅಮೇರಿಕಾದ ಬಾಹ್ಯಾಕಾಶ ಸಂಸ್ಥೆ ನಾಸಾ ತಿಳಿಸಿದೆ.

ಚಂದ್ರಯಾನ-2 ನ್ನು ಹಾರಿಬಿಡಲು



ರೂಪುರೇಷೆಗಳು

ಚಂದ್ರಯಾನ-1 ರ ಯಶಸ್ಸಿನಿಂದ ಉತ್ಸುಕಗೊಂಡಿರುವ ಇಸ್ರೋ 2012ರ ವೇಳೆಗೆ ರೂ. 425 ಕೋಟಿ ವೆಚ್ಚದ ಮೋಟಾರು-ಚಾಲಿತ ರೋವರ್ (ಚಂದ್ರನ ಮೇಲೆ ಓಡಾಡಬಲ್ಲ ವಾಹನ)ನ್ನು ಚಂದ್ರನಲ್ಲಿಗೆ ಹಾರಿಬಿಡಲು ರಷ್ಯಾದ ಬಾಹ್ಯಾಕಾಶ ಸಂಸ್ಥೆ 'ರಾಸ್‌ಕಾಸ್ಮೋಸ್' ಜೊತೆಗೆ ತಯಾರಿ ನಡೆಸುತ್ತಿದೆ. 30ರಿಂದ 100ಕೆಜಿ ತೂಕ ಹೊಂದಿರುವ ಈ ರೋವರ್‌ನ ಜೀವಾವಧಿ ಕೇವಲ ಒಂದು ತಿಂಗಳು ಮಾತ್ರ. ಅಂತಹ ರೋವರ್ ಚಂದ್ರನ ಮೇಲೆ ಓಡಾಡಿ ಮಣ್ಣು ಅಥವಾ ಶಿಲೆಗಳ ಮಾದರಿಯನ್ನು ತೆಗೆದುಕೊಂಡು ಅಲ್ಲಿಯೇ ರಾಸಾಯನಿಕ ವಿಶ್ಲೇಷಣೆ ಮಾಡಬಲ್ಲದು ಮತ್ತು ಅದರ ಕುರಿತ ಮಾಹಿತಿಗಳನ್ನು ಚಂದ್ರನ ಮೇಲಿರುವ ಚಂದ್ರಯಾನ-2 ಗಗನನೌಕೆಗೆ ರವಾನಿಸುತ್ತದೆ. ನಂತರ ಚಂದ್ರಯಾನ-2 ಗಗನನೌಕೆಯಿಂದ ಭೂಮಿಗೆ ಈ ಮಾಹಿತಿ ರವಾನೆಯಾಗುತ್ತದೆ.

ಚಂದ್ರಯಾನ-2ನ್ನು 'ಸಾಗರ ಉಪಗ್ರಹ' ವೆಂದೇ ಕರೆಯಲಾಗುತ್ತಿದ್ದು, ಅದು ಸಾಗರದ ಮೇಲ್ಮೈ ಉಷ್ಣಾಂಶ ಮತ್ತು ಸಾಗರದ ಅಲೆಗಳ ಬಣ್ಣವನ್ನು ಗುರುತಿಸಲು ಸಹಾಯ ಮಾಡುವುದು.

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027 Editor : S.Y.GURUSHANTH